Swabhimani Sahakari

Pages : 28 / 20₹

# ಸ್ವಾಭಿಮಾನಿ ಸಹಕಾರಿ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸೌಹಾರ್ದ ಸಹಕಾರಿ ಚಳುವಳಿಯ
ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸಂಯುಕ್ತ ಸಹಕಾರಿಯ
ರಜತ ಮಹೋತ್ಸವ 2026

Volume - 23
Issue - 05
May - 2026



ಮೇ ೦೧
ಬುದ್ಧ ಪೂರ್ಣಿಮಾ

ಬುದ್ಧಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ

ಮೇ ೦೧
ಕಾರ್ಮಿಕರ ದಿನಾಚರಣೆ



ಮೇ ೧೦
ವಿಶ್ವ ಅಮ್ಮಂದಿರ ದಿನ



ಮೇ 28
ಬಕ್ರೀದ್



ಸೌಹಾರ್ದ ಸಹಕಾರಿಗಳ ಸಂಖ್ಯೆ: 6753

ಸೌಹಾರ್ದ ಇ ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ: 1763

# ಉತ್ತಮ ಅಭ್ಯಾಸ ಹಾಗೂ ಸಂಸ್ಕಾರಗಳು ಸಹಕಾರ ಸಂಸ್ಥೆಗಳ ಅಭಿವೃದ್ಧಿಯ ಮಾನದಂಡಗಳು.



ಜಿ. ನಂಜನಗೌಡ

> ರಾಜ್ಯದ ಎಲ್ಲ ಸೌಹಾರ್ದ ಸಹಕಾರಿ ಬಂಧುಗಳಿಗೆ ಕಾರ್ಮಿಕರ ದಿನಾಚರಣೆ, ಬುದ್ಧ ಪೂರ್ಣಿಮಾ ಹಾಗೂ ಬಕ್ರೀದ್ ಹಬ್ಬದ ಹಾರ್ದಿಕ ಶುಭಾಶಯಗಳು.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿ ಬಂಧುಗಳಿಗೆ ಕಾರ್ಮಿಕರ ದಿನಾಚರಣೆ, ಬುದ್ಧ ಪೂರ್ಣಿಮಾ ಹಾಗೂ ಬಕ್ರೀದ್ ಹಬ್ಬದ ಹಾರ್ದಿಕ ಶುಭಾಶಯಗಳು.

ಆತ್ಮೀಯರೆ, ವಿಶ್ವದ ಅರ್ಥವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಹೆಚ್ಚಿನ ಮಹತ್ವ ಪಡೆಯುತ್ತಿದೆ. ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣದಂತಹ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಮಹತ್ವ ಪಡೆದು ಕಾರ್ಯನಿರ್ವಹಿಸುತ್ತಿರುವುದು ಸಹಕಾರಿಗಳು ಹೆಮ್ಮೆ ಪಡುವ ವಿಷಯ. ವಿಶ್ವ ಸಂಸ್ಥೆ ಮತ್ತು ಅಂತರರಾಷ್ಟ್ರೀಯ ಸಹಕಾರಿ ಮೈತ್ರಿ ಸಂಸ್ಥೆಯವರು ಸಹಕಾರಿ ಕ್ಷೇತ್ರದ ಬಗ್ಗೆ ನಡೆಸುತ್ತಿರುವ ಅಧ್ಯಯನಗಳು, ಅಧ್ಯಯನಗಳ ನಂತರ ಅವರು ನೀಡುವ ಮಾರ್ಗಸೂಚಿಗಳು ಸಹಕಾರ ಕ್ಷೇತ್ರದ ಕಾಯನಿರ್ವಹಣೆಯ ಮೇಲೆ ಸಾಕಷ್ಟು ಪ್ರಭಾವ ಬೀರುತ್ತ ಸಹಕಾರಿ ಕ್ಷೇತ್ರಕ್ಕೆ ಹೆಚ್ಚಿನ ಚೈತನ್ಯ ನೀಡುತ್ತಿವೆ. ಭಾರತದಲ್ಲೂ ಸಹಕಾರ ಕ್ಷೇತ್ರ ಅಭಿವೃದ್ಧಿಯ ಪರ್ವಕಾಲದಲ್ಲಿದೆ. ಕೇಂದ್ರದಲ್ಲಿ ಪ್ರತ್ಯೇಕ ಸಹಕಾರ ಸಚಿವಾಲಯ ಪ್ರಾರಂಭವಾದ ನಂತರ ಸಹಕಾರ ಕ್ಷೇತ್ರದ ಚಟುವಟಿಕೆಗಳಿಗೆ ಹೆಚ್ಚಿನ ಪುಷ್ಠಿ ದೊರಕಿದೆ. ಸಹಕಾರ ಕ್ಷೇತ್ರವನ್ನು ದೇಶದ ಅರ್ಥ ವ್ಯವಸ್ಥೆಯ ಮುಖ್ಯ ವಾಹಿನಿಯಲ್ಲಿ ತರುವ ಅವಶ್ಯಕತೆಯನ್ನು ಗಮನಿಸಿದ ಕೇಂದ್ರ ಸಹಕಾರ ಸಚಿವಾಲಯ ಹಲವಾರು ಅಭಿವೃದ್ಧಿ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸ್ವಾಗತಾರ್ಹ.

ಸಹಕಾರ ಸಂಸ್ಥೆಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತವೆ ಅಂದರೆ ಅಲ್ಲಿ ಸಹಕಾರಿ ಸಂಸ್ಥೆಯ ಉತ್ತಮ ಅಭ್ಯಾಸಗಳು ಮತ್ತು ಸಂಸ್ಕಾರ ವಿರುತ್ತದೆ ಎಂಬುದು ಸರ್ವಸಮ್ಮತ ಅಭಿಪ್ರಾಯ (co-operatives will survive if they have strong culture and good practices) ಸಮಾನ ಮನಸ್ಕರು ಸೇರಿ ಸಮಾನ ಉದ್ದೇಶಗಳ ಈಡೇರಿಕಾಗಿ ಸಮಾನತೆಯ ತಳಹದಿಯ ಮೇಲೆ ಸಹಕಾರ ತತ್ವಗಳನ್ನು ಅಳವಡಿಸಿ ಪ್ರಾರಂಭಿಸುವ ಸಹಕಾರಿ ಸಂಸ್ಥೆಗಳು ಉತ್ತಮ ಸಂಸ್ಕಾರವನ್ನು ಹೊಂದಿರುವುದು ಅವಶ್ಯಕ. ಕಾನೂನಿನ ವ್ಯಾಪ್ತಿ ಮೀರದಂತೆ ಸದಸ್ಯರ ಹಿತಕ್ಕೆ ಪ್ರಾಮುಖ್ಯತೆ. ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಯವರು ಸಹಕಾರಿಯ ಸದಸ್ಯರ ಹಿತಕ್ಕೆ ಆದ್ಯತೆ. ಸದಸ್ಯರು ಸಹಕಾರಿ ಚಟುವಟಿಕೆಗಳಲ್ಲಿ ಸಕ್ರೀಯ ಪಾಲುಗಾರಿಕೆ ಮತ್ತು ಸಹಕಾರಿಗೆ ನಿಷ್ಠೆ ಇವು ಉತ್ತಮ ಸಂಸ್ಕಾರವೆನಿಸುತ್ತೇವೆ.

ಅದೇ ರೀತಿ ಸಹಕಾರಿ ಸಂಸ್ಥೆಗಳಲ್ಲಿ ಉತ್ತಮ ಅಭ್ಯಾಸಗಳು ಅವಶ್ಯಕ. ಸದಸ್ಯರೂಡನೆ ನಿರಂತರ ಸಂಪರ್ಕ. ಸದಸ್ಯರ ಬೇಕು ಬೇಡಿಕೆಗಳಿಗೆ ಸ್ಪಂದಿಸುವುದು, ಸದಸ್ಯರು ಸಹಕಾರಿಯ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದು. ಆಡಳಿತ ಮಂಡಳಿ ಸದಸ್ಯರು ಸಭೆಗಳಲ್ಲಿ ಸಕ್ರೀಯ ಭಾಗವಹಿಸುವಿಕೆ. ಸಹಕಾರಿಯ ಪ್ರಗತಿಪರ ಚಟುವಟಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ಮಂಡಿಸುವುದು, ಸದಸ್ಯರೊಡನೆ, ಸಿಬ್ಬಂದಿಯವರೊಡನೆ ಉತ್ತಮ ಆಂತರಿಕ ಸಂಬಂಧಗಳ ನಿರ್ವಹಣೆ, ಮಾನವೀಯ ಮೌಲ್ಯಗಳ ನಿರ್ವಹಣೆ, ಆದಾಯ ಸೋರಿಕೆ ಯಾಗದಂತೆ ಹಣಕಾಸು ಶಿಸ್ತು ನಿರ್ವಹಣೆ, ಪಾರದರ್ಶಕ ಮತ್ತು ವೃತ್ತಿಪರ ಆಡಳಿತ ಇವೆಲ್ಲವೂ ಉತ್ತಮ ಅಭ್ಯಾಸಗಳೆನಿಸುತ್ತವೆ. ಇವುಗಳೇ ಸಹಕಾರಿ ಸಂಸ್ಥೆಯ ಆರೋಗ್ಯ ಹಾಗೂ ಅಭಿವೃದ್ಧಿಯ ಮಾನದಂಡಗಳು. ಆದ್ದರಿಂದ ಉತ್ತಮ ಸಂಸ್ಕಾರ ಮತ್ತು ಅಭ್ಯಾಸಗಳನ್ನು ಸಹಕಾರಿಗಳು ಅನುಸರಿಸುವುದು ಅಗತ್ಯ.

ಸ್ವಾಭಿಮಾನಿ ಸಹಕಾರಿ ಸಂಪಾದಕ ಮಂಡಳಿ

ಶ್ರೀ ಜಿ. ನಂಜನಗೌಡ
ಗೌರವ ಅಧ್ಯಕ್ಷರು
ಶ್ರೀ ಎ.ಆರ್. ಪ್ರಸನ್ನಕುಮಾರ
ಗೌರವ ಸದಸ್ಯರು
ಶ್ರೀ ಶರಣಗೌಡ ಜಿ. ಪಾಟೀಲ
ಸಂಪಾದಕರು
ಶ್ರೀ ವಿ.ಜೆ. ಕಾರಕೂನ
ಸಂಚಾಲಕರು
ಶ್ರೀ ಮಹಾಂತಪ್ಪ ಎಸ್. ಎಮ್
ಸದಸ್ಯರು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
"ಸೌಹಾರ್ದ ಸಹಕಾರಿ ಸೌಧ" ನಂ.68, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು - 560055
ದೂರವಾಣಿ/ ಫ್ಯಾಕ್ಸ್ : 080-23378375-80, 23474408,23573291
ಇ-ಮೇಲ್ : souharda@souharda.coop
swabhimani@souharda.coop
ವೆಬ್‌ಸೈಟ್ : www.souharda.coop
**youtube :** https://www.youtube.com/@souharda471

ಒಳಪುಟಗಳಲ್ಲಿ. . .

ಅಧ್ಯಕ್ಷರ ನುಡಿ .......... 2
ಸಂಪಾದಕೀಯ .......... 3
ಜ್ಞಾನ ಜ್ಯೋತಿ .......... 4
ಸಂಯುಕ್ತ ಸಹಕಾರಿಗಳ ಸಮಾಚಾರಗಳು .......... 05-14
ಸೌಹಾರ್ದ ಸಹಕಾರಿಗಳ ಸಮಾಚಾರಗಳು .......... 15-18
**ಲೇಖನಗಳು :**
ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯಡಿ ಸಂಯುಕ್ತ ಸಹಕಾರಿ ನಿಯಂತ್ರಣ ಪ್ರಾಧಿಕಾರ - ಅರಿತು ಕೆಲಸ ನಿರ್ವಹಿಸುವುದು ಅಗತ್ಯ .......... 19-21
ಸಹಕಾರಿ ಆಡಳಿತ : ತತ್ವಗಳು, ರಚನೆ ಮತ್ತು ಸವಾಲುಗಳು .......... 22-25
ಸಕಾರಾತ್ಮಕ ಚಿಂತನೆ - ವ್ಯಕ್ತಿತ್ವ ವಿಕಸನಕ್ಕೆ ಅಡಿಗಲ್ಲು : ಸಮತೋಲನದ ಜೀವನಕ್ಕೆ ದಾರಿ ದೀಪ .......... 26-28

# ಸಂಪಾದಕೀಯ

## ಸೌಹಾರ್ದ ಸಹಕಾರಿಗಳು ಯುವಜನರಿಗೆ ಉದ್ಯೋಗ ಕೇಂದ್ರಗಳಂತೆ ಕಾರ್ಯನಿರ್ವಹಿಸುವ ಅಗತ್ಯತೆ.

ದೇಶದಲ್ಲಿ ಬೆಳೆಯುತ್ತಿರುವ ಜನಸಂಖ್ಯೆ, ಬಡತನ, ನಿರುದ್ಯೋಗ, ಶಿಕ್ಷಣ ಹಾಗೂ ಆರೋಗ್ಯ ಮುಂತಾದವುಗಳು ಜ್ವಲಂತ ಸಮಸ್ಯೆಗಳು. ಈ ಸಮಸ್ಯೆಗಳನ್ನು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಅನೇಕ ಯೋಜನೆಗಳ ಮೂಲಕ ಅತ್ಯಂತ ಸಮರ್ಪಕವಾಗಿ ನಿರ್ವಹಿಸುತ್ತಿವೆ. ಸಹಕಾರ ಕ್ಷೇತ್ರದ ಮೂಲಕವೂ ದೇಶದ ನಿರುದ್ಯೋಗ ನಿರ್ವಹಣೆಯಲ್ಲಿ ಮಹತ್ವದ ಪಾತ್ರ ನಿರ್ವಹಿಸಲಾಗುತ್ತಿದೆ ಮತ್ತು ಸಹಕಾರಿ ಸಂಸ್ಥೆಗಳು ಇನ್ನು ಹೆಚ್ಚು ಉದ್ಯೋಗ ಸೃಷ್ಟಿ ಮಾಡಲು ಅನೇಕ ಯೋಜನೆಗಳನ್ನು ಜಾರಿಮಾಡುವುದರ ಮೂಲಕ ಯುವಕರಿಗೆ ಉದ್ಯೋಗ ನೀಡುವಲ್ಲಿ ಯಶಸ್ವಿಯಾಗಿವೆ ಎಂಬುದು ಸಹಕಾರಿಗಳಿಗೆ ಹೆಮ್ಮೆಯ ವಿಷಯ.

ದೇಶದ ಅರ್ಥ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರ ಮುಖ್ಯವಾಹಿನಿಯಲ್ಲಿ ಕಾರ್ಯನಿರ್ವಹಿಸುವ ಅಗತ್ಯತೆಯನ್ನು ಕೇಂದ್ರ ಸಹಕಾರ ಸಚಿವಾಲಯ ಮನಗಂಡು ಅನೇಕ ಪ್ರಗತಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿರುವುದು ಸಹಕಾರಿ ಕ್ಷೇತ್ರದ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ರಾಷ್ಟ್ರಮಟ್ಟದಲ್ಲಿ ಸಹಕಾರಿ ಕ್ಷೇತ್ರದ ಮೂಲಕ ಸಹಕಾರಿ ವಿಶ್ವವಿದ್ಯಾಲಯದ ಸ್ಥಾಪನೆ, ಸಹಕಾರಿ ಕ್ಷೇತ್ರದಲ್ಲಿ ಆಯಾತ ನಿರ್ಯಾತ ಸಹಕಾರಿ ಸಂಸ್ಥೆ, ಸಾವಯವ ಸಹಕಾರಿ ಸಂಸ್ಥೆ ಸ್ಥಾಪನೆಯಂತಹ ಅನೇಕ ಹೊಸ ಆಯಾಮಗಳನ್ನು ಪ್ರಾರಂಭಿಸಿರವುದು, ಅಮೂಲ್, ಇಫ್ಕೋ, ಕ್ರಿಫ್ಕೋ, ಬಮೂಲ್ ಕ್ಯಾಂಪ್ಕೊ ಮತ್ತು ವಾಣಿಜ್ಯ ಬ್ಯಾಂಕುಗಳಿಗೆ ಸರಿ ಸಮನಾಗಿ ಕಾರ್ಯನಿರ್ವಹಿಸುತ್ತಿರುವ ಸಹಕಾರಿ ಬ್ಯಾಂಕುಗಳು ಅನೇಕ ಕ್ರೆಡಿಟ್ ಸಹಕಾರಿ ಸಂಸ್ಥೆಗಳು ಮತ್ತು ಇತರೆ ವಿವಿಧ ರೀತಿಯ ಸಹಕಾರಿ ಸಂಸ್ಥೆಗಳು ದೇಶದ ನಿರುದ್ಯೋಗ ನಿವಾರಣೆ ಕಾರ್ಯದಲ್ಲಿ ಸಹಕಾರ ಕ್ಷೇತ್ರ ಮಹತ್ವದ ಪಾತ್ರ ನಿರ್ವಹಿಸುತ್ತಿರುವುದು ಸಹಕಾರಿ ಕ್ಷೇತ್ರದ ಕೊಡುಗೆಯನ್ನು ಸಾರುತ್ತದೆ. ದೇಶದ ಒಟ್ಟು ಉದ್ಯೋಗಸ್ಥರಲ್ಲಿ ಶೇಕಡಾ 12% ಸಹಕಾರ ಕ್ಷೇತ್ರದ ಪಾಲು ಇದೆ. ಸೌಹಾರ್ದ ಸಹಕಾರಿ ಕ್ಷೇತ್ರದಲ್ಲಿಯೇ 1 ಲಕ್ಷಕ್ಕೂ ಹೆಚ್ಚಿನ ಜನರಿಗೆ ಉದ್ಯೋಗ ಸೃಷ್ಟಿಯಾಗಿದೆ. ರಾಜ್ಯದ ಸಹಕಾರಿ ಕ್ಷೇತ್ರದ ಮೂಲಕ 7.16 ಲಕ್ಷ ಜನರಿಗೆ ಉದ್ಯೋಗ ನೀಡಲಾಗಿದೆ.

ಸಾಧಿಸಿರುವುದು ಸಾಕಷ್ಟಿದ್ದರೂ ಸಾಧಿಸಬೇಕಾಗಿರುವುದು ಇನ್ನೂ ಇದೆ ಎಂಬಂತೆ ವಿಶೇಷವಾಗಿ ದೇಶದ ನಿರುದ್ಯೋಗ ನಿರ್ವಹಣೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಯುವಜನರು ಆಸಕ್ತಿ ವಹಿಸುವಂತಾಗಲು ಅವರಿಗೆ ಸಹಕಾರಿ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿ ಸಾಧ್ಯ ಎನ್ನುವ ಬಗ್ಗೆ ಮನವರಿಕೆ ಮಾಡಬೇಕು. ಅದಕ್ಕಾಗಿ ಸಹಕಾರಿಗಳು ಆಧುನಿಕತೆಯನ್ನು ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಬೇಕು. ವ್ಯಾಪಾರ ವಹಿವಾಟುಗಳಲ್ಲಿ ವಿಭಿನ್ನತೆಯನ್ನು ಹೆಚ್ಚಿಸಿಕೊಳ್ಳುವುದರ ಜೊತೆಗೆ ವಹಿವಾಟು ಹೆಚ್ಚಿಸಬೇಕು. ಸಹಕಾರ ಕ್ಷೇತ್ರ ಎಂತಹ ಕಷ್ಟ ಕಾಲ ಬಂದಾಗ್ಯೂ ಉತ್ತಮವಾಗಿ ಕಾರ್ಯನಿರ್ವಹಿಸಿವೆ ಎಂಬ ಹೆಗ್ಗಳಿಕೆ ಇದೆ. ಹೀಗಾಗಿ ಹೆಚ್ಚಿನ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡಿ ಕಾರ್ಯಚಟುವಟಿಕೆಗಳನ್ನು ವಿಸ್ತರಿಸಿಕೊಂಡು, ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಕ್ರಮವಿಡಬೇಕು, ವ್ಯಾಪಾರದಲ್ಲಿ ವೈವಿಧ್ಯತೆಯನ್ನು ಅಳವಡಿಸಿ ಉದ್ಯೋಗ ಸೃಷ್ಟಿ ಮಾಡಿ ಯುವಕರಿಗೆ ಸಹಕಾರಿ ಕ್ಷೇತ್ರದಲ್ಲಿ ಉದ್ಯೋಗಸ್ಥರನ್ನಾಗಿ ಮಾಡಲು ಸಾಧ್ಯ. ಈ ಪ್ರಯತ್ನದಲ್ಲಿ ಸಹಕಾರಿಗಳು ಮೇಲ್ಪಂಕ್ತಿಯಾಗಲಿ.



# ಜ್ಞಾನ ಜ್ಯೋತಿ

– ಶ್ರೀ ಸಿದ್ದೇಶ್ವರ ಸ್ವಾಮೀಜಿ, ವಿಜಯಪುರ
ಪ್ರವಚನ ಸಂಗ್ರಹ : ಶ್ರೀ ಶಂಕರ ಎಸ್.

## "ಶಾಂತಿಸಾಗರ" ಭಾಗ–2

ಸಾಗರದಲ್ಲಿ ತೆರೆಗಳು ಏಳುತ್ತವೆ. ಮತ್ತೆ ಬೀಳುತ್ತವೆ. ಆದರೆ ಸಾಗರವು ಏಳುವುದಿಲ್ಲ, ಬೀಳುವುದಿಲ್ಲ, ಸದಾ ಶಾಂತವಾಗಿರುತ್ತದೆ. ಗಂಭೀರವಾಗಿರುತ್ತದೆ. ಹಾಗೆಯೇ ನಮ್ಮ ಜೀವನದಲ್ಲಿ ಸುಖ– ದುಃಖದ ತೆರೆಗಳು ಏಳುತ್ತವೆ ಮತ್ತು ಬೀಳುತ್ತವೆ. ಈ ಸುಖ–ದುಃಖದ ತೆರೆಗಳೇ ಇಲ್ಲದಂತೆ ಆದಾಗ ನಮ್ಮ ಬದುಕೂ ಕೂಡ ಸಾಗರದಂತೆ ಶಾಂತವೂ, ಗಂಭೀರವೂ ಆಗುತ್ತದೆ.

ಓರ್ವ ವಿದೇಶದ ಮನಶ್ಶಾಸ್ತ್ರಜ್ಞ ಹೇಳುತ್ತಾನೆ. "ಬೆಳಕು, ಬಣ್ಣ, ಕುಂಚ, ಪರದೆ ಇದ್ದರೆ ಕಲಾವಿದನು ಸುಂದರ ಚಿತ್ರವನ್ನು ಬರೆಯುತ್ತಾನೆ. ಹಾಗೆಯೇ ಬುದ್ಧಿಯ ಬೆಳಕು ಭಾವದ ಬಣ್ಣ ದೇಹವೆಂಬ ಕುಂಚ ಇರುವಾಗ ಆಯುಷ್ಯ ಎಂಬ ಪರದೆಯ ಮೇಲೆ ನಾವು ನಮಗೆ ಬೇಕಾದಂತಹ ಸುಂದರ ಜೀವನದ ಚಿತ್ರ ಬರೆಯಬಹುದು.

ನಮ್ಮ ಮನಸ್ಸನ್ನು ನಿರ್ಮಲವಾಗಿಡುವುದಕ್ಕೆ ಮತ್ತೊಂದು ಸರಳ ಮಾರ್ಗವೆಂದರೆ ನಮ್ಮ ಇತಿ ಮಿತಿಗಳನ್ನು ನಾವು ಅರಿತುಕೊಂಡಿರಬೇಕು. ಈ ಜಗತ್ತಿನಲ್ಲಿ ನಾವು ಎಲ್ಲವನ್ನೂ ತಿಳಿಯಲು, ಮಾಡಲು ಪಡೆಯಲು ಆಗುವುದಿಲ್ಲ. ಆದರೆ ನಮ್ಮ ದೈಹಿಕ ಮಾನಸಿಕ, ಬೌದ್ಧಿಕ ಸಾಮರ್ಥ್ಯಕ್ಕೆ ಅನುಸರಿಸಿ ನಮಗೆ ಸಾಧ್ಯವಾದಷ್ಟನ್ನು ನಾವು ತಿಳಿಯಬಹುದು, ಮಾಡಬಹುದು, ಪಡೆಯಬಹುದು.

ರಸ್ತೆಯಲ್ಲಿ ಕಾರು ಓಡುತ್ತಿದ್ದರೆ, ಬೀದಿನಾಯಿಯು ಅದರ ಜೊತೆಗೆ ಓಡುತ್ತದೆ. ಕೆಲವೊಮ್ಮೆ ಆ ಕಾರಿನ ಮುಂದೆಯೂ ಹೋಗುತ್ತದೆ. ಆಗ ಅದರ ಸಂತಸಕ್ಕೆ ಮಿತಿಯೇ ಇರುವುದಿಲ್ಲ. ಮುಂದೆ ಸ್ವಲ್ಪ ಸಮಯದಲ್ಲಿ ನಾಯಿಯು ಕಾರಿನ ಹಿಂದೆ ಉಳಿಯುತ್ತದೆ. ಆಗ ನಾಯಿಯ ಮುಖವನ್ನು ನೋಡಲಿಕ್ಕೂ ಆಗುವುದಿಲ್ಲ. ಅಷ್ಟು ಅದಕ್ಕೆ ಸಿಟ್ಟು ಬಂದು ಕಣ್ಣು ಕೆಂಪು ಮಾಡಿರುತ್ತದೆ. ಆ ಬಳಿಕ ಕಾರು ನಾಯಿಗೆ ಕಾಣದಷ್ಟು ದೂರ ಹೋಗುತ್ತದೆ. ಆಗ ನಾಯಿ "ಹೋದರೆ, ಹೋಗಲಿ ಬಿಡು!" ಎಂದು ಬಾಲ ಅಲ್ಲಾಡಿಸುತ್ತ ಇನ್ನೊಂದು ಕಾರಿನ ದಾರಿಯನ್ನು ಕಾಯುತ್ತ ಅಲ್ಲೇ ಕುಳಿತು ಬಿಡುತ್ತದೆ.

ಕಾಲನೆಂಬ ಕಾರು ಅಥವಾ ಜಗತ್ತು ಓಡುತ್ತಿರುವಾಗ ಜೀವನೆಂಬ ಪ್ರಾಣಿಯು ಅದರ ಹಿಂದೆ ಓಡುತ್ತದೆ. ಕೆಲವೊಮ್ಮೆ ಜಗತ್ತೆಲ್ಲ ಕೈಗೆ ಸಿಕ್ಕಂತಾಗುತ್ತದೆ. ಆದರೆ ವಯಸ್ಸಾದಂತೆ ಪ್ರಪಂಚವೆಲ್ಲವೂ ಕೈಬಿಟ್ಟು ಬಿಡುತ್ತದೆ. ಓಟದಲ್ಲಿ ನಿನಗೆ "ಭಾರತರತ್ನ ಪದವಿ ಬಂದಿದೆ." ಎಂದು ಮುದುಕನಿಗೆ ಮೊಮ್ಮಕ್ಕಳು ಹೇಳುತ್ತಾರೆ. "ಅಯ್ಯೋ, ರತ್ನ ಏನು ಮಾಡುತ್ತೀರಿ? ಅದು ನನಗೀಗ ಕಾಣುವುದಿಲ್ಲ, ರೊಟ್ಟಿ ಕೊಡಿರಿ!" ಎಂದು ಆ ಮುದುಕ ಹೇಳುತ್ತಾನೆ. ಈಗ ಓಡುವ–ನೋಡುವ ಕಾಲ ಮುಗಿದು ಹೋಗಿ ಶಾಂತವಾಗಿರುವ ಕಾಲ ಮಾತ್ರ ಅವನಿಗೆ ಉಳಿದಿದೆ. ಎಷ್ಟೋ ಸಲ ಘನ ಸರಕಾರದವರು, ಇತರ ಸಂಘ ಸಂಸ್ಥೆಯವರು ಕೆಲವರಿಗೆ ಮರಣೋತ್ತರ ಪ್ರಶಸ್ತಿಗಳನ್ನು ಕೊಡುತ್ತಾರೆ. ಆ ಪ್ರಶಸ್ತಿಯ ಸಂತಸವನ್ನು ಅನುಭವಿಸಲು ಅವರು ಇರುವುದೇ ಇಲ್ಲ. ಮಾನವ ಸಾಧನೆಗಳಿಗೆ ಶಕ್ತಿ–ಯುಕ್ತಿಗೆ ಇತಿ–ಮಿತಿ ಇದೆ ಎನ್ನವುದನ್ನು ನಾವು ಎಂದೂ ಮರೆಯಬಾರದು.

ಎಂದು ಬೀಳದ ಭದ್ರವಾದ ಮನೆಯನ್ನು ಕಟ್ಟಬೇಕೆಂಬು ಕೆಲವರು ಕನಸು ಕಾಣುತ್ತಾರೆ. ಆದರೆ ಭೂಮಿಯೇ ಬಿದ್ದು ಹೋಗುವಾಗ ನಮ್ಮ ಮನೆ ಹೇಗೆ ಉಳಿಯುತ್ತದೆ ಎಂಬುದು ಅವರ ಲಕ್ಷ್ಯಕ್ಕೆ ಬರುವುದಿಲ್ಲ. ಆದ್ದರಿಂದ ನಾವು ಇರುವವರೆಗೆ ನಮ್ಮ ಮನೆ ಬೀಳದಿದ್ದರೆ ಸಾಕು ಎಂದು ಭಾವಿಸಿದರೆ ನಾವು ನೆಮ್ಮದಿಯಿಂದಿರುತ್ತೇವೆ. ಆಟದಲ್ಲಿ ಮಕ್ಕಳು ಮಣ್ಣಿನ ಮನೆ ಕಟ್ಟುತ್ತವೆ. ಕೊಡುವ ತೆಗೆದುಕೊಳ್ಳುವ ಎಲ್ಲ ವ್ಯವಹಾರವನ್ನು ಹಿರಿಯರಿಗಿಂತ ಚೆನ್ನಾಗಿ ಮಾಡುತ್ತವೆ ಆಟ ಮುಗಿದ ಕೂಡಲೇ ಆ ಮನೆಯನ್ನು ಕೆಡವಿ ತಮ್ಮ ಮನೆಗೆ ಹಾಡುತ್ತ–ಕುಣಿಯುತ್ತ ಹೋಗುತ್ತವೆ. ನಾವು ಈ ಜೀವನದಲ್ಲಿ ಒಂದು ದೈವೀಲೀಲೆ ಅಥವಾ ದೇವರ ಆಟವೆಂದು ಭಾವಿಸಿ, ನಮ್ಮ ಇತಿ–ಮಿತಿಗಳನ್ನು ಅರಿತು ಮಕ್ಕಳಂತೆ ಸಹಜವಾಗಿ ಬದುಕಬೇಕು. ಆಗ ನಮ್ಮ ಜೀವನವು ಸುಖ–ದುಃಖದ ತೆರೆಗಳಿಲ್ಲದ ಶಾಂತಿಸಾಗರವಾಗುತ್ತದೆ. ಇದುವೇ ಗೆಲುವಿನ ಜೀವನ.

## ಸೌಹಾರ್ದ ಸಹಕಾರಿಗಳ ನ್ಯಾಯಾಲಯದ ಸಮಾಚಾರಗಳು

| ದಾವಾ ಪಂಚಾಯ್ತಿ ನ್ಯಾಯಾಲಯ (ಎಬಿಎನ್) | | | | | | |
|---|---|---|---|---|---|---|
| ಕ್ರ.ಸಂ | ವಿವರ | ಬೆಳಗಾವಿ | ಕಲಬುರಗಿ | ಬೆಂಗಳೂರು | ಮೈಸೂರು | ಒಟ್ಟು |
| 1 | ಏಪ್ರಿಲ್–26ರ ಪ್ರಾರಂಭಿಕ ಬಾಕಿ ಇರುವ ಕಡತಗಳ ಸಂಖ್ಯೆ | 919 | 619 | 444 | 298 | 2280 |
| 2 | ದಾಖಲಾದ ದಾವಾ ಪ್ರಕರಣಗಳ ಸಂಖ್ಯೆ | 68 | 13 | 19 | 30 | 130 |
| 3 | ಇತ್ಯರ್ಥಗೊಂಡ ದಾವಾ ಪ್ರಕರಣಗಳು | 125 | 5 | 30 | 20 | 180 |
| 4 | ವಿಚಾರಣೆ ಹಂತದಲ್ಲಿರುವ ದಾವಾ ಪ್ರಕರಣಗಳು | 862 | 627 | 433 | 308 | 2230 |
| **ಏಪ್ರಿಲ್ 2026ರ ತಿಂಗಳಿನಲ್ಲಿ ದಾಖಲಾದ ದಾವಾ ಪ್ರಕರಣಗಳು 130 ಮತ್ತು ಇತ್ಯರ್ಥಗೊಂಡ ಪ್ರಕರಣಗಳು 180** | | | | | | |
| ಅಮಲ್ಜಾರಿ ವಿಭಾಗ | | | | | | |
| 1 | ದಾಖಲಾದ ಅಮಲ್ಜಾರಿ ಪ್ರಕರಣಗಳ ಸಂಖ್ಯೆ | 7541 | 1455 | 2285 | 815 | 12096 |
| 2 | ಇತ್ಯರ್ಥಗೊಂಡ ಅಮಲ್ಜಾರಿ ಪ್ರಕರಣಗಳು | 1124 | 263 | 561 | 206 | 2154 |
| 3 | ವಿಚಾರಣೆ ಹಂತದಲ್ಲಿರುವ ಅಮಲ್ಜಾರಿ ಪ್ರಕರಣಗಳು | 6417 | 1192 | 1724 | 609 | 9942 |
| **ಏಪ್ರಿಲ್ 2026ರ ತಿಂಗಳಿನಲ್ಲಿ ಒಟ್ಟು 105 ಅಮಲ್ಜಾರಿ ಪ್ರಕರಣಗಳು ದಾಖಲಾಗಿರುತ್ತವೆ.** | | | | | | |

# ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಹಾಗೂ ಅಧಿಕಾರಿಗಳ ಅಧ್ಯಯನ ಪ್ರವಾಸ

## ಸಿಕ್ಕಿಂ ರಾಜ್ಯದ ಜನರಿಗೆ ಸಹಕಾರ ಕ್ಷೇತ್ರದಲ್ಲಿ ನಂಬಿಕೆ ಹಾಗೂ ಆಸಕ್ತಿ.

## – ಶ್ರೀ ಜಿ. ನಂಜನಗೌಡ, ಮಾನ್ಯ ಅಧ್ಯಕ್ಷರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.







ಭಾರತದ ಈಶಾನ್ಯ ರಾಜ್ಯಗಳ ಜನಜೀವನ, ನೆಲ, ಜಲ, ಹವಾಮಾನ, ಸಂಸ್ಕೃತಿಗಳ ಅಧ್ಯಯನ ಹಾಗೂ ಸಹಕಾರ ಕ್ಷೇತ್ರದ ಕಾರ್ಯಚಟುವಟಿಕೆಗಳ ಅಧ್ಯಯನ ಈ ಪ್ರವಾಸದ ಉದ್ದೇಶವಾಗಿತ್ತು.

ಈ ಸಂದರ್ಭದಲ್ಲಿ ಮಾತನಾಡಿದ ಸಂಯುಕ್ತ ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡರವರು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ಕ್ಷೇತ್ರದಲ್ಲಿ ಒಂದು ವಿನೂತನ ಪ್ರಯೋಗವಾಗಿದೆ. ಈ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳ ನಿಬಂಧಕರ ಪಾತ್ರ ಕಡಿಮೆ. ಸರಕಾರದ ಹಸ್ತಕ್ಷೇಪಕ್ಕೆ ಅವಕಾಶ ವಿರುವುದಿಲ್ಲ. ಸ್ವಾಯತ್ತತೆ, ಸ್ವಯಂ ಆಡಳಿತ, ಸ್ವಯಂ ನಿಯಂತ್ರಣ ಇದು ಸೌಹಾರ್ದ ಸಹಕಾರಿಗಳ ಧ್ಯೇಯ. ಕೆ.ಎಸ್.ಎಸ್. ಎಫ್.ಸಿ.ಎಲ್ ರಾಜ್ಯದ ಸೌಹಾರ್ದ ಸಹಕಾರಿ ಸಂಸ್ಥೆಗಳಿಗೆ ಶಾಸನಾತ್ಮಕ ಕಾರ್ಯಗಳಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ನಡೆಸುತ್ತದೆ. 1959ರ ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ 45,000ಕ್ಕಿಂತಲೂ ಹೆಚ್ಚು ಸಹಕಾರಿ ಸಂಸ್ಥೆಗಳಿವೆ. 2001ರ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಕೇವಲ 25 ವರ್ಷಗಳ ಅವಧಿಯಲ್ಲಿ 6700ಕ್ಕೂ ಹೆಚ್ಚು ಸಹಕಾರಿ ಸಂಸ್ಥೆಗಳು ನೊಂದಣಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ತಿಳಿಸಿದರು.

ಡಾರ್ಜಿಲಿಂಗ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕು ಗಾತ್ರದಲ್ಲಿ ಸಣ್ಣದಾದರೂ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಿದರು.

ಸಿಕ್ಕಿಂ ರಾಜ್ಯದ ಭಾಷೆ ನೇಪಾಳಿ, ಕೃಷಿ ಹಾಗೂ ಪ್ರವಾಸೋದ್ಯಮ ಆದಾಯದ ಮೂಲ, ಸಾವಯಾವ ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ. ಗ್ಯಾಂಗ್‌ಟಾಕ್ ಈ ರಾಜ್ಯದ ರಾಜಧಾನಿ. ಸುಂದರ ಹಾಗೂ ಸ್ವಚ್ಛ ನಗರಗಳು.

ಕೃಷಿಕರಿಗೆ, ಕೂಲಿಕಾರ್ಮಿಕರಿಗೆ, ಸರ್ಕಾರಿ ನೌಕರರಿಗೆ, ಹಿಂದುಳಿದ ವರ್ಗಗಳ ಜನರಿಗೆ ಸಹಕಾರ ಕ್ಷೇತ್ರದ ಮೂಲಕ ಆರ್ಥಿಕ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ನಾವು ಭೇಟಿ ನೀಡಿ ಅಧ್ಯಯನ ಮಾಡಿದ ಡಾರ್ಜಿಲಿಂಗ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿನ ಪ್ರಚಲಿತ ವಿದ್ಯಮಾನಗಳಿಂದ ತಿಳಿಯಲಾಗಿದೆ. ಡಾರ್ಜಿಲಿಂಗ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಪಶ್ಚಿಮ ಬಂಗಾಳ ರಾಜ್ಯದ ವ್ಯಾಪ್ತಿಯಲ್ಲಿ ಬರುತ್ತದೆ. ಜನರಲ್ಲಿ ಸಹಕಾರಿ ಮನೋಭಾವವನ್ನು ಬೆಳೆಸುವ ಕಾರ್ಯ ಜನರು ಸಹಕಾರಿ ಸೇವೆಗಳನ್ನು ಬಳಸುವ ರೀತಿ ಉತ್ತಮವಾಗಿದೆ. ರಾಜ್ಯದ ಜನರು ಸಹಕಾರಿ ತತ್ವಗಳಲ್ಲಿ ನಂಬಿಕೆ ಹೊಂದಿದ್ದಾರೆ. ಸಹಕಾರಿ ಕ್ಷೇತ್ರದಿಂದ ಈ ರಾಜ್ಯದ ಜನರಿಗೆ ಆರ್ಥಿಕ ಹಾಗೂ ಸಾಮಾಜಿಕ ಬೆಳವಣಿಗೆ ಸಾಧ್ಯವಾಗಿದೆ ಎಂದು ಹೇಳಿದರು.

## ಡಾರ್ಜಿಲಿಂಗ್ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ ಭೇಟಿ

## – ಶ್ರೀ ಶರಣಗೌಡ ಜಿ. ಪಾಟೀಲ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು.






ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಸಿಕ್ಕಿಂನ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ಗೆ ಭೇಟಿ

ಸಿಕ್ಕಿಂ ರಾಜ್ಯದಲ್ಲಿ ಸಹಕಾರ ಕ್ಷೇತ್ರದ ಮೂಲಕ ಸಾಲ ನೀಡಿ ಕೃಷಿ ಹಾಗೂ ಕೃಷಿ ಪೂರಕ ಉದ್ದಿಮೆಗಳನ್ನು ಬಲಪಡಿಸುವ ಉದ್ದೇಶದಿಂದ 1914ರಲ್ಲಿ ಡಾರ್ಜಿಲಿಂಗ್ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕಿಂಗ್ ಸಂಸ್ಥೆಯಾಗಿ ಪ್ರಾರಂಭವಾದ ಈ ಬ್ಯಾಂಕ್ 1959ರಲ್ಲಿ ಈ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ಆಗಿ ಕಾರ್ಯನಿರ್ವಹಣೆ ಮಾಡಲು ಪ್ರಾರಂಭಿಸಿದೆ. ಪ್ರಾರಂಭದಿಂದಲೂ ಈ ಬ್ಯಾಂಕ್ ಕೃಷಿ ಪತ್ತಿನ ಸಹಕಾರ ಸಂಘಗಳಿಗೆ ಕೃಷಿ ಕಾರ್ಮಿಕ ಕೂಲಿಕಾರರಿಗೆ, ಸಹಕಾರ ನೌಕರರಿಗೆ, ಸ್ವಯಂ ಸೇವಾ ಸಂಸ್ಥೆಗಳಿಗೆ, ಸಮಾಜದ ಹಿಂದುಳಿದ ವರ್ಗದವರಿಗೆ, ಸಹಕಾರ ಸಂಘಗಳ ಮೂಲಕ ನೇರವು ನೀಡುತ್ತ ಉತ್ತಮವಾಗಿ ಕಾರ್ಯನಿರ್ವಹಿತ್ತಿರುವ ಅಧ್ಯಯನ ಗಮನಿಸಲಾಯಿತು. ಈ ಬ್ಯಾಂಕ್ ಪಶ್ಚಿಮ ಬಂಗಾಳ ರಾಜ್ಯ ಸಹಕಾರಿ ಬ್ಯಾಂಕ್‌ನ ಸದಸ್ಯತ್ವವನ್ನು ಹೊಂದಿದೆ. ಈ ಬ್ಯಾಂಕ್ 14 ಶಾಖೆಗಳನ್ನು ಹೊಂದಿದೆ. ಇದರಲ್ಲಿ 10 ಶಾಖೆಗಳು ಲಾಭದಲ್ಲಿ ಇದ್ದು 4 ಶಾಖೆಗಳು ನಷ್ಟದಲ್ಲಿ ಇವೆ. ಈ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕಿಗೆ 374 ಸಹಕಾರ ಸಂಸ್ಥೆಗಳು ಸದಸ್ಯತ್ವ ಪಡೆದಿದೆ. ಅದರಲ್ಲಿ 75 ಕೃಷಿ ಪತ್ತಿನ ಸಹಕಾರ ಸಂಘಗಳು, 10 ಪತ್ತಿನ ಸಹಕಾರ ಸಂಘಗಳು, ಇತರೆ 250 ಸಹಕಾರ ಸಂಘಗಳಿವೆ. ಇದಲ್ಲದೇ 3 ಲಕ್ಷ ಖಾತೆದಾರರು ಇದ್ದಾರೆ. ಕಳೆದ ಮೂರು ವರ್ಷದಗಳಲ್ಲಿ ಲೆಕ್ಕಪರಿಶೋಧನಾ ಇಲಾಖೆಯವರು ಇದ್ದಕ್ಕೆ 2023ಕ್ಕೆ ಬಿ ವರ್ಗ, 2024ಕ್ಕೆ ಬಿ ವರ್ಗ, 2025 ಎ ವರ್ಗಿಕರಣ ನೀಡಲಾಗಿದೆ.

**31.03.2026 ಕ್ಕೆ ಈ ಬಾಂಕಿನ ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು**

- ಒಟ್ಟು ಠೇವಣಿಗಳು – 427.06 ಕೋಟಿ
- ಒಟ್ಟು ಸಾಲಗಳು – 295.050 ಕೋಟಿ
- ಒಟ್ಟು ವ್ಯವಹಾರ – 722.56 ಕೋಟಿ
- ಸಿಡಿ ಅನುಪಾತ – 69.20%
- ನಿವ್ವಳ ಲಾಭ 1.67 ಕೋಟಿ (ಲಾಭ ವಿಲೇವಾರಿಗಿಂತ ಮೊದಲು)
- ಒಟ್ಟು ಎನ್.ಪಿ.ಎ ಅನುಪಾತ – 8.88%
- ನೆಟ್ ಎಸ್.ಪಿ.ಎ ಅನುಪಾತ – 3.86%

ಈ ಬ್ಯಾಂಕಿನ ಕಾರ್ಯಚಟುವಟಿಕೆಗಳು ಸಂಯುಕ್ತ ಸಹಕಾರಿಯ ನಿರ್ದೇಶಕರು ಹಾಗೂ ಅಧಿಕಾರಿಗಳು ಅಧ್ಯಯನ ಸಂದರ್ಭದಲ್ಲಿ ಬ್ಯಾಂಕಿನ ನಿರ್ದೇಶಕರು ಹಾಗೂ ಅಧಿಕಾರಿಗಳು ನೀಡಿದ ಸಹಕಾರ ಮೆಚ್ಚುವಂತಹದ್ದಾಗಿತ್ತು.

## ಸಿಕ್ಕಿಂ ಜನರ ಪ್ರಾಮಾಣಿಕತೆಗೆ ನಮನ

### – ಶ್ರೀ ಗುರುನಾಥ ಜ್ಯಾಂತಿಕರ, ಮಾನ್ಯ ನಿರ್ದೇಶಕರು ಇವರ ಅಧ್ಯಯನ ಪ್ರವಾಸ ಅನುಭವ



ಸಿಕ್ಕಿಂ ಭಾರತದ ಈಶಾನ್ಯ ಭಾಗದಲ್ಲಿರುವ ಹಿಮಾಲಯದ ತಪ್ಪಲಿನಲ್ಲಿರುವ ಸುಂದರ ಮತ್ತು ದೇಶದ ಎರಡನೇ ಅತಿ ಸಣ್ಣ ರಾಜ್ಯ ವಾಗಿದೆ. ಗ್ಯಾಂಗಟಾಕ್ ಇದರ ರಾಜ್ಯಧಾನಿ. 1975ರ ವರೆಗೆ ಸಿಕ್ಕಿಂ ಚೋಗ್ಯಾಲ್ (Chogy-al) ರಾಜವಂಶದ ಆಳ್ವಿಕೆಯಲ್ಲಿ ಸ್ವಾತಂತ್ರ ರಾಜ್ಯ ವಾಗಿತ್ತು, ನಂತರ ಜನಮತ ಗಣನೆಯ ಮೂಲಕ ಭಾರತದ ಭಾಗವಾಗಿ 22ನೇ ರಾಜ್ಯವಾಗಿ ಸೇರಿದ ಸಿಕ್ಕಿಂ. ವಿಶ್ವದ ಮೂರನೇ ಅತಿ ಎತ್ತರದ ಶಿಖರ ಕಾಂಚನ ಜುಂಗಾಕ್ಕೆ ಹೆಸರುವಾಸಿಯಾಗಿದೆ. ಇದು ಸಾವಯವ ಕೃಷಿ ಮತ್ತು ಪ್ರವಾಸೋದ್ಯಮಕ್ಕೆ ಪ್ರಸಿದ್ಧವಾಗಿದೆ.

**ಭೌಗೋಳಿಕವಾಗಿ :** ಉತ್ತರ ಮತ್ತು ಈಶಾನ್ಯಕ್ಕೆ ಟಿಬೆಟ್ ಮತ್ತು ಚೀನಾ, ಪಶ್ಚಿಮಕ್ಕೆ ನೇಪಾಳ, ಆಗ್ನೇಯಕ್ಕೆ ಭೂತಾನ್ ಮತ್ತು ದಕ್ಷಿಣಕ್ಕೆ ಪಶ್ಚಿಮ ಬಂಗಾಳದೊಂದಿಗೆ ಗಡಿಯನ್ನು ಹಂಚಿಕೊಂಡಿದೆ.

ಗ್ಯಾಂಗ್ ಟಾಕ್, ಇದರ ರಾಜ್ಯಧಾನಿ, ನೇಪಾಳಿ ಇವರ ಮುಖ್ಯ ಭಾಷೆ, ಸಿಕ್ಕಿಮೀಸ್ (ಭೂಟಟಿಯಾ), ಲೆಪ್ಚಾ, ಇಂಗ್ಲಿಷ್ ಮತ್ತು ಹಿಂದಿ.

**ಆರ್ಥಿಕತೆ:** ಪ್ರವಾಸೋದ್ಯಮ, ಮತ್ತು ಕೃಷಿ ಮುಖ್ಯ ಆದಾಯದ ಮೂಲ, ಸಿಕ್ಕಿಂ ಭಾರತದ ಮೊದಲ 100 ಸಾವಯವ ರಾಜ್ಯವಾಗಿದೆ,

**ಪ್ರವಾಸಿ ತಾಣಗಳು:** ದಕ್ಷಿಣಕ್ಕೆ ನಾಥು ಲಾ ಪಾಸ್ (Nathu LA Pass), ತ್ಸೋಮ್ಗೊ ಸರೋವರ (Tsomgo Lake), ದಾರಿಯಲ್ಲಿ ಕಾಂಚನ್ ಜುಂಗಾ ಪರ್ವತ ವೀಕ್ಷಿಸಬಹುದು.

ಉತ್ತರ ಭಾಗಕ್ಕೆ ಯಮ್ತಾಂಗ್ ವ್ಯಾಲಿ, ಝೀರೋ ಪಾಯಿಂಟ್ ಎಂದರೆ ಯಾವುದೇ ಬೆಳೆ ಇಲ್ಲಿ ಬೆಳೆಯುವುದಿಲ್ಲ ಹಿಮದಿಂದ ಕೂಡಿದೆ. ಮತ್ತು ಅನೇಕ ಬೌದ್ಧ ಮಠಗಳು ಪ್ರಮುಖ ಪ್ರವಾಸಿ ತಾಣಗಳಾಗಿವೆ.

ರಾಜ್ಯದ ಪ್ರಾಣಿ ಕೆಂಪು ಪಾಂಡಾ (Red Panda) ಮತ್ತು ರಾಜ್ಯದ ಹೂವು ನೋಬಲ್ ಆರ್ಕಿಡ್.

**ಪರಿಸರ:** ಇಲ್ಲಿ ಸಂಪೂರ್ಣವಾಗಿ ಪ್ಲಾಸ್ಟಿಕ್ ಬಳಕೆ ಇರುವುದಿಲ್ಲ ಅದಕ್ಕಾಗಿಯೇ ಇಲ್ಲಿನ ನಗರಗಳು ಸ್ವಚ್ಛ ಹಾಗೂ ಸುಂದರವಾಗಿವೆ. ಕುಡಿಯುವ ನೀರಿಗಾಗಿ ನಮ್ಮದೇ ಬಾಟಲ್ ಇಟ್ಟುಕೊಂಡು ಹೋಗಬೇಕಾಗುತ್ತದೆ.

ಸಿಕ್ಕಿಂನ ಉತ್ತರ ಭಾಗಕ್ಕೆ ಎಂದರೆ ಲಾ ಚುಂಗ್ ಕಡೆ ಕಾನೂನು ಸುವ್ಯವಸ್ಥೆ ಯನ್ನು ಅಲ್ಲಿನ ಸ್ಥಳೀಯರೇ ಬಗೆಹರಿಸಿ ಕೊಳ್ಳುತ್ತಾರೆ (Pipon) ಪಿಪನ್ ಆಡಳಿತ ಅಥವಾ (ಪಂಚರು) ಈ ಸಮಸ್ಯೆಗಳನ್ನು ಬಗೆಹ–ರಿಸುತ್ತಾರೆ. ಇಲ್ಲಿ ಪೋಲೀಸ್ ಮತ್ತು ನ್ಯಾಯಾಲಯಗಳಿಗೆ ಹೋಗಲು ಅವಕಾಶ ಕೊಡುವುದಿಲ್ಲ.

ದಿನಾಂಕ ಏಪ್ರಿಲ್ 22 ರಿಂದ 29 ರವರೆಗೆ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ ದ ವತಿಯಿಂದ ಪ್ರವಾಸ ಕೈಗೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಿಕ್ಕಿಂ ನಲ್ಲಿ ನಮಗೆ ಆದ ಅನುಭವಗಳು.

ನಾವು ದಿನಾಂಕ 23–4–2026 ಗುರುವಾರ ರಂದು ನಾತುಲಾ ಪಾಸ್ ವೀಕ್ಷಣೆಗೆ ಹೋಗಲಾಯಿತು ವೀಕ್ಷಿಸಿ ಬರುವಾಗ ನಮ್ಮ ಸ್ನೇಹಿತರಾದ ಜಿ ಶ್ರೀಧರ್ ರವರ ಫೋನ್ ನಾತುಲಾ ಪಾಸ್ ಹತ್ತಿರ ಕಳೆದು ಹೋಯಿತು. ಮತ್ತೊಬ್ಬ ಹಿರಿಯರಾದ ಶ್ರೀ ಶಿವಲಿಂಗಪ್ಪ ಇವರು ನಾತುಲಾ ಪಾಸ್ ನೋಡಿಕೊಂಡು ವಾಪಸ್ ಬರುವಾಗ ಬಾಬಾ ಮಂದಿರ ಹತ್ತಿರ ತಮ್ಮ

ಫೋನ್‌ನನ್ನು ಕಳೆದುಕೊಂಡರು.

ಇವರಿಬ್ಬರು ಈ ವಿಷಯವನ್ನು ನಮ್ಮ ಪ್ರವಾಸದ ಮಾರ್ಗದರ್ಶಿಯಾಗಿದ್ದ ಶ್ರೀ ಸೌಮ್ಯ ಮುಖರ್ಜಿ ಅವರಿಗೆ ತಿಳಿಸಿದರು.

ಮುಖರ್ಜಿಯವರು ಅವರ ಜಾಲದ ಮೂಲಕ ಸಂಬಂಧ ಪಟ್ಟವ–ರಿಗೆ ವಿಷಯವನ್ನು ತಿಳಿಸಿದರು. ಮುಂದೆ ಬಂದು ನಾವೆಲ್ಲರೂ ಒಂದು ಹೋಟೆಲಿನಲ್ಲಿ ಚಹಾ ಕುಡಿಯೋಣ ಎಂದು ಕುತೇವು ಅಷ್ಟರಲ್ಲಿ ಒಂದು ಫೋನ್ ಬಂತು ಫೋನ್ ಸಿಕ್ಕಿದೆ ಎಂದು.

ಅಷ್ಟರಲ್ಲಿ ಕೆಲವರು ಅಲ್ಲಿಂದ ಮುಂದೆ ಹೊರಟರು. ನಾವು ಕೆಲವರು ಫೋನ್ ಬರುತ್ತೆ ಎಂದು ಕಾಯುತ್ತಾ ಕುತೇವು ಏಕೆಂದರೆ ಎರಡು ಫೋನ್ ಕಳೆದುದರಿಂದ ಯಾರದು ಎಂದು ಕುತೂಹಲದಿಂದ ಕಾಯುತ್ತಿದ್ದೇವು. ಅಷ್ಟರಲ್ಲಿ ಒಂದು ಫೋನ್ ಒಬ್ಬ ಚಾಲಕನು ತಂದು ಕೇಳಿದನು ಇದು ಯಾರ ಫೋನ್ ಎಂದು ಕೇಳಿದಾಗ ಫೋನಿನ ಮಾಲಿಕರು ನನ್ನ ಫೋನು ಎಂದಾಗ ನಿಮ್ಮ ದೆಂದು ಹೇಗೆ ಹೇಳುವಿರಿ ಎಂದಾಗ ಫೋನಿನ ಮಾಲಕ ಫೋನಿನ ಲಾಕ್ ಕೋಡ್ ಓಪನ್ ಮಾಡಿದಾಗ ವಾಹನ ಚಾಲನ ಜಂಗಮವಾಣಿ ಅವರ ಕೈಗೆ ಇಟ್ಟು ಹೊರಟ ಆಗ ಫೋನಿನ ಮಾಲಿಕರು ಹಣ ಕೊಡಲು ಹೋದಾಗ ಅವರು ನೊ ಥ್ಯಾಂಕ್ಸ್ ಎಂದು ಅಲ್ಲಿಂದ ಹೊರಟು ಹೋದರು.

ಮತ್ತೆ ಮುಂದೆ ಹೋಗುತಿದ್ದೇವು ಮತ್ತೆ ನನಗೆ ದೂರವಾಣಿ ಬಂತು ನಮ್ಮ ವಾಹನ ದಲ್ಲಿರುವ ಶಿವಲಿಂಗಪ್ಪ ನವರ ಫೋನ್ ಕೂಡ ಸಿಕ್ಕಿದೆ ಎಂದು ಆದರೆ ನಮಗೆ ನಂಬಿಕೆ ಬರಲಿಲ್ಲ ಮುಂದೆ ಚೆಕ್ ಪೋಸ್ಟ್ ನಲ್ಲಿ ವಿಷಯ ತಿಳಿಸಿ ಫಿರ್ಯಾದಿ ಕೊಡಲು ಹೋದಾಗ ಫಿರ್ಯಾದಿ ತೆಗೆದು ಕೊಳ್ಳದೆ ಕೇವಲ ದೂರವಾಣಿ ಸಂಖ್ಯೆ ತೆಗೆದುಕೊಂಡು ತಾವು ನಿಶ್ಚಿಂತವಾಗಿ ಹೋಗಿ ನಿಮ್ಮ ಫೋನ್ ಸಿಕ್ಕರೆ ನಿಮಗೆ ತಲುಪುತ್ತದೆ ಎಂದು ಹೇಳಿ ಕಳುಹಿಸಿಕೊಟ್ಟರು.

ಎರಡನೆ ದಿನ ಆ ದೂರವಾಣಿ ಚೆಕ್ ಪೋಸ್ಟ್ ನಲ್ಲಿದೆ ಬಂದು ತೆಗೆದುಕೊಂಡು ಹೋಗಿ ಎಂದು ಸುದ್ದಿ ಬಂತು.

ಮೂರನೇ ದಿನ ನಮ್ಮ ಟೂರ್ ಮ್ಯಾನೇಜರ್ ಕಲೆಕ್ಟ್ ಮಾಡಿ ಶಿವಲಿಂಗಪ್ಪ ನವರಿಗೆ ತಲುಪಿಸಿದರು ನಮ್ಮೆಲ್ಲರಿಗೂ ಆಶ್ಚರ್ಯ ವಾಯಿತು. ಇದನ್ನು ನೋಡಿದ ನಾನು ಸಿಕ್ಕಿಂ ಜನರ ಪ್ರಾಮಾಣಿಕತೆಗೆ ನತಭಸ್ತಕನಾದೆ.

ಅಷ್ಟೇ ಅಲ್ಲ ನಾವುಗಳು ಗ್ಯಾಂಗ್ ಟಾಕ್ ದಿಂದ ಯಮ್ ಥಾನ್ ಯರ್ಾಲಿಗೆ ಹೋಗುವ ದಾರಿ ಮಧ್ಯದಲ್ಲಿ ಭೀಮಾ ವಾಟರ್ ಫಾಲ್ಸ್ ನಲ್ಲಿ ಒಬ್ಬ ಉತ್ತಮವಾದ ಹಾಡುಗಳನ್ನು ಹೇಳುತ್ತಿದ್ದರು ಇವನ ಹಾಡಿನೊಂದಿಗೆ ಅನೇಕ ಜನ ನೃತ್ಯಕೂಡ ಮಾಡುತ್ತಿದ್ದರು ಇವರ ಹಾಡಿಗೆ ಮನಸೋತು ಕಾಣಿಕೆಯಾಗಿ ಹಣ ಕೊಡಲು ಹೋದಾಗ ನಯವಾದ ತಿರಸ್ಕರಿಸುತ್ತಾರೆ. ಅದಕ್ಕಾಗಿ ಈ ರಾಜ್ಯದ ಜನತೆಗೆ ನನ್ನ ಸಾವಿರ ನಮಸ್ಕಾರಗಳು.

## ಸಾಮಾನ್ಯ ಸೇವಾ ಕೇಂದ್ರ ಅಳವಡಿಕೆಗೆ ಇರುವ ಅವಕಾಶಗಳು ಎಂಬ ವಿಷಯದ ಕುರಿತು "ವಿಷಯಾಧಾರಿತ ತರಬೇತಿ ಕಾರ್ಯಕ್ರಮ"

**ಮೈಸೂರು :** ದಿನಾಂಕ 30.04.2026 ರಂದು ಬೆಳಿಗ್ಗೆ 11.00 ಗಂಟೆಗೆ ಮೈಸೂರು ಪ್ರಾಂತದಲ್ಲಿ ಸಾಮಾನ್ಯ ಸೇವಾ ಕೇಂದ್ರ ಅಳವಡಿಸಿಕೊಳ್ಳುವ ಕುರಿತು ಸೌಹಾರ್ದ ಸಹಕಾರಿಗಳ ಮುಖ್ಯಕಾರ್ಯನಿರ್ವಾಹಕರು ತಾಂತ್ರಿಕ ಸಿಬ್ಬಂದಿಗಳು ಹಾಗೂ ಇತರೆ ಸಿಬ್ಬಂದಿಗಳಿಗಾಗಿ "ಸಹಕಾರಿ ಸಂಸ್ಥೆಗಳ ಅಭಿವೃದ್ಧಿಗೆ ಸಾಮಾನ್ಯ ಸೇವಾ ಕೇಂದ್ರವನ್ನು ಅಳವಡಿಕೆಗೆ ಇರುವ ಅವಕಾಶಗಳು ಎಂಬ ವಿಷಯದ ಕುರಿತು "ವಿಷಯಾಧಾರಿತ ತರಬೇತಿಯನ್ನು" ಆನ್‌ಲೈನ್ ಮೂಲಕ ಆಯೋಜಿಸಲಾಗಿತ್ತು. ಸದರಿ ತರಬೇತಿಯಲ್ಲಿ ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ. ಎಸ್. ಕೆ, ರವರು ಹಾಗೂ ಸಂಯುಕ್ತ ಸಹಕಾರಿಯ ವೃತ್ತಿಪರ ನಿರ್ದೇಶಕರಾದ ಶ್ರೀ ಮಹದೇವಸ್ವಾಮಿ, ಇವರು ಉಪಸ್ಥಿತರಿದ್ದರು. ಈ ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ಹಾಗೂ ಸ್ವಾಗತವನ್ನು ಶ್ರೀ ಗುರುಪ್ರಸಾದ್ ಬಂಗೇರ, ಮಾನ್ಯ ಪ್ರಾಂತೀಯ ಅಧಿಕಾರಿ, ಪ್ರಾಂತೀಯ ಕಛೇರಿ, ಮೈಸೂರು ರವರು ಮತ್ತು ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ರಜತ್ ರವರು, ರಾಜ್ಯ ಮುಖ್ಯಸ್ಥರು, ಸಿ.ಎಸ್.ಸಿ ವಿಭಾಗ ಇವರು ಸಹಕಾರಿಯಲ್ಲಿ ಸಿ.ಎಸ್.ಸಿ ಅಳವಡಿಸಿಕೊಳ್ಳಲು ಇರುವ ಅವಕಾಶಗಳ ಕುರಿತು ಉಪನ್ಯಾಸ ನೀಡಿದರು. ಹಾಗೂ ಶ್ರೀ ರಾಜೇಂದ್ರ ರಾವ್ ಸಿಂಧೆ, ಮುಖ್ಯಸ್ಥರು, ಇ–ಸ್ಟಾಂಪಿಂಗ್ ವಿಭಾಗ, ಕ.ರಾ.ಸೌ.ಸಂ.ಸ.ನಿ., ಬೆಂಗಳೂರು ಇವರು ಸಿ.ಎಸ್.ಸಿ ನೊಂದಣಿಯ ಅವಶ್ಯಕ ದಾಖಲಾತಿಗಳ ಕುರಿತು ಹಾಗೂ ಸೌಹಾರ್ದ ಸಹಕಾರಿಗಳು ಸಿ.ಎಸ್.ಸಿ ಯಲ್ಲಿ ಅಳವಡಿಸಿಕೊಳ್ಳಬಹುದಾದ ಸೇವೆಗಳ ಕುರಿತು ಉಪನ್ಯಾಸ ನೀಡಿದರು. ತದನಂತರ ಈಗಾಗಲೇ ಸಿ.ಎಸ್.ಸಿ ಯನ್ನು ಅಳವಡಿಸಿಕೊಂಡು ಸದಸ್ಯರಿಗೆ ಸೇವೆ ನೀಡುತ್ತಿರುವ ಆತ್ಮೀಕ ಸೌಹಾರ್ದ ಸಹಕಾರಿ ಸಂಘ ನಿ. ಮುಖ್ಯಕಾರ್ಯನಿರ್ವಾಹಕರಾದ ರಕ್ಷಿತ್ ಕಾರ್ವಿರವರು, ಮದರ್ ಮೇರಿ ಸೌಹಾರ್ದ ಸಹಕಾರಿ ಸಂಘ ನಿ. ಮುಖ್ಯಕಾರ್ಯನಿರ್ವಾಹಕರಾದ ಕಾರ್ಮಿತ್, ಹಾಗೂ ಶರ್ವಾಣಿ ಸೌಹಾರ್ದ ಸಹಕಾರಿ ಸಂಘ ನಿ., ಮುಖ್ಯಕಾರ್ಯನಿರ್ವಾಹಕರಾದ ಉದಯ ವೆಂಕಟೇಶ್ ರವರು ಸೌಹಾರ್ದ ಸಹಕಾರಿಗಳು ಸಿ.ಎಸ್.ಸಿ ಕೇಂದ್ರವನ್ನು ಅಳವಡಿಸಿಕೊಳ್ಳುವುದರಿಂದ ಸಹಕಾರಿಗೆ ಹಾಗೂ ಸದಸ್ಯರಿಗೆ ದೊರಕುವ ಅನುಕೂಲಗಳ ಕುರಿತು ತಮ್ಮ ಅನುಭವವನ್ನು ಎಲ್ಲ ಸಹಕಾ–ರಿಯೊಂದಿಗೆ ಹಂಚಿಕೊಂಡರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ವಿಜಯ್ ಬಿ.ಎಸ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ. ಉಡುಪಿ ಜಿಲ್ಲೆ ಇವರು ನೆರವೇರಿಸಿದರು. ಕಾರ್ಯಕ್ರಮದ ವಂದನಾರ್ಪಣೆಯನ್ನು ಶ್ರೀ ಬಲರಾಮ್ ಎನ್, ಸೌಹಾರ್ದ ಅಭಿವೃದ್ಧಿ ಅಧಿಕಾರಿ, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆ ಇವರು ನೆರವೇರಿಸಿದರು. ಈ ಆನ್‌ಲೈನ್ ತರಬೇತಿಯಲ್ಲಿ ಸೌಹಾರ್ದ ಸಹಕಾರಿಗಳಿಂದ 272 ಪ್ರತಿನಿಧಿಗಳು ಭಾಗವಹಿಸಿದ್ದರು

## ಸಹಕಾರಿಗಳ ನಿಬಂಧಕರಾಗಿ ಶ್ರೀ ಕಾಂತರಾಜು ಪಿ. ಎಸ್, ಐ.ಎ.ಎಸ್ ಅಧಿಕಾರ ಸ್ವೀಕಾರ



**ಬೆಂಗಳೂರು** : ಸಹಕಾರಿ ಇಲಾಖೆಯ ಸಹಕಾರಿಗಳ ನಿಬಂಧಕರಾಗಿ ಅಧಿಕಾರವನ್ನು ಸ್ವೀಕರಿಸಿದ ಶ್ರೀ ಕಾಂತರಾಜು ಪಿ.ಎಸ್ ಐ.ಎ.ಎಸ್ ಇವರನ್ನು ಸಂಯುಕ್ತ ಸಹಕಾರಿಯ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಇವರು ದಿನಾಂಕ 03.05.2026 ರಂದು ಸಹಕಾರಿಗಳ ನಿಬಂಧಕರ ಕಚೇರಿಯಲ್ಲಿ ಭೇಟಿಯಾಗಿ ಸೌಹಾರ್ದ ಸಹಕಾರಿ ಚಳುವಳಿ ಮತ್ತು ಸಂಯುಕ್ತ ಸಹಕಾರಿಯ ಬಗ್ಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿ ಶುಭಾಶಯವನ್ನು ಕೋರಿದರು.



## ಚಿಕ್ಕೋಡಿ ನೂತನ ಜಿಲ್ಲಾ ಸಂಪರ್ಕ ಕಛೇರಿ ಉದ್ಘಾಟನೆ

**ಬೆಳಗಾವಿ** : ದಿನಾಂಕ 20.04.2026 ರಂದು ಬಸವ ಜಯಂತಿ ಮತ್ತು ಅಕ್ಷಯ ತೃತೀಯ ಶುಭ ದಿನದಂದು ಚಿಕ್ಕೋಡಿ ನೂತನ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಪೂಜೆ ಸಲ್ಲಿಸಿ, ಕಛೇರಿ ಕಾರ್ಯಗಳನ್ನು ಪ್ರಾರಂಭಿಸಲಾಯಿತು.

## ನೂತನ ಸೌಹಾರ್ದ ಸಹಕಾರಿ ಸ್ಥಾಪನೆಗಾಗಿ ಪ್ರವರ್ತಕರ ಸಭೆ

**ಚಾಮರಾಜನಗರ** : ದಿನಾಂಕ 06.04.2026 ರಂದು ಚಾಮರಾಜನಗರ ಜಿಲ್ಲೆಯ ಚಾಮರಾಜನಗರದಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ಸಂಬಂಧ ಬಿಸಿಲವಾಡಿಯಲ್ಲಿ ಪ್ರವರ್ತಕರ ಸಭೆಯನ್ನು ಆಯೋಜಿಸಿದ್ದು ಈ ಸಭೆಯಲ್ಲಿ ಸಹಕಾರಿ ಸಂಘಗಳ ಕಾರ್ಯ ಚಟುವಟಿಕೆಗಳ ಕುರಿತು ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಮಾಹಿತಿಯನ್ನು ನೀಡಲಾಯಿತು. ಈ ಸಭೆಯಲ್ಲಿ 30 ಜನ ಪ್ರವರ್ತಕರುಗಳು ಭಾಗವಹಿಸಿದ್ದರು.

ದಿನಾಂಕ 17.04.2026ರಂದು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ತೋಮಿಯರ್ ಪಾಳ್ಯ ಇಲ್ಲಿ ನೂತನ ಸೌಹಾರ್ದ ಸಹಕಾರಿಯನ್ನು ರಚನೆ ಮಾಡುವ ಸಂಬಂಧ ಪ್ರವರ್ತಕರ ಸಭೆಯನ್ನು ಮಾಡಲಾಯಿತು ಈ ಸಭೆಯಲ್ಲಿ ಸಹಕಾರಿ ಸಂಘಗಳ ಕಾರ್ಯಚಟುವಟಿಕೆಗಳ ಕುರಿತು ಹಾಗೂ ಸೌಹಾರ್ದ ಸಹಕಾರಿ ಕಾಯ್ದೆಯ ಕುರಿತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರು ಮಾಹಿತಿಯನ್ನು ನೀಡಲಾಯಿತು. ಈ ಸಭೆಯಲ್ಲಿ 10 ಜನ ಪ್ರವರ್ತಕರುಗಳು ಭಾಗವಹಿಸಿದ್ದರು.

**ದಾವಣಗೆರೆ** : ದಿನಾಂಕ 25.04.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪಟ್ಟಣದಲ್ಲಿ ಹೊಸ ಸೌಹಾರ್ದ ಸಹಕಾರಿ ಪ್ರಾರಂಭದ ಕುರಿತು ಮುಖ್ಯ ಪ್ರವರ್ತಕರು ಹಾಗೂ ಪ್ರವರ್ತಕರ ಸಭೆಯನ್ನು ನಡೆಸಿ ಅಗತ್ಯ ಮಾಹಿತಿಯನ್ನು ನೀಡಿದರು,

## ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರುಗಳಿಗೆ ಆದಾಯ ತೆರಿಗೆ ಪ್ರಚಲಿತ ವಿದ್ಯಮಾನಗಳು ಕುರಿತು ಉಪನ್ಯಾಸ ಕಾರ್ಯಕ್ರಮ

**ಬೆಂಗಳೂರು** : ದಿನಾಂಕ 21.04.2026 ರಂದು ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸದಸ್ಯರುಗಳಿಗಾಗಿ "ಆದಾಯ ತೆರಿಗೆ ಸಂಬಂಧಿಸಿದಂತೆ ಇತ್ತೀಚಿನ ಬದಲಾವಣೆಗಳು ಮತ್ತು ಪ್ರಚಲಿತ ವಿಷಯಗಳು" ಎಂಬ ವಿಷಯದ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಬಿ.ವಿ ರವಿಂದ್ರನಾಥ, ಮಾನ್ಯ ಸನ್ನದು ಲೆಕ್ಕಪರಿಶೋಧಕರು, ಸಾಗರ ಇವರು ಸದರಿ ವಿಷಯದ ಕುರಿತು ಉಪನ್ಯಾಸ ನೀಡಿದರು.

## ಸನ್ಮಾನ

**ವಿಜಯಪುರ** : ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇದರ ನೂತನ ನಿರ್ದೇಶಕರಾಗಿ ನಾಮನಿರ್ದೇಶನರಾದ ಮಾನ್ಯ ಶ್ರೀ ಸಂಜಯ ಪಾಟೀಲ ಕನಮಡಿ ಇವರಿಗೆ ವರಸಿದ್ಧಿ ವಿನಾಯಕ ಸೌಹಾರ್ದ ಸಹಕಾರಿ ಸಂಘ ನಿ, ವಿಜಯಪುರ ವತಿಯಿಂದ ಆಡಳಿತ ಮಂಡಳಿಯ ಸದಸ್ಯರು ಹಾಗು ಸಿಬ್ಬಂದಿ ವರ್ಗ ಸನ್ಮಾನಿಸಿದರು

## ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ತರಬೇತಿ ಕಾರ್ಯಕ್ರಮ



**ಕೊಪ್ಪಳ :** ದಿನಾಂಕ 16.04.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಕೊಪ್ಪಳ ಜಿಲ್ಲೆಯಲ್ಲಿ ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ತರಬೇತಿಯನ್ನು ಗಂಗಾ-ಯಮುನಾ ಸೌಹಾರ್ದ ಸಹಕಾರಿ ನಿ., ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಜಿ. ಶ್ರೀಧರ ರವರು ನೆರವೇರಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಕೊಪ್ಪಳ ಜಿಲ್ಲಾ ಒಕ್ಕೂಟದ ನಿರ್ದೇಶಕರಾದ ಶ್ರೀ ಶಂಕರಗೌಡ ಹಿರೇಗೌಡ, ಕುಮಾರೆಪ್ಪ ಸಿಂಗನಾಳ ಹಾಗೂ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಉಪಸ್ಥಿತರಿದ್ದರು.

ಆರ್ಥಿಕ ತಃಖ್ತೆಗಳ ವಿಶ್ಲೇಷಣೆ ಹಾಗೂ ಲೆಕ್ಕಪತ್ರಗಳ ನಿರ್ವಹಣೆಯ ವಿಷಯದ ಕುರಿತು ಶ್ರೀ ಸುನಿಲ ಪತ್ತಾರ ಸಹಾಯಕ ನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆಯವರು ಉಪನ್ಯಾಸ ನೀಡಿದರು. ಸಹಕಾರಿಗಳಲ್ಲಿ ಆರ್ಥಿಕ ಶಿಸ್ತು ಹಾಗೂ ಸಹಕಾರಿಗಳು ಲಾಭದಲ್ಲಿ ಬರಲು ಅನುಸರಿಸಬೇಕಾದ ಕ್ರಮಗಳ ವಿಷಯದ ಕುರಿತು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ‍್ಯಾಕಲೆಯವರು ಉಪನ್ಯಾಸ ನೀಡಿದರು. ತರಬೇತಿ ಕಾರ್ಯಕ್ರಮದಲ್ಲಿ 104 ಪ್ರತಿನಿಧಿಗಳು ಭಾಗವಹಿಸಿದ್ದರು.

---

## ಆರ್ಥಿಕ ತಃಖ್ತೆಗಳ ಪೂರ್ವ ತಯಾರಿ ಕುರಿತಾದ ತರಬೇತಿ ಕಾರ್ಯಕ್ರಮ



**ಬೀದರ :** ದಿನಾಂಕ 16.04.2026 ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ ಕಲಬುರಗಿ ವತಿಯಿಂದ ಬೀದರ ಜಿಲ್ಲೆಯ ಸೌಹಾರ್ದ ಸಹಕಾರಿಗಳ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಾಹಕರುಗಳಿಗೆ ಆರ್ಥಿಕ ತಃಖ್ತೆಗಳ ಪೂರ್ವ ತಯಾ-ರಿಯ ಕುರಿತು ತರಬೇತಿಯನ್ನು ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿಯ ಸಾಮರ್ಥ್ಯ ಕೇಂದ್ರದ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ತರಬೇತಿಯ ಉದ್ಘಾಟನೆಯನ್ನು ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜ್ಯಾಂತಿಕರ್ ರವರು ನೆರವೇರಸಿದರು. ಉದ್ಘಾಟನಾ ನುಡಿಯಲ್ಲಿ ಎಲ್ಲಾ ಸೌಹಾರ್ದ ಸಹಕಾರಿಗಳು ನಿಗದಿತ ಸಮಯದಲ್ಲಿ ಲೆಕ್ಕಪರಿಶೋಧನಾ ವರದಿ ಸಲ್ಲಿಸುವಂತೆ ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸಂಜೀವ ಕುಮಾರ ಸಜ್ಜನ, ಮಾನ್ಯ ನಿರ್ದೇಶಕರು ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿ., ಬೀದರ ರವರು ವಹಿಸಿದ್ದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಬಸಣ್ಣ, ಮಾನ್ಯ ಉಪನಿರ್ದೇಶಕರು, ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಬೀದರ, ಶ್ರೀಮತಿ ಡಾ|| ನೀಲಾಂಬಿಕಾ ಮಾನ್ಯ ಸಹಾಯಕ ನಿಬಂಧಕರು, ಸಹಕಾರ ಸಂಘಗಳ ಇಲಾಖೆ, ಬೀದರ ಇವರು ಉಪಸ್ಥಿತರಿದ್ದರು. ಶ್ರೀಮತಿ ಡಾ|| ನೀಲಾಂಬಿಕಾ, ಮಾನ್ಯ ಸಹಾಯಕ ನಿಬಂಧಕರು ಇವರು ಮುಖ್ಯ ಅತಿಥಿಗಳ ನುಡಿಯಲ್ಲಿ ಲೆಕ್ಕಪರಿಶೋಧನಾ ವರದಿ ಸಹಕಾರಿಗಳ ಜೀವನಾಡಿಯಾಗಿದ್ದು ಅದನ್ನು ಸಕಾಲದಲ್ಲಿ ಕೈಗೊಳ್ಳುವಂತೆ ತಿಳಿಸಿದರು. ಸ್ವಾಗತವನ್ನು ಶ್ರೀ ಬಸವರಾಜ ಹುಡಗೆ ಮಾನ್ಯ ನಿರ್ದೇಶಕರು, ಬೀದರ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟ ಇವರು ನೆರವೇರಸಿದರು. ಪ್ರಾಸ್ತವಿಕ ನುಡಿಯನ್ನು ಸೌಹಾರ್ದ ಅಭಿವೃದ್ಧಿ ಅಧಿಕಾರಿ ರಾಜೇಶ ಕೆ.ಎಮ್ ರವರು ನುಡಿದರು. ಪ್ರಾರ್ಥನೆ ಮತ್ತು ನೀರೂಪಣೆಯನ್ನು ಕು, ಭವಾನಿಯವರು ನೆರವೇರಿಸಿದರು. ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಬಸಣ್ಣ, ಮಾನ್ಯ ಉಪನಿರ್ದೇಶಕರು ಸಹಕಾರ ಸಂಘಗಳ ಲೆಕ್ಕಪರಿಶೋಧನಾ ಇಲಾಖೆ ಬೀದರ ಆಗಮಿಸಿ ಲೆಕ್ಕಪರಿಶೋಧನಾ ವರದಿ ತಯಾರಿಸುವಲ್ಲಿ ದಾಖಲಾತಿಗಳ ತಯಾರಿಬೇಕಾದ ಕ್ರಮಗಳ ಕುರಿತು ಉಪನ್ಯಾಸ ನೀಡಿದರು.

---

**ವಿಜಯಪುರ :** ಸಂಯುಕ್ತ ಸಹಕಾರಿಯ ನೂತನ ನಿರ್ದೇಶಕರಾಗಿ ನಾಮ ನಿರ್ದೇಶಕರಾದ ಮಾನ್ಯ ಶ್ರೀ ಸಂಜಯ ಪಾಟೀಲ ಇವರನ್ನು ದಿನಾಂಕ 03.04.2026 ರಂದು ಭೇಟಿ ನೀಡಿ, ಸಂಯುಕ್ತ ಸಹಕಾರಿಯ ಪರವಾಗಿ ಗೌರವಿಸಿ ಶುಭ ಕೋರಲಾಯಿತು.

**ಚಿತ್ರದುರ್ಗ :** ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ರಘುರಾಮರೆಡ್ಡಿ ರವರು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ, ಚಿತ್ರದುರ್ಗ ಇದರ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಹೂಗುಚ್ಛವನ್ನು ನೀಡುವುದರ ಮೂಲಕ ಅಭಿನಂದನೆಗಳನ್ನು ಸಲ್ಲಿಸಿದರು.

## ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳು ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸಭೆಗಳಲ್ಲಿ ಮಾರ್ಗದರ್ಶನ

**ದಕ್ಷಿಣ ಕನ್ನಡ :** ದಿನಾಂಕ 20.04.2026 ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಯವರಾದ ಶ್ರೀ ನಂದನ್ ಬಿ.ಎನ್ ರವರು ಪರಸ್ಪರ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿಯ ಸಭೆಯಲ್ಲಿ ಭಾಗವಹಿಸಲಾಯಿತು. ಸದರಿ ಸಭೆಯಲ್ಲಿ ಸಹಕಾರಿಯ ನಿರ್ದೇಶಕರ ಹಕ್ಕುಗಳು, ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಕುರಿತು ಮಾಹಿತಿಯನ್ನು ನೀಡಲಾಯಿತು ಮತ್ತು ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪ್ರಮುಖ ಅಂಶಗಳ ಬಗ್ಗೆ ಮಾಹಿತಿಯನ್ನು ಶ್ರೀ ನಂದನ್ ಬಿ.ಎನ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ ದಕ್ಷಣ ಕನ್ನಡ ಜಿಲ್ಲೆ ಇವರು ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಯಲ್ಲಿ ಸಹಕಾರಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಸೇರಿದಂತೆ 09 ಮಂದಿ ಹಾಜರಿದ್ದರು.

ದಿನಾಂಕ 16.04.2026 ರಂದು ಶ್ರೀ ನಂದನ್ ಬಿ.ಎನ್ ರವರು ಸುಗ್ಗಿ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿಯ ಸಭೆಯಲ್ಲಿ ಭಾಗವಹಿಸಲಾಯಿತು. ಸದರಿ ಸಭೆಯಲ್ಲಿ ಸಹಕಾರಿಯ ನಿರ್ದೇಶಕರ ಹಕ್ಕುಗಳು, ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಕುರಿತು ಮಾಹಿತಿಯನ್ನು ನೀಡಲಾಯಿತ್ತು ಮತ್ತು ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪ್ರಮುಖ ಅಂಶಗಳ ಬಗೆ ಮಾಹಿತಿಯನ್ನು ಶ್ರೀ ನಂದನ್ ಬಿ.ಎನ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ ದಕ್ಷಿಣ ಕನ್ನಡ ಜಿಲ್ಲೆ ಇವರು ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಯಲ್ಲಿ ಸಹಕಾರಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯ ಕಾರ್ಯನಿರ್ವಾಹಕರು ಸೆರಿದಂತೆ 08 ಮಂದಿ ಹಾಜರಿದ್ದರು.

ದಿನಾಂಕ 18.04.2026 ರಂದು ತುಳುನಾಡು ಕಲ್ಪವೃಕ್ಷ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿಯ ಸಭೆಯಲ್ಲಿ ಶ್ರೀ ನಂದನ್ ಬಿ.ಎನ್. ಭಾಗವಹಿಸಲಾಯಿತು. ಸದರಿ ಸಭೆಯಲ್ಲಿ ಸಹಕಾರಿಯ ನಿರ್ದೇಶಕರ ಹಕ್ಕುಗಳು, ಜವಾಬ್ದಾರಿಗಳು ಮತ್ತು ಕರ್ತವ್ಯಗಳು ಕುರಿತು ಮಾಹಿತಿಯನ್ನು ನೀಡಿದರು. ಮತ್ತು ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಪ್ರಮುಖ ಅಂಶಗಳ ಬಗ್ಗೆ ಮಾಹಿತಿಯನ್ನು ಶ್ರೀ ನಂದನ್ ಬಿ.ಎನ್. ಸೌಹಾರ್ದ ಅಭಿವೃದ್ಧಿ ಅಧಿಕಾರಿ ದಕ್ಷಣ ಕನ್ನಡ ಜಿಲ್ಲೆ ಇವರು ಮಾಹಿತಿಯನ್ನು ನೀಡಲಾಯಿತು. ಸದರಿ ಸಭೆಯಲ್ಲಿ ಸಹಕಾರಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಮುಖ್ಯಕಾರ್ಯನಿರ್ವಾಹಕರು ಸೆರಿದಂತೆ 08 ಮಂದಿ ಹಾಜರಿದ್ದರು.

**ಬೆಂಗಳೂರು ದಕ್ಷಿಣ :** ದಿನಾಂಕ 03.04.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಹೊಂಬಾಳೆ ಗ್ರಾಮೀಣ ಮಹಿಳಾ ಸೌಹಾರ್ದ ಪತ್ತಿನ ಸಹಕಾರಿ ನಿ, ಬೆಂಗಳೂರು ದಕ್ಷಿಣ ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.

**ತುಮಕೂರು :** ದಿನಾಂಕ 04.04.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಶಿರಾ ತಾಲೂಕು ಶಿಕ್ಷಣ ಇಲಾಖೆ ನೌಕರರ ಸೌಹಾರ್ದ ಸಹಕಾರಿ ಸಂಘ ನಿ., ಶಿರಾ ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿ, ಆಡಳಿತ ಮಂಡಲಿ ಸಭೆಗಳನ್ನು ನಡೆಸುವ ವಿಧಾನ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 07.04.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಸಪ್ತಋಷಿ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ., ತುಮಕೂರು ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿ, ಆಡಳಿತ ಮಂಡಲಿ ಸಭೆಗಳನ್ನು ನಡೆಸುವ ವಿಧಾನ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 10.04.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಶ್ರೀ ಮಾತಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘ ನಿ, ಪಾವಗಡ ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಹಕ್ಕುಗಳು ಮತ್ತು ಜವಾಬ್ದಾರಿ, ಆಡಳಿತ ಮಂಡಲಿ ಸಭೆಗಳನ್ನು ನಡೆಸುವ ವಿಧಾನ ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

ದಿನಾಂಕ 17.04.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಗಾಣಿಗ ಸೌಹಾರ್ದ ಪತ್ತಿನ ಸಹಕಾರಿ ಸಂಘ ನಿ, ತುಮಕೂರು ಇದರ ಅಡಳಿತ ಮಂಡಲಿ ಸಭೆಯಲ್ಲಿ ಭಾಗವಹಿಸಿ

ಸಂಯುಕ್ತ ಸಹಕಾರಿಯ ಸುತ್ತೋಲೆಗಳ ಅಂಶಗಳು ಹಾಗೂ ಸೌಹಾರ್ದ ಕಾಯ್ದೆ ತಿದ್ದುಪಡಿ–2025ರ ಅಂಶಗಳ ಕುರಿತು ಮಾಹಿತಿ ನೀಡಿದರು.

**ಬೆಂಗಳೂರು** : ದಿನಾಂಕ 07.04.2026ರಂದು ಮಹೇಂದ್ರ ಸೌಹಾರ್ದ ಕ್ರೆಡಿಟ್ ಸಹಕಾರಿ ನಿ, ಬೆಂಗಳೂರು ಇದರ ಸಿಬ್ಬಂದಿ ನೇಮಕಾತಿ ಸಭೆಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಸಂಯುಕ್ತ ಸಹಕಾರಿಯ ಪ್ರತಿನಿಧಿಯಾಗಿ ಭಾಗವಹಿಸಿದ್ದರು.

**ಬೆಳಗಾವಿ** : ದಿನಾಂಕ 04.04.2026 ರಂದು ಶ್ರೀ ಬಸವೇಶ್ವರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ, ಗೋಕಾಕ ಸಹಕಾರಿಗೆ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ರಾಚಯ್ಯ ಹಿರೇಮಠ ಇವರು ಭೇಟಿ ನೀಡಿ ಸಹಕಾರಿಯ ಸುಸ್ತಿ ಸಾಲಗಳ ಹಾಗೂ ಸಹಕಾರಿಯ ಇನ್ನಿತರ ಕಾರ್ಯಚಟುವಟಿಕೆಗಳ ಬಗ್ಗೆ ಸಹಕಾರಿಯ ಆಡಳಿತ ಮಂಡಳಿಯ ಸಭೆಯ ಸದಸ್ಯರ ಸಮ್ಮುಖದಲ್ಲಿ ಚರ್ಚೆ ಮಾಡಿ ಸಹಕಾರಿಯ ಸುಸ್ತಿ ಸಾಲಗಳ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದರು.

**ವಿಜಯಪುರ:** ದಿನಾಂಕ 15.04.2026 ರಂದು ಶ್ರೀ ಶ್ರೀ ಶ್ರೀ ವಿನಾಯಕ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿ, ನಿಡಗುಂದಿ ಈ ಸಹಕಾರಿಯ ಆಡಳಿತ ಮಂಡಳಿ ಸಭೆಯಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಹಟ್ಟಿ ಇವರು ಭಾಗವಹಿಸಿ ಅಗತ್ಯ ಮಾಹಿತಿ ನೀಡಿದರು.

**ಬಾಗಲಕೋಟ** : ದಿನಾಂಕ 21.04.2026 ರಂದು ಜಿಲ್ಲಾ ಸಂಪರ್ಕ ಕಚೇರಿ, ಬಾಗಲಕೋಟೆಯಲ್ಲಿ ಸಮಸ್ಯಾತ್ಮಕ ಸಹಕಾರಿಯಾದ ನೀಲಗಿರೇಶ್ವ ಸೌಹಾರ್ದ ಸಹಕಾರಿ ಸಂಘದ ಹಿಂದಿನ ಆಡಳಿತ ಮಂಡಳಿ ಸದಸ್ಯರ ಮತ್ತು ಸಿಬ್ಬಂದಿಗಳ ಸಭೆಯನ್ನು ಟಾಸ್ಕ್ ಫೋರ್ಸ್ ಅಧಿಕಾರಿಗಳ ಸಮ್ಮುಖದಲ್ಲಿ ಆಯೋಜಿಸಲಾಗಿತ್ತು.

**ಬೆಂಗಳೂರು** : ದಿನಾಂಕ 25.04.2026ರಂದು ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಲಕ್ಷ್ಮೀಕಾಂತ್ ಎ.ಎಂ ರವರು ಎಸ್.ಎಲ್.ವಿ ಸೌಹಾರ್ದ ಪತ್ತಿನ ಸಹಕಾರಿ ನಿ, ಬೆಂಗಳೂರು ಇದರ ಆಡಳಿತ ಮಂಡಳಿ ಸಭೆಯಲ್ಲಿ ಭಾಗವಹಿಸಿ ನಿರ್ದೇಶಕರ ಜವಾಬ್ದಾರಿಗಳು ಮತ್ತು ಕರ್ತವ್ಯಗಳ ಕುರಿತು ಮಾಹಿತಿ ನೀಡಿದರು.



## ಶ್ರೀ ಕೆ.ಎನ್ ರಾಜಣ್ಣ ಇವರ 76ನೇ ವರ್ಷದ ಹುಟ್ಟು ಹಬ್ಬದ ಆಚರಣೆ

**ತುಮಕೂರು** : ದಿನಾಂಕ 13.04.2026ರಂದು ಕರ್ನಾಟಕ ಸರ್ಕಾರದ ಮಾಜಿ ಸಹಕಾರ ಸಚಿವರಾದ ಶ್ರೀ ಕೆ.ಎನ್ ರಾಜಣ್ಣ ರವರ 76ನೇ ವರ್ಷದ ಹುಟ್ಟುಹಬ್ಬದ ಪ್ರಯುಕ್ತ ಅವರ ನಿವಾಸಕ್ಕೆ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಸಿ.ಪಿ. ವಿಜಯ್ ರವರು ಭೇಟಿ ನೀಡಿ ಹುಟ್ಟು ಹಬ್ಬದ ಶುಭಾಶಯಗಳನ್ನು ಕೋರಿದರು. ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಉಮೇಶ್ ಎ.ಎಸ್. ರವರು ಉಪಸ್ಥಿತರಿದ್ದರು.

## ಮಹಾಂತಶ್ರೀ ಸೌಹಾರ್ದ ಸಹಕಾರಿ ಸಂಘದ ಉದ್ಘಾಟನೆ




**ಯಾದಗಿರಿ** : ದಿನಾಂಕ 20.04.2026 ರಂದು ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ನೂತನ ಸಹಕಾರಿಯಾದ ಶ್ರೀ ಮಹಾಂತಶ್ರೀ ಸೌಹಾರ್ದ ಸಹಕಾರಿ ಸಂಘದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀಮತಿ ಶೈಲಜಾ ತಪಲಿ ರವರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಸೂರ್ಯಕಾಂತ ರ್‍ಯಾಕಲೆ ರವರು, ಸಹಕಾರಿ ಆಡಳಿತ ಮಂಡಳಿಯ ಸದಸ್ಯರು, ಸಿಬ್ಬಂದಿಗಳು ಮತ್ತು ಸೌಹಾರ್ದ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಪವನ್ ಉಪಸ್ಥಿತರಿದ್ದರು.

# ನಷ್ಟದಲ್ಲಿರುವ ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿ ಸದಸ್ಯರ ವಿಶೇಷ ಸಭೆ

**ಉಡುಪಿ : ದಿನಾಂಕ 24.04.2026 ರಂದು ಬೆಳಿಗ್ಗೆ 10.30 ಘಂಟೆಗೆ ಶ್ರೀ ಅಂಭಾ ಭವಾನಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,** ಇದರ ವಿಶೇಷ ಆಡಳಿತ ಮಂಡಳಿ ಸದಸ್ಯರ ಸಭೆಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ. ರವರು ವಹಿಸಿದ್ದರು. ಈ ಸದರಿ ಸಭೆಯಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಭಾಗವಹಿಸಿದ್ದರು. ಈ ವಿಶೇಷ ಆಡಳಿತ ಮಂಡಳಿಯ ಸಭೆಯಲ್ಲಿ ಸಹಕಾರಿಯ 2024–25ನೇ ಸಾಲಿನ ಲೆಕ್ಕಪ–ರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನತೆಗಳ ಕುರಿತು, ಸಾಲ ವಸೂಲಾತಿಯ ಕುರಿತು ರೂಪಿಸಿರುವ ಕಾರ್ಯಯೋಜನೆ, ನಷ್ಟದಿಂದ ಹೊರಬರಲು ಆಡಳಿತ ಮಂಡಳಿಯು ರೂಪಿಸಿರುವ ಕಾರ್ಯಯೋಜನೆ ಕುರಿತು, ಸಹಕಾರಿಯ ಶಾಸನ ಬದ್ದ ಮಾಹಿತಿಗಳನ್ನು ನಿಗಧಿತ ಅವಧಿಗೆ ಸಲ್ಲಿಕೆ ಮತ್ತು ಆರ್ಥಿಕ ತಖ್ತೆಗಳ ವಿವರಣೆ ಸಲ್ಲಿಸುವ ಬಗ್ಗೆ, ಮತ್ತು ಸಹಕಾ–ರಿಯ ಪ್ರಸ್ತುತ ಆರ್ಥಿಕ ಕಾರ್ಯಚಟುವಟಿಕೆಗಳ ಕುರಿತು, ಸುಸ್ತಿ ಸಾಲ ವಸೂಲಾತಿ ಕುರಿತಾದ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಸಭೆಯ ಸ್ವಾಗತ ಮತ್ತು ವಂದನಾರ್ಪಣೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ. ಎಸ್. ರವರು ನೆರವೇರಿಸಿದರು.

ಈ ವಿಶೇಷ ಆಡಳಿತ ಮಂಡಳಿ ಸಭೆಯಲ್ಲಿ ಶ್ರೀ ಅಂಭಾ ಭವಾನಿ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳು ಸೇರಿದಂತೆ ಒಟ್ಟು 10 ಸದಸ್ಯರು ಹಾಜರಾಗಿದ್ದರು.

**ದಿನಾಂಕ 24.04.2026 ರಂದು ಮಧ್ಯಾಹ್ನ 12.30 ಘಂಟೆಗೆ ಉಡುಪಿ ಬಸ್ ಮಾಲಕರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,** ಇದರ ವಿಶೇಷ ಆಡಳಿತ ಮಂಡಳಿ ಸದಸ್ಯರ ಸಭೆಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ. ರವರು ವಹಿಸಿದ್ದರು. ಈ ಸದರಿ ಸಭೆಯಲ್ಲಿ ಮೈಸೂರು ಪ್ರಾಂತೀಯ ಅಧಿಕಾರಿಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಭಾಗವಹಿಸಿದ್ದರು. ಈ ವಿಶೇಷ ಆಡಳಿತ ಮಂಡಳಿಯ ಸಭೆಯಲ್ಲಿ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನತೆಗಳ ಕುರಿತು, ಸಾಲ ವಸೂಲಾತಿಯ ಕುರಿತು ರೂಪಿಸಿರುವ ಕಾರ್ಯಯೋಜನೆ, ನಷ್ಟದಿಂದ ಹೊರಬರಲು ಆಡಳಿತ ಮಂಡಳಿಯು ರೂಪಿಸಿರುವ ಕಾರ್ಯಯೋಜನೆ ಕುರಿತು, ಸಹಕಾರಿಯ ಶಾಸನ ಬದ್ದ ಮಾಹಿತಿ ಮತ್ತು ಆರ್ಥಿಕ ತಖ್ತೆಗಳ ವಿವರಣೆ ಸಲ್ಲಿಸುವ ಬಗ್ಗೆ, ಮತ್ತು ಸಹಕಾರಿಯ ಪ್ರಸ್ತುತ ಆರ್ಥಿಕ ಕಾರ್ಯಚಟುವಟಿಕೆಗಳ ಕುರಿತು, ಸುಸ್ತಿ ಸಾಲ ವಸೂಲಾತಿ ಕುರಿತಾದ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಸಭೆಯ ಸ್ವಾಗತ ಮತ್ತು ವಂದನಾರ್ಪಣೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿಜಯ್ ಬಿ. ಎಸ್. ರವರು ನೆರವೇ–ರಿಸಿದರು.

ಈ ವಿಶೇಷ ಆಡಳಿತ ಮಂಡಳಿ ಸದಸ್ಯರ ಸಭೆಯಲ್ಲಿ ಉಡುಪಿ ಬಸ್ ಮಾಲಕರ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳು ಸೇರಿದಂತೆ ಒಟ್ಟು 6 ಸದಸ್ಯರು ಹಾಜರಾಗಿದ್ದರು.

**ದಿನಾಂಕ : 24.04.2026 ರಂದು ಮಧ್ಯಾಹ್ನ 2.30 ಘಂಟೆಗೆ ಧನಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ.,** ಇದರ ವಿಶೇಷ ಆಡಳಿತ ಮಂಡಳಿ ಸದಸ್ಯರ ಸಭೆಯನ್ನು ಉಡುಪಿ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಆಯೋಜನೆ ಮಾಡಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇದರ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್. ಕೆ. ರವರು ವಹಿಸಿದ್ದರು. ಈ ಸದರಿ ಸಭೆಯಲ್ಲಿ ಮೈಸೂರು ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಗುರುಪ್ರಸಾದ್ ಬಂಗೇರಾ ರವರು ಭಾಗವಹಿಸಿದ್ದರು. ಈ ವಿಶೇಷ ಆಡಳಿತ ಮಂಡಳಿಯ ಸಭೆಯಲ್ಲಿ ಸಹಕಾರಿಯ 2024–25ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಕಂಡುಬಂದಿರುವ ನ್ಯೂನತೆಗಳ ಕುರಿತು, ಸಾಲ ವಸೂಲಾತಿಯ ಕುರಿತು ರೂಪಿಸಿರುವ ಕಾರ್ಯಯೋಜನೆ, ನಷ್ಟದಿಂದ ಹೊರಬರಲು ಆಡಳಿತ ಮಂಡಳಿಯು ರೂಪಿಸಿರುವ ಕಾರ್ಯಯೋಜನೆ ಕುರಿತು, ಸಹಕಾರಿಯ ಶಾಸನ ಬದ್ದ ಮಾಹಿತಿ ಮತ್ತು ಆರ್ಥಿಕ ತಖ್ತೆಗಳ ವಿವರಣೆ ಸಲ್ಲಿಸುವ ಬಗ್ಗೆ, ಮತ್ತು ಸಹಕಾರಿಯ ಪ್ರಸ್ತುತ ಆರ್ಥಿಕ ಕಾರ್ಯಚಟುವಟಿಕೆಗಳ ಕುರಿತು, ಸುಸ್ತಿ ಸಾಲ ವಸೂಲಾತಿ ಕು–ರಿತಾದ ಅಂಶಗಳ ಬಗ್ಗೆ ಚರ್ಚಿಸಲಾಯಿತು. ಸಭೆಯ ಸ್ವಾಗತ ಮತ್ತು ವಂದನಾರ್ಪಣೆಯನ್ನು ಉಡುಪಿ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾ–ರಿಗಳಾದ ಶ್ರೀ ವಿಜಯ್ ಬಿ. ಎಸ್. ರವರು ನೆರವೇರಿಸಿದರು.

ಈ ವಿಶೇಷ ಆಡಳಿತ ಮಂಡಳಿ ಸದಸ್ಯರ ಸಭೆಯಲ್ಲಿ ಧನಶ್ರೀ ವಿವಿದೋದ್ದೇಶ ಸೌಹಾರ್ದ ಸಹಕಾರಿ ನಿ., ಇದರ ಆಡಳಿತ ಮಂಡಳಿ ಸದಸ್ಯರು ಮತ್ತು ಸಿಬ್ಬಂದಿಗಳು ಸೇರಿದಂತೆ ಒಟ್ಟು 06 ಸದಸ್ಯರು ಹಾಜರಾಗಿದ್ದರು.

# ಸಂವಿಧಾನ ಶಿಲ್ಪಿ ಡಾ. ಬಿ. ಆರ್ ಅಂಬೇಡ್ಕರ್ ಜಯಂತಿ ಆಚರಣೆ



**ಬೆಂಗಳೂರು :** ದಿನಾಂಕ 14.04.2026 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಆರ್ ಅಂಬೇಡ್ಕರ್ ರವರ 135ನೆಯ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎ.ಆರ್ ಪ್ರಸನ್ನಕುಮಾರ, ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ ಹಾಗೂ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ, ದಾವಾ ಪಂಚಾಯ್ತಿ ನ್ಯಾಯಾಲಯದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮೈಸೂರು :** ದಿನಾಂಕ 14.04.2026ರಂದು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಆರ್ ಅಂಬೇಡ್ಕರ್ ರವರ 135ನೆಯ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಪ್ರಾಂತದ ನಿರ್ದೇಶಕರಾದ ಶ್ರೀ ಮಂಜುನಾಥ್ ಸರ್ ರವರು ಉಪಸ್ಥಿತರಿದ್ದರು ಹಾಗೂ ಮಾರ್ಗದರ್ಶನ ಮಾಡಿದರು. ಅಂಬೇಡ್ಕರ್ ಅವರು ಸಂವಿಧಾನ ಜಾರಿಯಲ್ಲಿ ಅವರ ಪಾತ್ರ ಅವರ ಕೊಡುಗೆಗಳ ಕುರಿತು ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪ್ರಾಂತೀಯ ಅಧಿಕಾರಿ ಯವರಾದ ಶ್ರೀ ಗುರುಪ್ರಸಾದ್ ಬಂಗೇರರವರು, ಪ್ರಾಂತದ ಸಿಬ್ಬಂದಿಗಳು ಹಾಗೂ ಕೇಂದ್ರ ಕಛೇರಿ ಸಿಬ್ಬಂದಿಗಳು ಭಾಗವಹಿಸಿದ್ದರು.



**ಬೆಳಗಾವಿ :** ದಿನಾಂಕ 14.04.2026 ರಂದು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಬೆಳಗಾವಿಯಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ರವರ 135ನೇಯ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಮತ್ತು ಸಿಬ್ಬಂದಿಗಳು ಹಾಜರಿದ್ದರು.



**ಕಲಬುರಗಿ :** ದಿನಾಂಕ 14.04.2026 ರಂದು ಸಂಯುಕ್ತ ಸಹಕಾರಿಯ ಪ್ರಾಂತೀಯ ಕಛೇರಿ ಕಲಬುರಗಿಯಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್‌ರವರ 135ನೇಯ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಸಮಾಜ ಮತ್ತು ದೇಶಕ್ಕೆ ಅವರು ನೀಡಿರುವ ಕೊಡುಗೆಗಳ ಕುರಿತು ಮಾಹಿತಿ ನೀಡಿದರು.



**ಬೀದರ :** ದಿನಾಂಕ 14.04.2026 ರಂದು ಸಂಯುಕ್ತ ಸಹಕಾರಿಯ ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ. ಆರ್. ಅಂಬೇಡ್ಕರ್ ರವರ 135ನೇಯ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ್ ಹಾಗೂ ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ವಿಶ್ವಗುರು ಬಸವಣ್ಣನವರ ಜಯಂತಿ ಆಚರಣೆ



**ಬೆಂಗಳೂರು** : ದಿನಾಂಕ 20.04.2026 ರಂದು ಸಂಯುಕ್ತ ಸಹಕಾರಿಯ ಕೇಂದ್ರ ಕಛೇರಿಯಲ್ಲಿ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಹೆಚ್.ಜೆ ಹನುಮಂತ ಶೆಟ್ಟಿ ಹಾಗೂ ಮಾನ್ಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಶರಣಗೌಡ ಜಿ. ಪಾಟೀಲ್ ಹಾಗೂ ಕೇಂದ್ರ ಕಛೇರಿ, ಬೆಂಗಳೂರು ಪ್ರಾಂತೀಯ ಕಛೇರಿ, ದಾವಾ ಪಂಚಾಯ್ತಿ ನ್ಯಾಯಾಲಯದ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



**ಮೈಸೂರು** : ದಿನಾಂಕ 20.04.2026 ರಂದು ಸಂಯುಕ್ತ ಸಹಕಾರಿಯ ಮೈಸೂರು ಪ್ರಾಂತೀಯ ಕಛೇರಿಯಲ್ಲಿ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಂತೀಯ ಅಧಿಕಾರಿ ಯವರಾದ ಶ್ರೀ ಗುರುಪ್ರಸಾದ್ ಬಂಗೇರ ರವರು ಉಪಸ್ಥಿತರಿದ್ದು ಬಸವಣ್ಣ ನವರ ಕುರಿತು ಸಿಬ್ಬಂದಿಗಳಿಗೆ ಮಾರ್ಗದರ್ಶನ ಮಾಡಿದರು. ಈ ಸಂದರ್ಭದಲ್ಲಿ ಪ್ರಾಂತದ ಸಿಬ್ಬಂದಿಗಳು ಭಾಗವಹಿಸಿದ್ದರು.



**ಬೆಳಗಾವಿ** : ದಿನಾಂಕ 20.04.2026 ರಂದು ಪ್ರಾಂತೀಯ ಕಛೇರಿ, ಬೆಳಗಾವಿಯಲ್ಲಿ ಶ್ರೀ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನೂ ಆಚರಿಸಲಾಯಿತು. ಈ ಸಂಧರ್ಭದಲ್ಲಿ ಮಾನ್ಯ ಪ್ರಾಂತೀಯ ವ್ಯವಸ್ಥಾಪಕರು ಹಾಗೂ ಪ್ರಾಂತೀಯ ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಕಲಬುರಗಿ** : ದಿನಾಂಕ 20.04.2026 ರಂದು ಸಂಯುಕ್ತ ಸಹಕಾರಿಯ ಕಲಬುರಗಿ ಪ್ರಾಂತೀಯ ಕಛೇರಿಯಲ್ಲಿ ಕಾಯಕವೇ ಕೈಲಾಸ ಎಂದು ಸಾರಿದ, 12ನೆಯ ಶತಮಾನದ ತತ್ವಜ್ಞಾನಿ, ಸಮಾಜ ಸುಧಾರಕರಾದ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಪ್ರಾಂತೀಯ ವ್ಯವಸ್ಥಾಪಕರು ಬಸವಣ್ಣನವರ ಕುರಿತು ಆದರ್ಶ ತತ್ವಗಳ ಕುರಿತು ಮಾಹಿತಿ ನೀಡಿದರು. ಕಛೇರಿಯ ಸಿಬ್ಬಂದಿಗಳು ಉಪಸ್ಥಿತರಿದ್ದರು.



**ಬೀದರ** : ದಿನಾಂಕ 20.04.2026 ರಂದು ಬೀದರ ಜಿಲ್ಲಾ ಸಂಪರ್ಕ ಕಛೇರಿಯಲ್ಲಿ ಶ್ರೀ ವಿಶ್ವಗುರು ಬಸವಣ್ಣನವರ 893ನೇ ಜಯಂತಿಯನ್ನೂ ಆಚರಿಸಲಾಯಿತು. ಈ ಸಂದರ್ಭದಲ್ಲಿ ಸಂಯುಕ್ತ ಸಹಕಾರಿಯ ಮಾನ್ಯ ನಿರ್ದೇಶಕರಾದ ಶ್ರೀ ಗುರುನಾಥ ಜಾಂತಿಕರ್ ಅವರು ಬಸವಣ್ಣನವರ ಕುರಿತು ಮಾತನಾಡಿದರು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಯಾಗಿ ಶ್ರೀ ಬಾಬುರಾವ ಕಾರ್ಬಾರಿ ಆಗಮಿಸಿದರು. ಬೀದರ್ ಜಿಲ್ಲಾ ಸೌಹಾರ್ದ ಸಹಕಾರಿಗಳ ಒಕ್ಕೂಟದ ನಿರ್ದೇಶಕರಾದ ಶ್ರೀ ಜಗನ್ನಾಥ ಕರಂಜೆ, ಶ್ರೀ ಶ್ರೀಕಾಂತ ಸ್ವಾಮಿ, ಶ್ರೀ ಸಂಜೀವಕುಮಾರ ಸಜ್ಜನ್, ಶ್ರೀ ಶ್ರೀಕಾಂತ ಮೋದಿ, ಸ್ಥಳೀಯ ಸಹಕಾರಿಗಳು ಮತ್ತು ಕಛೇರಿಯ ಸಿಬ್ಬಂದಿ ಉಪಸ್ಥಿತರಿದ್ದರು.

# ರಾಜ್ಯದ ವಿವಿಧ ಸೌಹಾರ್ದ ಸಹಕಾರಿಗಳು ಹಾಗೂ ಸೌಹಾರ್ದ ಸಹಕಾರಿ ಬ್ಯಾಂಕುಗಳು ಸಾಧಿಸಿದ 2025-26ನೇ (ಮಾರ್ಚ್ 2026ಕ್ಕೆ ಇದ್ದಂತೆ) ವರ್ಷಾಂತ್ಯಕ್ಕೆ ಆರ್ಥಿಕ ಅಂಕಿ ಸಂಖ್ಯೆಗಳು

**ಹೊಯ್ಸಳ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಚೆಳ್ಳಕೆರೆ.**

| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ (ಕೋಟಿಗಳಲ್ಲಿ) |
|---|---|
| ಶೇರು ಬಂಡವಾಳ | 2.56 |
| ಒಟ್ಟು ನಿಧಿಗಳು | 35.65 |
| ಒಟ್ಟು ಠೇವಣಿಗಳು | 52.64 |
| ಒಟ್ಟು ಸಾಲಗಳು | 78.11 |
| ಒಟ್ಟು ಹೂಡಿಕೆಗಳು | 33.62 |
| ಒಟ್ಟು ವ್ಯವಹಾರ | 130.35 |
| ನಿವ್ವಳ ಲಾಭ | 6.01 |

**ಅರಿವಿನ ಮನೆ ತಾವರೆಕೆರೆ ಸೌಹಾರ್ದ ಸಹಕಾರಿ ನಿ., ತಾವರೆಕೆರೆ ದಾವಣಗೆರೆ.**

| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 15,74,600 |
| ಒಟ್ಟು ನಿಧಿಗಳು | 16,09,781.93 |
| ಒಟ್ಟು ಠೇವಣಿಗಳು | 1,08,32,317.64 |
| ಒಟ್ಟು ಸಾಲಗಳು | 1,10,30,889.00 |
| ನಿವ್ವಳ ಲಾಭ | 7,91,472.49 |

**ಆದಿಶಕ್ತಿ ಪತ್ತಿನ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹಾನಗಲ್ಲ**

| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
|---|---|
| ಠೇವಣಿಗಳು | 5.13 ಕೋಟಿ |
| ಸಾಲ ಹಾಗೂ ಮುಂಗಡಗಳು | 5.63 ಕೋಟಿ |
| ಒಟ್ಟು ವ್ಯವಹಾರ | 10.76 ಕೋಟಿ |
| ಹೂಡಿಕೆಗಳು | 1.74 ಕೋಟಿ |
| ಷೇರು ಬಂಡವಾಳ | 12.52 ಲಕ್ಷ |
| ನಿವ್ವಳ ಲಾಭ | 40.47 ಲಕ್ಷ |

**ಶ್ರೀ ಕಟಕೋಳ ಸಿದ್ರಾಯಜ್ಜನವರ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಯರಗಟ್ಟಿ**

| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
|---|---|
| ಸದಸ್ಯರ ಸಂಖ್ಯೆ | 3038 |
| ಶೇರು ಬಂಡವಾಳ | 11,32,600/– |
| ಒಟ್ಟು ನಿಧಿಗಳು | 1,09,03,795/– |
| ಒಟ್ಟು ಠೇವಣಿಗಳು | 16,92,40,506/– |
| ಒಟ್ಟು ಸಾಲಗಳು | 14,01,64,332/– |
| ಒಟ್ಟು ಹೂಡಿಕೆಗಳು | 2,50,09,601/– |
| ದುಡಿಯುವ ಬಂಡವಾಳ | 18,12,76,901/– |
| ಒಟ್ಟು ವ್ಯವಹಾರ | 75,11,26,219/– |
| ನಿವ್ವಳ ಲಾಭ | 30,20,178 /– |
| ವಿವಿಧ ಬ್ಯಾಂಕಗಳಲ್ಲಿ | 1,75,27,275/– |
| ಶಾಖೆಗಳು | 3 |

**ನಾಗನೂರ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ನಾಗನೂರ, ಬೆಳಗಾವಿ.**

| ಆರ್ಥಿಕ ಅಂಶಗಳು | 31.03.2026ಕ್ಕೆ ಇದ್ದಂತೆ |
|---|---|
| ಶೇರು ಬಂಡವಾಳ | 01 ಕೋಟಿ 07 ಲಕ್ಷ |
| ಒಟ್ಟು ನಿಧಿಗಳು | 16 ಕೋಟಿ 47 ಲಕ್ಷ |
| ಒಟ್ಟು ಠೇವಣಿಗಳು | 206 ಕೋಟಿ 75 ಲಕ್ಷ |
| ಒಟ್ಟು ಸಾಲ ಮತ್ತು ಮುಂಗಡಗಳು | 168 ಕೋಟಿ 40 ಲಕ್ಷ |
| ಒಟ್ಟು ಹೂಡಿಕೆಗಳು | 43 ಕೋಟಿ 96 ಲಕ್ಷ |
| ದುಡಿಯುವ ಬಂಡವಾಳ | 227 ಕೋಟಿ 35 ಲಕ್ಷ |
| ನಿವ್ವಳ ಲಾಭ | 2 ಕೋಟಿ 75 ಲಕ್ಷ |
| ಸಾಲ ವಸೂಲಾತಿ ಪ್ರಮಾಣ | 98.40% |
| ಒಟ್ಟು ಶಾಖೆಗಳು | 19+1 |



## ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್‌ನ ನೂತನ ಅಧ್ಯಕ್ಷರಾಗಿ ಶ್ರೀ ರಘುರಾಮ ರೆಡ್ಡಿ ಅವಿರೋಧ ಆಯ್ಕೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇದರ ನಿರ್ದೇಶಕರಾದ ಶ್ರೀಯುತ ರಘುರಾಮ ರೆಡ್ಡಿಯವರು ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರ ಬ್ಯಾಂಕ್ ನಿ., ಚಿತ್ರದುರ್ಗ ಇದರ ನೂತನ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ಶ್ರೀಯುತರಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಸದಸ್ಯರು ಹಾಗೂ ರಾಜ್ಯದ ಸೌಹಾರ್ದ ಸಹಕಾರಿಗಳ ಪರವಾಗಿ ಅಭಿನಂದನೆಗಳು.





## ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಶ್ರೀಮತಿ ಪುಷ್ಪಲತಾ ಎನ್ ಹಾಗೂ ಶ್ರೀ ಅನಂತ ಕೃಷ್ಣ ಬಿ ಆಯ್ಕೆ

ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಆಡಳಿತ ಮಂಡಲಿಗೆ ವೃತ್ತಿಪರ ನಿರ್ದೇಶಕರಾಗಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ 36 ವರ್ಷಗಳ ಸೇವಾನುಭವ ಹೊಂದಿರುವ ನಿವೃತ್ತ ಹಿರಿಯ ವ್ಯವಸ್ಥಾಪಕರು, ಸರ್ಟಿಫೈಡ್ ಅಸೋಸಿಯೇಟ್ ಆಫ್ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಬ್ಯಾಂಕರ್ಸ್, ಬ್ಯಾಂಕಿಂಗ್ ಆಡಳಿತ ಕ್ಷೇತ್ರದಲ್ಲಿ ಅಪಾರ ಅನುಭವ ಹೊಂದಿರುವ ಮಂಗಳೂರಿನ ಪಾಂಡೇಶ್ವರ ನಿವಾಸಿಯಾಗಿರುವ ಶ್ರೀಮತಿ ಪುಷ್ಪಲತಾ ಎನ್ ಹಾಗೂ ಸುಳ್ಯ ತಾಲೂಕಿನ ಮಂಡೆಕೋಲು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿ ಮುಖ್ಯಕಾರ್ಯನಿರ್ವಾಹಕರಾಗಿ ನಿವೃತ್ತರಾಗಿರುವ ಹಾಗೂ ವಿವಿಧ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಸುಳ್ಯದ ಮಂಡೆಕೋಲು ಗ್ರಾಮದ ಚಾಕೋಟೆ ನಿವಾಸಿಯಾಗಿರುವ ಶ್ರೀ ಅನಂತಕೃಷ್ಣ ಬಿ ಇವರು ಸಹಕಾರಿಯ ವೃತ್ತಿಪರ ನಿರ್ದೇಶಕರಾಗಿ ಆಯ್ಕೆಯಾಗಿರುತ್ತಾರೆ.

## ಲೇಖನಗಳಿಗೆ ಆಹ್ವಾನ

ಸಂಯುಕ್ತ ಸಹಕಾರಿಯ ಸ್ವಾಭಿಮಾನಿ ಸಹಕಾರಿ ಮಾಸಿಕ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳನ್ನು ಆಹ್ವಾನಿಸಲಾಗಿದೆ. ಲೇಖನಗಳು ಸಹಕಾರ ಕ್ಷೇತ್ರ, ಆರ್ಥಿಕ ಕ್ಷೇತ್ರ, ಹಣಕಾಸು ಕ್ಷೇತ್ರ, ಗ್ರಾಮೀಣ ಅಭಿವೃದ್ಧಿ, ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಸಹಕಾರ ಸಂಸ್ಥೆಗಳ ಸಾಧನೆಗಳು, ವಿಷಯಗಳಿಗೆ ಸಂಬಂಧಿಸಿದ್ದಾಗಿರಬೇಕು. ಲೇಖನ 3 ರಿಂದ 4 ಪುಟಗಳಿಗೆ ಸೀಮಿತವಾಗಿರಬೇಕು. ಲೇಖಕರು ತಮ್ಮ ಭಾವಚಿತ್ರದೊಂದಿಗೆ ಲೇಖನವನ್ನು ಕಳುಹಿಸುವುದು. ಲೇಖಕರಿಗೆ ಒಂದು ಲೇಖನಕ್ಕೆ ರೂ. 1000/– ಸಂಭಾವನೆಯನ್ನು ಪಾವತಿಸಲಾಗುವುದು. ಸ್ವಾಭಿಮಾನಿ ಸಹಕಾರಿ ಮಾಸಪತ್ರಿಕೆಯ ಬಗ್ಗೆ ತಮ್ಮ ಅನಿಸಿಕೆಗಳನ್ನು ಹಾಗೂ ಸಲಹೆಗಳನ್ನು ಸ್ವಾಗತವಿದೆ.

**– ಸಂಪಾದಕರು**

## ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಆಯ್ಕೆ

**ದಿ ಶಿಂದೋಳ್ಳಿ ಅರ್ಬನ್ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ನಿ., ಶಿಂದೋಳ್ಳಿ, ಬೆಳಗಾವಿ**



ಫಕೀರವ್ವಾ ಭೀಮಣ್ಣಾ ಕರೇಗಾರ, ಅಧ್ಯಕ್ಷರು



ನಾಗಪ್ಪಾ ಪಾಯಪ್ಪಾ ಕರೇಗಾರ, ಉಪಾಧ್ಯಕ್ಷರು

**ಓಂಕಾರ ಸಮೃದ್ಧಿ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹೊಸೂರು, ವಿಜಯಪುರ**



ಶ್ರೀಯುತ ರಾಮಕೃಷ್ಣ ನಾರಾಯಣ ಓಂಕಾರ, ಅಧ್ಯಕ್ಷರು

## ಉದ್ಘಾಟನೆ



**ದಾವಣಗೆರೆ :** ದಿನಾಂಕ 20.04.2026ರಂದು ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕಿನ ದಿ ಇಂಡಿಯನ್ ಸೌಹಾರ್ದ ಕೋ-ಆಪರೇಟಿವ್ ಸೊಸೈಟಿ ಲಿ, ಹರಿಹರ ಸಹಕಾರಿಯ ನೂತನ ಕಟ್ಟಡದ ಉದ್ಘಾಟನಾ ಕಾರ್ಯಕ್ರಮವು ಜರುಗಿತು. ನೂತನ ಕಟ್ಟಡದ ಉದ್ಘಾಟನೆಯನ್ನು ಶ್ರೀ ಕಾಗಿನೆಲೆ ಮಹಾ ಸಂಸ್ಥಾನ ಕನಕ ಗುರುಪೀಠ ಶ್ರೀ ಮಠದ ಪರಮ ಪೂಜ್ಯ ಜಗದ್ಗುರು ಶ್ರೀ ಶ್ರೀ ಡಾಕ್ಟರ್ ನಿರಂಜನಾನಂದ ಮಹಾ ಸ್ವಾಮಿಗಳು, ಖಾಜಿ-ಎ ಶಹರ ಹರಿಹರ ಚರ್ಚ್‌ನ ಪರಮಪೂಜ್ಯ ಶ್ರೀ ಮೌಲಾನಾ ಖಾಜಿ ಹಜರತ್ ಸೈಯದ್ ಸಂಶುದ್ದೀನ್ ಸಾಹೇಬ ನರ್ಕಾತಿ, ಬಿಶೋಪ್ ಸಿ.ಎಸ್. ಐಕೆಎನ್‌ಡಿ ದಾರವಾಡ ಪರಮಪೂಜ್ಯ ಶ್ರೀ ರೈಟ್ ರೆವೆರೆಂಟ್ ಮಾರ್ಟಿನ್ ಇವರುಗಳು ರಿಬ್ಬನ್ ಬಿಡಿಸುವುದರ ಮೂಲಕ ಉದ್ಘಾಟಿಸಿದರು. ನೂತನ ಕಟ್ಟಡದಲ್ಲಿ ನಿರ್ಮಿಸಿರುವ ಅತಿಥಿಗಳ ಗೃಹದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ, ಬೆಂಗಳೂರು ಇದರ ಮಾನ್ಯ ಅಧ್ಯಕ್ಷರಾದ ಶ್ರೀ ಜಿ. ನಂಜನಗೌಡ ರವರು ಉದ್ಘಾಟಿಸಿದರು. ಆಡಳಿತ ಕಛೇರಿಯ ಉದ್ಘಾಟನೆಯನ್ನು ಶ್ರೀ ಎಸ್.ಎಸ್. ಮಲ್ಲಿಕಾರ್ಜುನ, ಗಣಿ ಮತ್ತು ಭೂ ವಿಜ್ಞಾನ ತೋಟಗಾರಿಕೆ ಸಚಿವರು, ಕರ್ನಾಟಕ ಸರ್ಕಾರ ಇವರು ನೆರವೇರಿಸಿದರು. ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಶಶಿಕುಮಾರ್ ಎಸ್. ರವರು ಹಾಗೂ ಕಿರಿಯ ಸಹಾಯಕರಾದ ಶ್ರೀ ಯೋಗೇಶ್ ರವರು ಭಾಗವಹಿಸಿದ್ದರು.

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



**ಅಳ್ನಾವರ :** ಮಹಿಳೆಯವರಲ್ಲಿ ವಿಶಿಷ್ಟ ಶಕ್ತಿ ಅಡಗಿದೆ. ಶಾಂತಿ, ಸಹನೆಯ ಪ್ರತೀಕವಾದ ಮಹಿಳೆ ಎಲ್ಲ ರಂಗದಲ್ಲಿ ಮುಂದೆ ಬರಬೇಕು ಭಾರತ ಪ್ರಪಂಚ ಸರ್ವ ಶ್ರೇಷ್ಠ ದೇಶವಾಗಬೇಕಾದರೆ ಮಹಿಳೆಯರ ಪಾತ್ರ ಹಿರಿದು ಎಂದು ಸಿದ್ಧಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷ ರಾದ ಶ್ರೀ ಪಾಂಡುರಂಗ ರೇವಣಕರ ಹೇಳಿದರು.

ಇಲ್ಲಿನ ರೇವಣಕರ ಸಭಾಭವನದಲ್ಲಿ ಸಿದ್ಧಾಯಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘ ಹಮ್ಮಿಕೊಂಡ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ದೇಶದ ಮಹಿಳಾ ದಿಗ್ಗಜರ ಜೀವನ ಚರಿತ್ರೆ ಓದಬೇಕು. ಸಮಾಜದಲ್ಲಿ ನಡೆಯುವ ಲವ್ ಜಿಹಾದ್ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಬೇಕು ಎಂದರು.

ಕಸ್ತೂರಬಾ ಗಾಂಧಿ ಬಾಲಿಕಿಯರ ವಸತಿ ಶಾಲೆಯ ಮುಖ್ಯ ಶಿಕ್ಷಕಿ ದೀಪಾ ಲಾಡ್ ಉಪನ್ಯಾಸ ನೀಡಿ, ಮಹಿಳೆಯರು ಕಡ್ಡಾಯವಾಗಿ ಶಿಕ್ಷಣ ಪಡೆದು ಪ್ರತಿ ಕ್ಷೇತ್ರದಲ್ಲಿ ಸೇವೆ ಮಾಡಲು ಮುಂದೆ ಬರಬೇಕು ಎಂದರು ಸಾಮಾಜಿಕ ಚಿಂತಕ ಮಹಾದೇವ ಸಾಗರೇಕರ, ಸವಿತಾ ಮುರಗೋಡ, ಗಂಗಾ ಮಾತನಾಡಿದರು.

ಸಹಕಾರಿಯ ಉಪಾಧ್ಯಕ್ಷ ನಾರಾಯಣ ಪಟೇಲ, ನಿರ್ದೇಶಕರಾದ ಪರಶುರಾಮ ಗಾವಡೆ, ಮದನ್ ಹಿಂಡಸಗೇರಿ, ಬ್ರಹ್ಮಾನಂದ ಬೈಕೇರಿಕರ, ನಿತೇಶ ರೇವಣಕರ, ದತ್ತಾ ನಿಟ್ಟೂರಕರ, ಶುಭಂ ಗಾವಡೆ, ಸಾಧನಾ ಕಿನಾರೆ, ಸ್ವಾತಿ ಬೀಡಿಕರ, ಚಂದ್ರಬಾಗಾ ಪವಾರ ಇದ್ದರು.

ಸುನಿತಾ ಪೆಜೊಳ್ಳಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಆಕಾಶ ಪೇಡ್ನೇಕರ ಪ್ರಾರ್ಥಿಸಿದರು. ಮಂಜುನಾಥ ನಂದಿಹಳ್ಳಿ ಸ್ವಾಗತಿಸಿದರು. ಕವಿತಾ ರಾಂದೇವಾಡಿ ನಿರೂಪಿಸಿದರು. ಸುನಿತಾ ಬಡಸ್ಕರ್ ಅಥಿತಿ ಪರಿಚಯಿಸಿದರು. ಮುಖಾಂಬಿಕಾ ಬರಗುಂಡಿ ವಂದಿಸಿದರು.



**ಚಾಮರಾಜನಗರ :** ದಿನಾಂಕ 20.04.2026 ರಂದು ಮಾಮರ ಸೌಹಾರ್ದ ಸಹಕಾರಿ ಸಂಘ ನಿ., ಮಳವಳ್ಳಿ ಇದರ ಸಾಮಾನ್ಯ ಸೇವಾ ಕೇಂದ್ರ ಮತ್ತು ಇ ಸ್ಟಾಂಪಿಂಗ್ ಸೇವೆಯನ್ನು ಮಾನ್ಯ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಯವರಾದ ಶ್ರೀ ಎಸ್ ಇ ಗಂಗಾಧರ್‌ರವರು ಉದ್ಘಾಟಿಸಿದರು ಈ ಕಾರ್ಯಕ್ರಮದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಎಂ ಶಿವಕುಮಾರ್, ಉಪಾಧ್ಯಕ್ಷರಾದ ಶ್ರೀ ಗುರುಮೂರ್ತಿ, ಆಡಳಿತ ಮಂಡಳಿಯ ಎಲ್ಲಾ ನಿರ್ದೇಶಕರುಗಳು ಹಾಗೂ ಚಾಮರಾಜನಗರ ಜಿಲ್ಲಾ ಸೌಹಾರ್ದ ಅಭಿವೃದ್ಧಿ ಅಧಿಕಾರಿ ಯವರಾದ ಶ್ರೀ ಬಲರಾಮ್ ಎನ್, ಇವರು ಭಾಗವಹಿಸಿದ್ದರು.

# ಶ್ರೀ ಸರಸ್ವತಿ ಸಹಕಾರಿಯ ವಾರ್ಷಿಕ ಕ್ರಿಯಾ ಯೋಜನೆ 2026-27
## ಪ್ರಾಮಾಣಿಕತೆ ಮತ್ತು ಪರಿಶ್ರಮ ಇದ್ದಲ್ಲಿ ಯಶಸ್ಸು ಲಭಿಸುತ್ತದೆ – ಶ್ರೀ ಎಸ್. ಆರ್. ಸತೀಶ್ಚಂದ್ರ



**ಪುತ್ತೂರು :** ಶ್ರೀ ಸರಸ್ವತಿ ಕ್ರೆಡಿಟ್ ಸೌಹಾರ್ದ ಸಹಕಾರಿ ಸಂಘದ 2026–27ನೇ ಆರ್ಥಿಕ ವರ್ಷದ ವಾರ್ಷಿಕ ಕ್ರಿಯಾ ಯೋಜನಾ ಸಭೆ ದಿನಾಂಕ 14–04–2026 ರಂದು ಮಂಗಳೂರು ಬೊಕ್ಕಪಟ್ಣದಲ್ಲಿರುವ ಅಬ್ಬಕ್ಕ ರಾಣಿ ಕ್ರೂಸ್‌ನಲ್ಲಿ, ಸಹಕಾರಿಯ ಅಧ್ಯಕ್ಷರಾದ ಸಹಕಾರ ರತ್ನ ಶ್ರೀ ಎಸ್. ಆರ್. ಸತೀಶ್ಚಂದ್ರ ಅವರ ಅಧ್ಯಕ್ಷತೆಯಲ್ಲಿ ಎಲ್ಲಾ ನಿರ್ದೇಶಕರು ಹಾಗೂ ಸಿಬ್ಬಂದಿಗಳ ಉಪಸ್ಥಿತಿಯಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಮೀನುಗಳಿಗೆ ಆಹಾರ ನೀಡುವ ಮೂಲಕ ಉದ್ಘಾಟಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಹಕಾರಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ವಸಂತ ನಾಯಕ್ ಎ. ಇವರು ಸಹಕಾರಿಯ ಸಾಧನೆಗೆ ಕಾರಣೀಕರ್ತರಾದ, ಸೂಕ್ತ ಮಾರ್ಗದರ್ಶನ ನೀಡಿದ ಆಡಳಿತ ಮಂಡಳಿ, ದಕ್ಷ ಸಿಬ್ಬಂದಿ ವರ್ಗ, ಲೆಕ್ಕಪರಿಶೋಧಕರು ಹಾಗೂ ಸದಸ್ಯರಿಗೆ ಅಭಿನಂದನೆ ಹಾಗೂ ಕೃತಜ್ಞತೆಗಳನ್ನು ಸಲ್ಲಿಸಿದರು. ಮುಂದಿನ 2026–27ನೇ ಆರ್ಥಿಕ ವರ್ಷದಲ್ಲಿಯೂ ಗುರಿಮೀರಿದ ಸಾಧನೆಯನ್ನು ಮಾಡುವಂತಾಗಲಿ ಎಂದು ಶುಭಹಾರೈಸಿದರು.

2025–26ನೇ ಆರ್ಥಿಕ ವರ್ಷದಲ್ಲಿ ಗುರಿಮೀರಿದ ಸಾಧನೆ ಮಾಡಿದ ಸುಳ್ಯ ಮತ್ತು ಬಿ.ಸಿ.ರೋಡು ಶಾಖೆಗಳನ್ನು ಗುರುತಿಸಿ ಸನ್ಮಾನಿಸಲಾಯಿತು. ಸಹಕಾರಿಯ ನೂತನ ವಿವಾಹಿತ ಸಿಬ್ಬಂದಿಗಳಿಗೆ ಶುಭಹಾರೈಸಲಾಯಿತು.

ಸಹಕಾರಿಯ ಸಿಬ್ಬಂದಿಗಳಿಗೆ ಶ್ರೀ ಪ್ರಜ್ವಲ್ ಕುಲಾಲ್ ಮತ್ತು ತಂಡದವರಿಂದ ಮನೋರಂಜನಾ ಆಟಗಳೊಂದಿಗೆ ವಿವಿಧ ಸ್ಪರ್ಧೆಗಳು ಆಯೋಜಿಸಲಾಯಿತು.

ಸಭೆಯಲ್ಲಿ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅಧ್ಯಕ್ಷರಾದ ಶ್ರೀ ಎಸ್. ಆರ್. ಸತೀಶ್ಚಂದ್ರ ಅವರು, ಸಿಬ್ಬಂದಿಗಳ ನಗುಮುಖದ ಪ್ರಾಮಾಣಿಕ ಹಾಗೂ ದಕ್ಷ ಗ್ರಾಹಕ ಸೇವೆಯೇ ಸಂಸ್ಥೆಯ ಶಕ್ತಿ ಎಂದು ಹೇಳಿದರು. ಪ್ರಾಮಾಣಿಕತೆ ಮತ್ತು ಪರಿಶ್ರಮಕ್ಕೆ ಯಾವುದೇ ಪರ್ಯಾಯವಿಲ್ಲ. ಸಂಸ್ಥೆಯ ಮೇಲಿನ ನಂಬಿಕೆಯನ್ನು ಹೆಚ್ಚಿಸುವ ಮೂಲಕ ಜನರು ಸಹಕಾರಿಯಲ್ಲಿ ವ್ಯವಹಾರ ನಡೆಸುವಂತಾಗಬೇಕು ಎಂದು ಹೇಳಿದರು.

ಸಹಕಾರಿಯಿಂದ ಗುಣಮಟ್ಟದ ಸಾಲ ವಿತರಣೆ ಮಾಡುವ ಸಾಮರ್ಥ್ಯವನ್ನು ಕಾಪಾಡಿಕೊಳ್ಳಬೇಕು ಎಂದು ತಿಳಿಸಿದ ಅವರು, ರಾಜ್ಯ ಮಟ್ಟದಲ್ಲಿ ಹೆಸರು ಗಳಿಸಿರುವ ಸರಸ್ವತಿ ಸಹಕಾರಿಯನ್ನು ಮುಂದಿನ ದಿನಗಳಲ್ಲಿ ರಾಷ್ಟ್ರಮಟ್ಟದಲ್ಲಿ ಗುರುತಿಸುವ ಗುರಿ ಹೊಂದಬೇಕು ಎಂದರು.

2026–27ನೇ ಆರ್ಥಿಕ ವರ್ಷದಲ್ಲಿ ಸಹಕಾರಿಯು ರೂ. 526 ಕೋಟಿ ಠೇವಣಿ, ರೂ. 475 ಕೋಟಿ ಸಾಲದೊಂದಿಗೆ ಒಟ್ಟು ರೂ. 1001 ಕೋಟಿ ವ್ಯವಹಾರವನ್ನು ದಾಖಲಿಸಿ, ರೂ. 8.50 ಕೋಟಿಗೂ ಮೀರಿದ ನಿವ್ವಳ ಲಾಭವನ್ನು ಸಾಧಿಸುವ ಗುರಿ ಘೋಷಿಸಲಾಯಿತು. ಜೊತೆಗೆ, ಈ ವರ್ಷದಲ್ಲಿ ಮೂರು ನೂತನ ಶಾಖೆಗಳನ್ನು ಪ್ರಾರಂಭಿಸುವ ಯೋಜನೆ ರೂಪಿಸಲಾಗಿದೆ. ಶ್ರೀ ಸರಸ್ವತಿ ಚಾರಿಟೇಬಲ್ ಟ್ರಸ್ಟ್ ಮೂಲಕ ವಿವಿಧ ಸಮಾಜಮುಖಿ ಕಾರ್ಯಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

2025–26ನೇ ಆರ್ಥಿಕ ವರ್ಷಾಂತ್ಯಕ್ಕೆ ಸಹಕಾರಿಯು 20 ಶಾಖೆಗಳೊಂದಿಗೆ 52,431 ಸದಸ್ಯರನ್ನು ಹೊಂದಿದ್ದು, ರೂ. 414 ಕೋಟಿ ಠೇವಣಿ, ರೂ. 387 ಕೋಟಿ ಸಾಲ ಹಾಗೂ ಒಟ್ಟು ರೂ. 801 ಕೋಟಿ ವ್ಯವಹಾರವನ್ನು ದಾಖಲಿಸಿ, ರೂ. 7.27 ಕೋಟಿ ನಿವ್ವಳ ಲಾಭ ಗಳಿಸಿದೆ.

ಕಾರ್ಯಕ್ರಮದಲ್ಲಿ ಸಹಕಾರಿಯ ಸಿಬ್ಬಂದಿಗಳಾದ ಶ್ರೀಮತಿ ಶ್ರೀ ರಂಜಿತಾ ಮತ್ತು ವಿಧುಷಿ ವೈಷ್ಣವಿ ಎಸ್. ನಾಯಕ್ ಅವರ ಪ್ರಾರ್ಥನೆ ಹಾಗೂ ವಂದೇ ಮಾತರಂ ಗೀತೆಯೊಂದಿಗೆ ಪ್ರಾರಂಭವಾಯಿತು. ಸಿಬ್ಬಂದಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಹಿರಿಯ ವ್ಯವಸ್ಥಾಪಕರಾದ ಶ್ರೀ ದೇವಿಪ್ರಸಾದ್ ಎ. ಸ್ವಾಗತಿಸಿದರು. ವ್ಯವಸ್ಥಾಪಕರಾದ ಶ್ರೀ ಶಿವಪ್ರಸಾದ್ ಪಿ. ವಂದಿಸಿದರು.

## ಉದ್ಘಾಟನೆ



**ಬೆಳಗಾವಿ :** ದಿನಾಂಕ 01.04.2026 ರಂದು ಶ್ರೀ ಮಂಗಾಯಿ ಮಲ್ಟಿಪರ್ಪಸ್ ಸೌಹಾರ್ದ ಸಹಕಾರಿ ನಿಯಮಿತ ಯಳ್ಳೂರು, ಬೆಳಗಾವಿ, ಸಹಕಾರಿಯ ನೂತನ ಕಟ್ಟಡ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಬೆಳಗಾವಿ ಪ್ರಾಂತೀಯ ವ್ಯವಸ್ಥಾಪಕರಾದ ಶ್ರೀ ಬಸವರಾಜ್ ಹೊಂಗಲ ಹಾಗೂ ಸೌಹಾರ್ದ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ವಿನೋದ ಮರಾಠಾ ಇವರು ಭಾಗವಹಿಸಿ ಸಹಕಾರಿಗೆ ಶುಭ ಕೋರಿದರು.

# ಕರ್ನಾಟಕ ಸೌಹಾರ್ದ ಸಹಕಾರಿ ಕಾಯಿದೆಯಡಿ ಸಂಯುಕ್ತ ಸಹಕಾರಿ ನಿಯಂತ್ರಣ ಪ್ರಾಧಿಕಾರ - ಅರಿತು ಕೆಲಸ ನಿರ್ವಹಿಸುವುದು ಅಗತ್ಯ.



**– ಶ್ರೀ ಸಿ.ಎನ್ ಪರಶಿವಮೂರ್ತಿ, ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕರು.**

**ಪೀಠಿಕೆ :**

ಕರ್ನಾಟಕ ಸರ್ಕಾರ ರೂಪಿಸಿದ ಸಹಕಾರಿ ನೀತಿಯಂತೆ ಸೌಹಾರ್ದ ಸಹಕಾರಿ ಕಾಯಿದೆಯನ್ನು 1959ರ ಕಾಯಿದೆಗೆ ಹೊರತಾಗಿ, ರಾಷ್ಟ್ರದಲ್ಲಿಯೇ ಒಂದು ವಿಶಿಷ್ಟವಾದ ಕಾಯಿದೆ ರಚಿಸಲು ತೀರ್ಮಾನಿಸಿತು. ಇದಕ್ಕೆ ಆಧಾರವೆಂದರೆ, ಕೇಂದ್ರ ಸರ್ಕಾರ ಒಂದು ಮಾದರಿ ಕಾಯಿದೆ (ಚೌದರಿ ಬ್ರಾಹ್ಮ ಪ್ರಕಾಶ್) ವರದಿಯನ್ನು ರೂಪಿಸಿ, ರಾಜ್ಯಗಳಿಗೆ ಹೊಸದಾಗಿ ನಿಬಂಧಕರ ನಿಯಂತ್ರಣವಿಲ್ಲದ, ಸ್ವಾಯಕ್ತ, ಸ್ವತಂತ್ರ ಮತ್ತು ಸ್ವಯಂ ನಿಯಂತ್ರಿತ ಸಹಕಾರಿ ಸಂಸ್ಥೆಗಳನ್ನು ನಿಯಂತ್ರಿಸಲು, ಸಹಕಾರಿಗಳ ಸ್ನೇಹಿತ, ತತ್ವಜ್ಞಾನಿ ಮತ್ತು ಮಾರ್ಗದರ್ಶಕನೆಂದು "ಸಂಯುಕ್ತ ಸಹಕಾರಿ" ಎಂಬ ಒಂದು ಸಂಸ್ಥೆಯನ್ನು ಕಾಯಿದೆಯಲ್ಲಿ ಸೇರಿಸಿ ಚುನಾಯಿತ ಮಂಡಳಿಯಾದ "ಸಂಯುಕ್ತ ಸಹಕಾರಿ" ರಚಿಸಿದೆ. ಈ ಸಂಸ್ಥೆಗೆ ನಿಬಂಧಕರು, ನಿರ್ವಹಿಸುತ್ತಿದ್ದ/ನಿರ್ವಹಿಸುವ ಶಾಸನಾತ್ಮಕ ಜವಾಬ್ದಾರಿಗಳನ್ನು ವರ್ಗಾಯಿಸಿದೆ. ಅಂದರೆ ನಿಬಂಧಕರನ್ನು ಒಂದು ಸಹಕಾರಿಯನ್ನು ನೋಂದಾಯಿಸುವುದು ಮತ್ತು ಸಮಾಪನೆಗೊಳಿಸಿ/ರದ್ದುಪಡಿಸುವುದನ್ನು ಮಾತ್ರ ಬಿಟ್ಟು, ಉಳಿದ ಎಲ್ಲಾ ಆಡಳಿತ ನಿರ್ವಹಣೆ ಬಗ್ಗೆ "ಸಂಯುಕ್ತ ಸಹಕಾರಿ"ಯ ಜವಾಬ್ದಾರಿಗೆ ಬಿಡಲಾಗಿದೆ. ಅದಕ್ಕೆ ಮುಖ್ಯ ಕಾರಣ, ಒಂದು ಸಂಸ್ಥೆಯನ್ನು ಹುಟ್ಟು ಹಾಕುವುದು ಮತ್ತು ಮುಕ್ತಾಯ ಗೊಳಿಸುವ ಅಧಿಕಾರ, ಸರ್ಕಾರದ ಅಧಿಕಾರಿಗೆ ಮಾತ್ರಹಿತವಾಗಿರುವ ನೀತಿಗೆ ಪೂರಕವಾಗಿ ಅದನ್ನು ನಿಬಂಧಕನೇ ನಿರ್ವಹಿಸಬೇಕು. ಉಳಿದಂತೆ ಮಿಕ್ಕೆಲ್ಲ ಶಾಸನಾತ್ಮಕ ಅಧಿಕಾರಗಳನ್ನು ಕಾಯಿದೆಯಲ್ಲಿ ಹುಟ್ಟುಹಾಕಿದ "ಸಂಯುಕ್ತ ಸಹಕಾರಿ"ಗೆ ನೀಡಬೇಕೆಂಬ ನೀತಿಗೆ ಪೂರಕವಾಗಿ ಯೋಜಿಸಲಾಗಿತ್ತು. ಆದರೆ ಪ್ರಥಮ ಹಂತದಲ್ಲಿಯೇ, ಈ ಕಾಯಿದೆ ಜಾರಿ ಮಾಡುವಾಗ ಪ್ರಥಮ ಬಾರಿಗೆ ನೀಡುವ ಅಧಿಕಾರಗಳನ್ನು ಸ್ವೇಚ್ಚೆ ಎಂದು ತಿಳಿಯಬಾರದೆಂಬ ನೀತಿಗೆ ಪೂರಕವಾಗಿ, ಹಲವು ಶಾಸನಾತ್ಮಕ ಜವಾಬ್ದಾರಿಗಳನ್ನು ನಿಬಂಧಕರು ನಿರ್ವಹಿಸಬೇಕೆಂದು ನೀತಿ ರೂಪಿಸಿತು.

ಈ ಕಾಯಿದೆ ರೂಪಿಸುವಾಗ ಅನುಸರಿಸಿದ ಧ್ಯೇಯೋದ್ದೇಶವನ್ನು ಕಾಯಿದೆ ಪೀಠಿಕೆಯಲ್ಲಿ ಈ ಕೆಳಕಂಡಂತೆ ಉಲ್ಲೇಖಿಸಿದೆ.

"ಸದಸ್ಯರೇ ಸಂಪೂರ್ಣ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಸಹಕಾರಿ ತತ್ವಗಳಿಂದ ಮಾರ್ಗದರ್ಶನ ಪಡೆದ, ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳಾದ ಸಹಕಾರಿಗಳಿಗೆ ಮಾನ್ಯತೆ ಮತ್ತು ಅವುಗಳ ಸ್ವಯಂರಚನೆಗೆ ಪ್ರೋತ್ಸಾಹ ನೀಡುವುದಕ್ಕೆ ಮತ್ತು ಅದಕ್ಕೆ ಸಂಬಂಧಿಸಿದ ಇತರ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ"

**ಸಂವಿಧಾನದ ಅನುಚ್ಛೇದ 43ಬಿ ಅಡಿ**

"ರಾಜ್ಯವು ಸಹಕಾರ ಸಂಸ್ಥೆಗಳ ಸ್ವಇಚ್ಛೆಯ ರಚನೆ, ಸ್ವಾಯಕ್ತ ಕಾರ್ಯಚರಣೆ, ಪ್ರಜಾಸತ್ತಾತ್ಮಕ ಹತೋಟಿ ಮತ್ತು ವ್ಯಕ್ತಿ ಪರ ವ್ಯವಸ್ಥಾಪನೆ/ನಿರ್ವಹಣೆಗಳನ್ನು ಪ್ರೋತ್ಸಾಹಿಸಲು ಪ್ರಯತ್ನ ಪಡೆಯತಕ್ಕದ್ದು."

**ಅನುಚ್ಛೇದ 243 ಝಡ್ಐ**

"ರಾಜ್ಯವಿಧಾನ ಮಂಡಳವು ಸ್ವಇಚ್ಛಾರಚನೆ, ಪ್ರಜಾಸತ್ತಾತ್ಮಕ ಸದಸ್ಯ ಹತೋಟಿ, ಸದಸ್ಯರ ಆರ್ಥಿಕ ಭಾಗವಹಿಸುವಿಕೆ ಮತ್ತು ಸ್ವಾಯಕ್ತ ಕಾರ್ಯಚರಣೆ ತತ್ವಗಳ ಆಧಾರದ ಮೇಲೆ ಸಹಕಾರ ಸಂಘಗಳ ಸಂಘಟನೆ, ನಿಯಂತ್ರಣ ಸಮಾಪನೆಗೆ ಸಂಬಂಧ ಪಟ್ಟ ಕಾನೂನು ರಚಿಸಬಹುದು."

**ಈ ಮೇಲ್ಕಂಡ ಧ್ಯೇಯೋದೇಶಗಳನ್ನು ಅಳವಡಿಸಿಕೊಂಡು ಕರ್ನಾಟಕ ಸೌಹಾರ್ದ ಸಹಕಾರಿಕಾಯಿದೆ 1997 ಕಲಂ53(7)ರ ರಚನೆಯಾಗಿದೆ.**

(ಎ) ಸಹಕಾರಿಗಳನ್ನು ಪ್ರವರ್ತಿಸುವುದು ಹಾಗೂ ಸಂಘಟಿಸುವುದು ಮತ್ತು ಈ ಉದ್ದೇಶಕ್ಕಾಗಿ ಮಾದರಿ ಉಪವಿಧಿಗಳನ್ನು ರಚಿಸುವುದು ಹಾಗೂ ಸಹಕಾರಿ ತತ್ವಗಳಿಗನುಸಾರವಾಗಿ ಸಹಕಾರಿಗಳಿಗಾಗಿ ವಿವಿಧ ಕಾರ್ಯನೀತಿಗಳನ್ನು ರಚಿಸಲು ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸುವುದು;

(ಬಿ) ಸಹಕಾರಿ ತರಬೇತಿ, ಶಿಕ್ಷಣ ಹಾಗೂ ತಿಳುವಳಿಕೆ ನೀಡುವುದು ಮತ್ತು ಸಹಕಾರಿ ತತ್ವಗಳನ್ನು ಪ್ರಚಾರ ಮಾಡುವುದು;

(ಸಿ) ಸಂಶೋಧನೆ ಹಾಗೂ ಮೌಲ್ಯಮಾಪನವನ್ನು ಕೈಗೊಳ್ಳುವುದು ಮತ್ತು ಸದಸ್ಯ ಸಹಕಾರಿಗಳಿಗಾಗಿ ಯಥಾದೃಷ್ಟ ಅಭಿವೃದ್ಧಿ ಯೋಜನೆಗಳನ್ನು ಸಿದ್ದಪಡಿಸಲು ನೆರವಾಗುವುದು;

(ಡಿ) ಸದಸ್ಯ ಸಹಕಾರಿಗಳ ನಡುವೆ ಸೌಹಾರ್ದ ಸಂಬಂಧವನ್ನುಕಲ್ಪಿಸುವುದು;

[(ಇ)****]

(ಎಫ್) ಅಗತ್ಯವಿರುವಾಗ ಮಂಡಲಿಯ ಸಭೆಗಳಲ್ಲಿ ಭಾಗವಹಿಸುವುದೂ ಸೇರಿದಂತೆ ಸದಸ್ಯ ಸಹಕಾರಿಗಳಿಗೆ ವ್ಯವಸ್ಥಾಪನಾ ಅಭಿವೃದ್ಧಿ ಸೇವೆಗಳನ್ನು ಕಲ್ಪಿಸುವುದು;

(ಜಿ) ಸದಸ್ಯ ಸಹಕಾರಿಗಳಿಗಾಗಿ ನಡತೆ ಸಂಹಿತೆಯನ್ನು ರೂಪಿಸುವುದು;

(ಹೆಚ್) ಸದಸ್ಯ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳನ್ನು ರೂಪಿಸುವುದು;

(ಐ) ಸದಸ್ಯ ಸಹಕಾರಿಗಳಿಗೆ ಕಾನೂನು ನೆರವು ಹಾಗೂ ಸಲಹೆ ಒದಗಿಸುವುದು;

(ಜೆ) ಸದಸ್ಯ ಸಹಕಾರಿಗಳ ಅಗತ್ಯದ ಮೇರೆಗೆ ಯಾವುದೇ ಇತರ ಸೇವೆಗಳನ್ನು ಒದಗಿಸುವುದು;

(ಕೆ) ಹೊಸ ರೂಪದ ಸಹಕಾರಿ ಉದ್ದಿಮೆಗಳನ್ನು ಉತ್ತೇಜಿಸುವುದು;

(ಎಲ್) ಸಹಕಾರಿ ಶಿಕ್ಷಣ ನಿಧಿಯನ್ನು ರಚಿಸಿ ನಿರ್ವಹಿಸುವುದು;

(ಎಂ) ಸಹಕಾರಿ ವಿಚಾರಧಾರೆಯನ್ನು ಅನ್ವಯಿಸುವಂಥ ಪ್ರಾಯೋಗಿಕ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು;

(ಎನ್)ಸಹಕಾರಿಗಳ ಪರವಾಗಿ ಮತ್ತು ಸಹಕಾರಿಗಳ ಮಧ್ಯೆ ಪರಸ್ಪರ ಸಂಪರ್ಕಕಲ್ಪಿಸುವುದು;

(ಒ) ಸಹಕಾರಿಗಳ ಅಂಕಿ ಅಂಶಗಳ ಬ್ಯಾಂಕ್‌ನಂತೆ ವರ್ತಿಸುವುದು;

(ಪಿ) ಸದಸ್ಯ ಸಹಕಾರಿಗಳ ಹಿತಾಸಕ್ತಿಯನ್ನು ಪ್ರತಿನಿಧಿಸುವುದು;

(ಕ್ಯೂ) ಗೊತ್ತುಪಡಿಸಿದ ಅವಧಿಯೊಳಗಾಗಿ ಅದರ ಸದಸ್ಯ ಸಹಕಾರಿಗಳ ಲೆಕ್ಕ ಪರಿಶೋಧನೆ, ಚುನಾವಣೆಗಳು, ಸಾಮಾನ್ಯ ಸಭೆಗಳು ನಡೆಸುವುದನ್ನು ಖಚಿತಪಡಿಸಿಕೊಳ್ಳುವುದು;

(ಆರ್) ಸದಸ್ಯ ಸಹಕಾರಿಗಳ ಪರವಾಗಿ ವ್ಯವಹಾರ ಹಾಗೂ ಸೇವೆಗಳನ್ನು ಕೈಗೊಳ್ಳುವುದು;

(ಎಸ್) 30ನೇ ಪ್ರಕರಣದ(2)ನೇ ಉಪಪ್ರಕರಣದಅಡಿಯಲ್ಲಿ, ಒಂದು ಸದಸ್ಯ ಸಹಕಾರಿಯು ನಡೆಸಲುತಪ್ಪಿದ ವಿಶೇಷ ಸಾಮಾನ್ಯ ಸಭೆಯನ್ನು ನಡೆಸುವುದು;

[(ಟಿ)****]

[(ಯು) ಸದಸ್ಯ ಸಹಕಾರಿಗಳ ಪರಿವೀಕ್ಷಣೆಯ ಅಧಿಕಾರ ಹೊಂದಿರುವುದು:

ಪರಂತು, ಒಂದು ಸಹಕಾರಿ ಬ್ಯಾಂಕಿನ ಸಂದರ್ಭದಲ್ಲಿ, ರಿಸರ್ವ್ ಬ್ಯಾಂಕಿನ ಅನುಮೋದನೆ ಇದ್ದ ಹೊರತು, ಈ ಖಂಡದ ಅಡಿಯಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.]

ಮೇಲ್ಕಂಡ ವಿಷಯಗಳ ಜೊತೆಗೆ ಕಲಂ 38 ಮತ್ತು 38ಎ ಅಡಿ ಸದಸ್ಯ ಸಹಕಾರಿಯ ಮಂಡಳಿಗಳನ್ನು ರದ್ದುಪಡಿಸಿ ಆಡಳಿತಾಧಿಕಾರಿ ಹಾಗೂ ವಿಶೇಷಾಧಿಕಾರಿ ನೇಮಕ ಮಾಡಲು ಸಂಯುಕ್ತ ಸಹಕಾರಿಗೆ ಶಾಸನಾತ್ಮಕ ಜವಾಬ್ದಾರಿ ನಿಗದಿಪಡಿಸುವುದರ ಜೊತೆಗೆ, ಕಲಂ 25ರಡಿ ಸದಸ್ಯ ಸಹಕಾರಿಯ ಮಂಡಳಿ ಸದಸ್ಯರನ್ನು ಅನರ್ಹತೆಗೊಳಿಸುವ ಅಧಿಕಾರವನ್ನು ಸಂಯುಕ್ತ ಸಹಕಾರಿಗೆ ನೀಡಲಾಗಿದೆ.

2013ರಲ್ಲಿ ಕಲಂ 61ರಡಿ ಉಪಕಲಂ(2)(ಎಲ್–5)ನ್ನು ಈ ಕೆಳಕಂಡಂತೆ ಸೇರಿಸಲಾಗಿದೆ.

"ಸದಸ್ಯ ಸಹಕಾರಿಯ ರಚನೆ ವ್ಯವಸ್ಥಾಪನೆ, ಕಾರ್ಯನಿರ್ವಹಣೆ ಅಥವಾ ಆರ್ಥಿಕ ಸ್ಥಿತಿಗತಿಯ ಕುರಿತಾದ ಯಾವುದೇ ನಿರ್ಧಿಷ್ಟ ವಿಷಯದ ಬಗ್ಗೆ ಸ್ವಯಂ ಪ್ರೇರಿತವಾಗಿ ವಿಚಾರಣೆಯನ್ನು ನಡೆಸಬಹುದು ಅಥವಾ ವಿಚಾರಣೆಯನ್ನು ನಡೆಸುವಂತೆ ಮಾಡಬಹುದು"

(ಸೂಚನೆ :– ಕಲಂ 35ರರಡಿ ನಿಬಂಧಕರಿಗೆ ಇರುವ ಅಧಿಕಾರವನ್ನು ಪ್ರತ್ಯೇಕವಾಗಿ ಸಂಯುಕ್ತ ಸಹಕಾರಿಯು ಮುಖ್ಯಕಾರ್ಯನಿರ್ವಾಹಕನಿಗೆ ಶಾಸನಾತ್ಮಕ ಅಧಿಕಾರ ನೀಡಿರುವುದರ ಉದ್ದೇಶ, ಸಂಯುಕ್ತ ಸಹಕಾರಿಯನ್ನು "ಜವಾಬ್ದಾರಿ" ಸಂಯುಕ್ತ ಸಹಕಾರಿ ಮಂಡಳಿಯೇ ನಿರ್ವಹಿಸಬೇಕು. ಮತ್ತು ಅದಕ್ಕಾಗಿ ಸಂಯುಕ್ತ ಸಹಕಾರಿಯು ವ್ಯವಸ್ಥಾಪಕ ನಿರ್ದೇಶಕರ ಮುಖಾಂತರ ಕರ್ತವ್ಯ ನಿರ್ವಹಿಸಬೇಕು. ಇದಕ್ಕೆ ಹೊರತಾಗಿ ಮುಖ್ಯಕಾರ್ಯನಿರ್ವಾಹಕ ಕಲಂ 61(2)(ಎಲ್–5)ರಡಿ ತನ್ನ ಜವಾಬ್ದಾರಿಯನ್ನು ಬೇರೆ ಅಧಿಕಾರಿಗಳ ಮುಖಾಂತರವೂ ನಿರ್ವಹಿಸಬಹುದು. ಅಂದರೆ ವಿಚಾರಣೆ ವಿಷಯಕ್ಕೆ ಸಂಬಂಧಪಟ್ಟಂತೆ, ಸ್ವತಂತ್ರವಾಗಿ ವ್ಯವಸ್ಥಾಪಕ ನಿರ್ದೇಶಕರೇ, ಕರ್ತವ್ಯ/ಜವಾಬ್ದಾರಿ ನಿರ್ವಹಿಸಲು (ಮಂಡಳಿ ಒಪ್ಪಿಗೆ ಇಲ್ಲದೆ) ಅಧಿಕಾರ ಹೊಂದಿರುತ್ತಾರೆ. ಇದು ವ್ಯವಸ್ಥಾಪಕ ನಿರ್ದೇಶಕರನ್ನು ಇಕ್ಕಟ್ಟಿಗೆ ಸಿಲುಕಿಸಲೂ ಸಹ ಉಪಯೋಗಿಸಬಹುದು. ಅಥವಾ ಸಂಯುಕ್ತ ಸಹಕಾರಿ ಮಂಡಳಿ ಸದಸ್ಯರು ವಿಚಾರಣೆ ಜವಾಬ್ದಾರಿ ವ್ಯವಸ್ಥಾಪಕರಿಗೆ ಇದ್ದ ಮಂಡಳಿ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಒಂದು ಬಾಗಿಲು ತೆರೆಯುವ ವಿಧಾನವೆಂದು ತಿಳಿಯುವುದು.

ಮೇಲ್ಕಂಡ ಶಾಸನಾತ್ಮಕ ಜವಾಬ್ದಾರಿಯನ್ನು ಸಂಯುಕ್ತ ಸಹಕಾರಿಗೆ ನೀಡಿರುವ ಪ್ರಮುಖ ಉದ್ದೇಶ ಚುನಾಯಿತ ಪ್ರತಿನಿಧಿಗಳು ತಮ್ಮ ಜವಾಬ್ದಾರಿಯನ್ನು ಅರಿತು, ಸೌಹಾರ್ದ ಕಾಯಿದೆ ಜಾರಿ ಮಾಡಲೆಂದು.., ಇಂತಹ ಶಾಸನಾತ್ಮಕ ಜವಾಬ್ದಾರಿಯಲ್ಲಿ 1959ರ ಕಾಯಿದೆಯಲ್ಲಿ ಯಾವುದೇ ಸಹಕಾರಿ ಸಂಸ್ಥೆಗೆ ನೀಡಿಲ್ಲ. (1959ರ ಕಾಯಿದೆ ಕಲಂ 65ಬಿ ಅಡಿ ಹಣಕಾಸು ಪೂರೈಸುವ ಸಂಸ್ಥೆಗೆ ನೆರವು ಪಡೆದ ಸಂಬಂಧದ ಲೆಕ್ಕಪತ್ರಗಳ ಪರಿವೀಕ್ಷಣೆ ಮಾಡಲು ಅಧಿಕಾರ ನೀಡಿರುವುದನ್ನು ಹೊರತುಪಡಿಸಿ)

1959ರ ಸಹಕಾರ ಸಾಮಾನ್ಯ ಕಾಯಿದೆಯು ಶಾಸನಾತ್ಮಕ ಅಧಿಕಾರ ನಿರ್ವಹಿಸಲು ಕಾಯಿದೆ ಕಲಂ 2(ಐ) ಈ ಕೆಳಕಂಡಂತೆ ಉಲ್ಲೇಖಿಸಿದೆ.

"ನಿಬಂಧಕರು ಎಂದರೆ ಕಾಯಿದೆ ಮೇರೆಗೆ ಸಹಕಾರಿ ಸಂಘಗಳ ನಿಬಂಧಕರ ಕಾರ್ಯಗಳನ್ನು ನೆರವೇರಿಸಲು ನೇಮಕ ಮಾಡಲ್ಪಟ್ಟ ವ್ಯಕ್ತಿ ಮತ್ತು ನಿಬಂಧಕರ ಎಲ್ಲಾ ಇಲ್ಲವೇ ಯಾವುದೇ ಅಧಿಕಾರಗಳನ್ನು ಚಲಾಯಿಸುವಾಗ ನಿಬಂಧಕರಿಗೆ ಸಹಾಯ ಮಾಡಲು ನೇಮಕ ಮಾಡಲ್ಪಟ್ಟ ಸಹಕಾರ ಸಂಸ್ಥೆಗಳ ಅಪರ ನಿಬಂಧಕರು, ಜಂಟಿ ನಿಬಂಧಕರು ಮತ್ತು ಸಹಾಯಕ ನಿಬಂಧಕರು ಈ ಅಧಿಕಾರದಲ್ಲಿ ಸೇರಿರುತ್ತಾರೆ" ಎಂದದೆ.

1959ರ ಕಾಯಿದೆಯಡಿ ಸರ್ಕಾರ ಮಧ್ಯಪ್ರವೇಶ ಮಾಡಲು ಇರುವ

ಅವಕಾಶ

ಕಲಂ 30ಬಿ ಅಡಿ ಸಹಕಾರ ಸಂಘ ಅಥವಾ ಗುಂಪಿಗೆ ಅಥವಾ ಎಲ್ಲಾರಿಗೂ ಅನ್ವಯವಾಗುವಂತೆ ಸಾರ್ವಜನಿಕ ಹಿತಾಸಕ್ತಿಗೆ ಪೂರಕವಾಗಿ ನಿರ್ದೇಶನ ನೀಡಲು ಸರ್ಕಾರಕ್ಕೆ ಅಧಿಕಾರ ನೀಡಿದೆ.

ಕಲಂ 121ರಡಿ ಕಾಯಿದೆ ಯಾವುದೇ ಕಲಂ ಅಥವಾ ವಿಷಯಕ್ಕೆ ಅಥವಾ ಗುಂಪಿಗೆ, ಕಾಯಿದೆ ಅನ್ವಯದ ಬಗ್ಗೆ ವಿನಾಯಿತಿ ನೀಡಲು ಅಥವಾ ಹೆಚ್ಚುವಾರಿಯಾಗಿ ತಿದ್ದುಪಡಿ ಮೂಲಕ /ಮಾರ್ಪಡಿಸಿ,ಆದೇಶ ಹೊರಡಿಸುವ ಅಧಿಕಾರ

ಕಲಂ 132ರಡಿ ಕಾಯಿದೆ ಜಾರಿ ಮಾಡುವಾಗ ತೊಡಕು ಬಂದರೆ ಅದನ್ನು ಸರಿಪಡಿಸಲು ಸರ್ಕಾರದ ಆದೇಶದ ಮೂಲಕ ಮಾರ್ಪಡಿಸಿಸಬಹುದು. ಈ ಮೇಲ್ಕಂಡ ಕಲಂಗಳಲ್ಲಿ ಕಲಂ 121ರಡಿ ಹೊರಡಿಸಿದ ಆದೇಶಗಳು ಚುನಾಯಿತ ಪ್ರತಿನಿಧಿಗಳಲ್ಲಿ ತೊಂದರೆಯಿಂದ ಪಾರು ಮಡಲು ಸಾಮಾನ್ಯವಾಗಿ ಆದೇಶಿಸಲಾಗಿದೆ.

ಅದೇ ರೀತಿ 1997ರ ಸೌಹಾರ್ದ ಕಾಯಿದೆ ಅಡಿ ಕಲಂ 70ರಡಿ ಸರ್ಕಾರಕ್ಕೆ ಇರುವ ಅಧಿಕಾರ ಈ ಕೆಳಕಂಡಂತೆ ಇದೆ.

“ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉಂಟಾದರೆ ಅಥವಾ ಸ್ಪಷ್ಟೀಕರಣದ ಅವಶ್ಯಕ ವಿದ್ದರೆ, ಸರ್ಕಾರವು ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಆದೇಶದ ಮೂಲಕ ತೊಂದರೆಗಳನ್ನು ನಿವಾರಿಸಲು ಅಗತ್ಯವೆಂದು ಅಥವಾ ಯುಕ್ತವೆಂದು ಕಂಡು ಬರುವ ಉಪಬಂಧಗಳನ್ನು ಮಾಡಬಹುದು”.ಎಂದಿದೆ.

ಸೌಹಾರ್ದ ಕಾಯಿದೆ ಸರ್ಕಾರದ ಪ್ರತ್ಯಕ್ಷ/ಪರೋಕ್ಷ ನೆರವು ಪಡೆಯಲು ನಿರ್ಭಂದ ಇರುವುದರಿಂದ ವಿನಾಯ್ತಿ ನೀಡುವ, ಮಾರ್ಪಡಿಸುವ, ಅಧಿಕಾರವನ್ನು ಕಾಯಿದೆ ನೀಡಿಲ್ಲ.

ಅಂದರೆ ಪೀಠಿಕೆಯಲ್ಲಿ ನೀಡಿರುವ ಧ್ಯೇಯೋದ್ದೇಶಗಳಿಗನುಗುಣವಾಗಿ ಸ್ವಾಯುತ್ತ, ಸ್ವತಂತ್ರ, ಸ್ವಯಂ ನಿಯಂತ್ರಿತ ಸಂಸ್ಥೆ ನೀತಿಗೆ ಪೂರಕವಾಗಿದೆ. ಅದಕ್ಕಾಗಿ ಸಂಯುಕ್ತ ಸಹಕಾರಿ ಮತ್ತು ಸದಸ್ಯ ಸಹಕಾರಿಗಳ ಸದಸ್ಯರು ಜಾಗೃತವಾಗಿರಬೇಕು, ಮಂಡಳಿ ಜವಾಬ್ದಾರಿಯುತವಾಗಿರಬೇಕು ಹಾಗೂ ಸಹಕಾರಿ ಅಧಿಕಾರಿಗಳು ಬದ್ದತೆಯಿಂದ ಕರ್ತವ್ಯ ನಿರ್ವಹಿಸಬೇಕು. ಸದಸ್ಯರ ಆರ್ಥಿಕ ವ್ಯವಸ್ಥೆಗೆ ಅಧಿಕಾರಿಗಳ ಧ್ಯೇಯೋದ್ದೇಶವಿರಬೇಕು.

ಈ ಲೇಖನದ ಆಶಯ : “ಸಂಯುಕ್ತ ಸಹಕಾರಿ” ರಚನೆಯ ಉದ್ದೇಶ, ಭಾರತದ ಯಾವುದೇ ರಾಜ್ಯದಲ್ಲಿ ಇಲ್ಲದ, ಒಂದು ನೀತಿಯನ್ನು ಕಾಯಿದೆಯಲ್ಲಿ ಸೇರಿಸಿದೆ, ಶಾಸನಾತ್ಮಕ ಜವಾಬ್ದಾರಿ ನಿರ್ವಹಿಸುವಾಗ ಕಾಯಿದೆ ಕಲಂ 53(7)ರಲ್ಲಿ ನೀಡಿರುವ ಜವಾಬ್ದಾರಿ/ಕರ್ತವ್ಯ ನಿರ್ವಹಿಸಲು ಸ್ಥಾಪನೆಯಾದ “ಸಂಯುಕ್ತ ಸಹಕಾರಿ”. ಮಂಡಳಿ ರಚನೆ ಮಾಡುವಾಗ ಮಂಡಳಿ ಸದಸ್ಯರು ತಮ್ಮ ಜವಾಬ್ದಾರಿ ಅರಿತಿರಬೇಕು. 1959ರ ಕಾಯಿದೆ ಅಡಿರಚನೆಯಾದ ರಾಜ್ಯ ಮಟ್ಟದ ಮಹಾಮಂಡಳಗಳನ್ನು ಮಾದರಿಯಾಗಿ ಅನುಸರಿಸಿರುವುದರಿಂದ, ಈ ಕಾಯಿದೆ ಧ್ಯೇಯೋದೇಶಕ್ಕೆ ಪೂರಕವಾಗಿಯೇ ಕೆಲಸ ನಿರ್ವಹಿಸಬೇಕು. ಅವರು ಪ್ರತಿನಿಧಿಸುವ ಸಹಕಾರಿ ಸಂಸ್ಥೆಯಲ್ಲಿ ಕಲಂ 53(7)ರಲ್ಲಿ ನೀಡುವ ಮಾರ್ಗದರ್ಶನ ಸೂತ್ರಗಳನ್ನು ಪಾಲಿಸಬೇಕು. ಅವರೇ ಅಳವಡಿಸಿಕೊಂಡು ನೀತಿ ಸಂಹಿತೆ ಪಾಲಿಸಬೇಕು ಮತ್ತು ಸದಸ್ಯ ಸಹಕಾರಿಗಳಿಗೆ ಮಾದರಿಯಾಗಬೇಕಾದ ಸಂದರ್ಭದಲ್ಲಿ ತಪ್ಪುದಾರಿ ತುಳಿಯಬಾರದು ಮಂಡಳಿ ಸದಸ್ಯರು ಸ್ವಾರ್ಥಿಗಳಾಗಬಾರದು. ಅವರು ಪ್ರತಿನಿಧಿಸುವ ಸಹಕಾರಿ ಹಿತಾಸಕ್ತಿ ಕಾಪಡಲು ಶ್ರಮಿಸುತ್ತಾರೆ. ಶಿಕ್ಷಣ ತಜ್ಞರಲ್ಲದವರನ್ನು ಶಿಕ್ಷಣ ಸಮಿತಿ ಸದಸ್ಯರನ್ನಾಗಿ ಮಾಡಬಾರದು. ಸರ್ಕಾರದ ಮಂತ್ರಿಗಳ ಭತ್ಯೆ ಹೆಚ್ಚಿಸಿದಾಗ ಮಂಡಳಿಯ ಸದಸ್ಯರ ಭತ್ಯೆಯೂ ಹೆಚ್ಚು ಮಾಡಿಕೊಳ್ಳಬಾರದು. ಸಹಕಾರಿಗಳು ಲೆಕ್ಕ ತಪಾಸಣೆ ಮಾಡಿಸದೇ ಇದ್ದಾಗ, ಸಾಮಾನ್ಯ ಸಭೆ ಮಾಡದೇ ಇದ್ದಾಗ, ನಿಬಂಧಕರಿಗೆ / ಸಂಯುಕ್ತ ಸಹಕಾರಿಗೆ ಮಾಹಿತಿ ಸಲ್ಲಿಸದೇ ಇದ್ದಾಗ ಸೂಕ್ತ ಕ್ರಮ ವಿಡುವುದು ಅವಶ್ಯಕ. ಅರ್ನಹತೆಗೊಳ್ಳಗಾದ ವ್ಯಕ್ತಿಗಳ ಮೇಲೆ ತುರ್ತು ಕ್ರಮ ಆಗಬೇಕು. ಅವಧಿಯೊಳಗೆ ಶಿಕ್ಷಣ ನಿಧಿ ಪಾವತಿ ಮಾಡದೇ ಇದ್ದಾಗ ಅವರ ವಿರುದ್ಧ ಕ್ರಮವನ್ನು ಜರುಗಿಸಬೇಕು. ವಂತಿಗೆ ನೀಡದ ಸದಸ್ಯ ಸಹಕಾರಿಗಳ ಮೇಲೆ ತುರ್ತು ಕ್ರಮವಿಡಬೇಕು. ತಪ್ಪು ಮಾಡಿದ ಸದಸ್ಯ ಸಹಕಾರಿಗಳ ಮೇಲೆ ಆಡಳಿತಾಧಿಕಾರಿ ನೇಮಕ ಮಾಡಬೇಕು. ಅಧಿಕಾರಿಗಳ ತಪಾಸಣಾ ವರದಿ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು. ಸದಸ್ಯ ಸಹಕಾರಿಗಳ ಮಂಡಳಿ ಸದಸ್ಯರ ಭತ್ಯೆಗೆ ನಿಯಂತ್ರಣ ವಿಡಬೇಕು. ಕಾಯಿದೆಗೆ ವಿರುದ್ಧವಾಗಿ ನಿರ್ದೇಶಕರು, ಕಾರ್ಯನಿರ್ವಾಹಕ ನಿರ್ದೇಶಕರು ನೇಮಕಗಳಿಗೆ ಸೂಕ್ತ ಕ್ರಮ ಅಗತ್ಯ. ಅಂದರೆ ಮಾದರಿಯಾಗಬೇಕಾದ ಸಂಯುಕ್ತ ಸಹಕಾರಿಯೇ ತಪ್ಪು ನಿರ್ಧಾರ ತೆಗೆದುಕೊಂಡರೆ ಸದಸ್ಯ ಸಹಕಾರಿಗಳು ಅದನ್ನು ಅನುಕರಣೆ ಮಾಡುತ್ತಾರೆಂಬ ತಿಳುವಳಿಕೆ ಇರಬೇಕು.

**ಉಪಸಂಹಾರ :–**

ರಾಷ್ಟ್ರದಲ್ಲಿ ಒಂದು ಕಾಯಿದೆಯಡಿ ರಚನೆಯಾದ ಪ್ರಜಾಪ್ರಭುತ್ವದಡಿ ರೂಪಿತವಾದ ಮಾದರಿ “ಸಂಯುಕ್ತ ಸಹಕಾರಿ ”ರಾಷ್ಟ್ರಕ್ಕೆ ಮಾದರಿ. “ಸಂಯುಕ್ತ ಸಹಕಾರಿ” ಮಾರ್ಗದರ್ಶಿ ಸೂತ್ರಗಳನ್ನು ನಿರ್ದೇಶನಗಳಂತೆ ತಿಳಿಯಬೇಕು. ಇದು ಸಂಯುಕ್ತ ಸಹಕಾರಿಗೆ ನೀಡಿದ ಶಾಸನಾತ್ಮಕ ಅಧಿಕಾರ ಅಂದರೆ “ಸಂಯುಕ್ತ ಸಹಕಾರಿ” ನೀಡುವ ಮಾರ್ಗದರ್ಶನ ಸೂತ್ರಗಳನ್ನು ಸದಸ್ಯ ಸಹಕಾರಿಗಳು ನಿರ್ದೇಶನವೆಂದು ತಿಳಿಯಬೇಕು. ಏಕೆಂದರೆ ಸಂಯುಕ್ತ ಸಹಕಾರಿಯನ್ನು ಹೊರತುಪಡಿಸಿ ಮತ್ತೊಂದು ಪ್ರಾಧಿಕಾರ, ಸದಸ್ಯ ಸಹಕಾರಿಗಳನ್ನು ನಿಯಂತ್ರಿಸಲು ಅವಕಾಶವಿಲ್ಲ. ಅದಕ್ಕಾಗಿ “ಸಂಯುಕ್ತ ಸಹಕಾರಿ” ವೃತ್ತಿಪರ ಪ್ರವೃತ್ತಿ ಹೊಂದಿರಬೇಕು. ವ್ಯಕ್ತಿಗಳ ಆಧಾರದಲ್ಲಿ ಪ್ರಕರಣ ಪರಿಶೀಲಿಸಲಾಗದು. ಸಂಯುಕ್ತ ಸಹಕಾರಿ ತನ್ನ ಕಾರ್ಯನಿರ್ವಹಣೆಯಲ್ಲಿ ಮಾದರಿ ಆದಾಗ ಮಾತ್ರ, ಸದಸ್ಯ ಸಹಕಾರಿಗಳನ್ನು ನಿಯಂತ್ರಿಸಲು ಸಾಧ್ಯ.

# ಸಹಕಾರಿ ಆಡಳಿತ : ತತ್ವಗಳು, ರಚನೆ ಮತ್ತು ಸವಾಲುಗಳು

– ಶ್ರೀ ರಾಜೇಶ್, ಉಪನ್ಯಾಸಕರು, ವಿಶ್ವವಿದ್ಯಾನಿಲಯದ ಕಲಾ ಕಾಲೇಜು, ತುಮಕೂರು.

## 1. ಪೀಠಿಕೆ (Introduction)

ಸಹಕಾರಿ ಚಳವಳಿ ಎಂಬುದು ಜನ ಸಾಮಾನ್ಯರ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಗೆ ಸಹಾಯ ಮಾಡುವ ಒಂದು ಪ್ರಜಾಪ್ರಭುತ್ವಾಧಾರಿತ ವ್ಯವಸ್ಥೆಯಾಗಿದೆ. ಲಾಭವನ್ನು ಪ್ರಧಾನ ಉದ್ದೇಶವಾಗಿರಿಸದೆ, ಸದಸ್ಯರ ಪರಸ್ಪರ ಸಹಕಾರ, ಸ್ವಯಂ ಸಹಾಯ ಮತ್ತು ಸಮಾನತೆಯ ತತ್ವಗಳ ಮೇಲೆ ಸ್ಥಾಪಿತವಾಗಿರುವ ಸಹಕಾರಿ ಸಂಸ್ಥೆಗಳು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ಸಮಗ್ರ ಅಭಿವೃದ್ಧಿಗೆ ಮಹತ್ವದ ಪಾತ್ರ ವಹಿಸುತ್ತಿವೆ. ಕೃಷಿ, ಸಾಲ, ವಿತರಣೆ, ಉತ್ಪಾದನೆ, ಗೃಹನಿರ್ಮಾಣ, ಹಾಲು ಮತ್ತು ಸೇವಾ ಕ್ಷೇತ್ರಗಳಲ್ಲಿ ಸಹಕಾರಿ ಸಂಸ್ಥೆಗಳು ಜನರಿಗೆ ಆರ್ಥಿಕ ಭದ್ರತೆ ಮತ್ತು ಸ್ವಾವಲಂಬನೆ ಒದಗಿಸುತ್ತಿವೆ. ಇಂತಹ ಸಂಸ್ಥೆಗಳ ಯಶಸ್ಸು ಕೇವಲ ಹಣಕಾಸು ಸಂಪನ್ಮೂಲಗಳ ಮೇಲೆ ಮಾತ್ರ ಅವಲಂಬಿತವಾಗಿರದೆ, ಅವುಗಳನ್ನು ಹೇಗೆ ಆಡಳಿತ ನಡೆಸಲಾಗುತ್ತದೆ ಎಂಬುದರ ಮೇಲೂ ಬಹುಮಟ್ಟಿಗೆ ನಿರ್ಧಾರವಾಗುತ್ತದೆ.

ಈ ಹಿನ್ನೆಲೆಯಲ್ಲಿ ಸಹಕಾರಿ ಆಡಳಿತ (Co-operative Governance) ಅತ್ಯಂತ ಮಹತ್ವ ಪಡೆದಿದೆ. ಸಹಕಾರಿ ಆಡಳಿತವೆಂದರೆ ಸಂಸ್ಥೆಯ ಕಾರ್ಯಾಚರಣೆ, ನಿರ್ಧಾರ ಪ್ರಕ್ರಿಯೆ ಮತ್ತು ಸಂಪನ್ಮೂಲ ಬಳಕೆಯನ್ನು ಪಾರದರ್ಶಕತೆ, ಹೊಣೆಗಾರಿಕೆ, ನೈತಿಕತೆ ಮತ್ತು ಕಾನೂನು ಪಾಲನೆಯ ಆಧಾರದ ಮೇಲೆ ನಡೆಸುವ ವ್ಯವಸ್ಥೆ. ಉತ್ತಮ ಆಡಳಿತ ವ್ಯವಸ್ಥೆಇಲ್ಲದ ಸಹಕಾರಿ ಸಂಸ್ಥೆಗಳು ಭ್ರಷ್ಟಾಚಾರ, ದುರ್ಬಳಕೆ, ಅಕ್ರಮ ನಿರ್ಧಾರಗಳು ಮತ್ತು ಸದಸ್ಯರ ನಂಬಿಕೆ ಕುಸಿತಕ್ಕೆ ಒಳಗಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಆದ್ದರಿಂದ, ಪ್ರಜಾಪ್ರಭುತ್ವಾತ್ಮಕ ನಿರ್ವಹಣೆ, ನಿರ್ದೇಶಕ ಮಂಡಳಿಯ ಜವಾಬ್ದಾರಿ, ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ ಹಾಗೂ ಪರಿಣಾಮಕಾರಿ ಮೇಲ್ವಿಚಾರಣೆ ಇರುವ ಆಡಳಿತ ವ್ಯವಸ್ಥೆ ಸಹಕಾರಿ ಸಂಸ್ಥೆಗಳ ದೀರ್ಘಕಾಲೀನ ಸ್ಥಿರತೆ ಮತ್ತು ಯಶಸ್ಸಿಗೆ ಅತ್ಯಗತ್ಯವಾಗಿದೆ.

## 2. ಸಹಕಾರಿ ಆಡಳಿತದ ಅರ್ಥ (Meaning of Co-operative Governance)

### 2.1 ಅರ್ಥ

ಸಹಕಾರಿ ಆಡಳಿತ ಎಂದರೆ ಸಹಕಾರಿ ಸಂಸ್ಥೆಯನ್ನು ಕಾನೂನುಬದ್ಧವಾಗಿ, ಪ್ರಜಾಪ್ರಭುತ್ವದ ರೀತಿಯಲ್ಲಿ ಮತ್ತು ಸದಸ್ಯರ ಹಿತಾಸಕ್ತಿಗೆ ಅನುಗುಣವಾಗಿ ನಡೆಸುವ ವ್ಯವಸ್ಥೆ. ಇದರಲ್ಲಿ ನಿರ್ದೇಶಕ ಮಂಡಳಿ, ವ್ಯವಸ್ಥಾಪಕರು, ಸದಸ್ಯರು ಮತ್ತು ನಿಯಂತ್ರಣ ಸಂಸ್ಥೆಗಳ ಪಾತ್ರ ಪ್ರಮುಖವಾಗಿದೆ.

### 2.2 ವ್ಯಾಖ್ಯಾನ:

ಸಹಕಾರಿ ಆಡಳಿತವೆಂದರೆ ಸಹಕಾರಿ ಸಂಸ್ಥೆಯ ಕಾರ್ಯಾಚರಣೆಯನ್ನು ನೈತಿಕತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯ ಆಧಾರದ ಮೇಲೆ ನಡೆಸುವ ವ್ಯವಸ್ಥೆ.

## 3. ಸಹಕಾರಿ ಆಡಳಿತದ ಉದ್ದೇಶಗಳು (Objectives of Co-operative Governance)

### 3.1. ಸದಸ್ಯರ ಆರ್ಥಿಕ ಹಿತಾಸಕ್ತಿಯನ್ನು ರಕ್ಷಿಸುವುದು

ಸಹಕಾರಿ ಸಂಸ್ಥೆಯ ಮೂಲ ಉದ್ದೇಶ ಸದಸ್ಯರ ಆರ್ಥಿಕ ಕಲ್ಯಾಣವಾಗಿರುವುದರಿಂದ, ಆಡಳಿತ ವ್ಯವಸ್ಥೆ ಸದಸ್ಯರ ಉಳಿತಾಯ, ಹೂಡಿಕೆ ಮತ್ತು ಸಾಲ ಸೌಲಭ್ಯಗಳನ್ನು ಸುರಕ್ಷಿತವಾಗಿ ನಿರ್ವಹಿಸಬೇಕು. ಯಾವುದೇ ನಿರ್ಧಾರವೂ ಸದಸ್ಯರ ಹಿತಾಸಕ್ತಿಗೆ ವಿರುದ್ಧವಾಗದಂತೆ ಕೈಗೊಳ್ಳುವುದು ಆಡಳಿತದ ಪ್ರಮುಖ ಜವಾಬ್ದಾರಿಯಾಗಿದೆ. ಇದರಿಂದ ಸದಸ್ಯರಲ್ಲಿ ಸಂಸ್ಥೆಯ ಮೇಲಿನ ನಂಬಿಕೆ ಮತ್ತು ಬದ್ಧತೆ ಹೆಚ್ಚಾಗುತ್ತದೆ.

### 3.2. ಪಾರದರ್ಶಕ ಮತ್ತು ಹೊಣೆಗಾರ ಆಡಳಿತ ಒದಗಿಸುವುದು

ಸಹಕಾರಿ ಆಡಳಿತವು ಸಂಸ್ಥೆಯ ಎಲ್ಲಾ ಕಾರ್ಯಾಚರಣೆಗಳಲ್ಲಿ ಪಾರದರ್ಶಕತೆಯನ್ನು ಕಾಪಾಡುವ ಉದ್ದೇಶ ಹೊಂದಿರುತ್ತದೆ. ಹಣಕಾಸು ವ್ಯವಹಾರಗಳು, ನಿರ್ಧಾರ ಪ್ರಕ್ರಿಯೆ ಮತ್ತು ನೀತಿಗಳನ್ನು ಸದಸ್ಯರಿಗೆ ಸ್ಪಷ್ಟವಾಗಿ ತಿಳಿಸುವ ಮೂಲಕ ಹೊಣೆಗಾರಿಕೆಯನ್ನು ಬಲಪಡಿಸಲಾಗುತ್ತದೆ. ಇದರಿಂದ ಅಕ್ರಮಗಳು ಮತ್ತು ದುರ್ಬಳಕೆ ತಡೆಯಲು ಸಾಧ್ಯವಾಗುತ್ತದೆ.

### 3.3. ಸಹಕಾರಿ ತತ್ವಗಳ ಪರಿಣಾಮಕಾರಿ ಅನುಷ್ಠಾನ

ಸಹಕಾರಿ ಸಂಸ್ಥೆಗಳು ಸ್ವಯಂ ಸಹಾಯ, ಪರಸ್ಪರ ಸಹಕಾರ ಮತ್ತು ಪ್ರಜಾಪ್ರಭುತ್ವದ ತತ್ವಗಳ ಮೇಲೆ ಕಾರ್ಯನಿರ್ವಹಿಸಬೇಕು. ಉತ್ತಮ ಆಡಳಿತ ವ್ಯವಸ್ಥೆ ಈ ತತ್ವಗಳನ್ನು ನೈಜ ಕಾರ್ಯ ಪ್ರವೃತ್ತಿಯಲ್ಲಿ ಅನುಷ್ಠಾನಗೊಳಿಸಲು ಸಹಕಾರಿಯಾಗಿದೆ. ಇದರಿಂದ ಸಹಕಾರಿ ಚಳವಳಿಯ ಮೂಲ ಆತ್ಮಸ್ಫೂರ್ತಿಕಾಪಾಡಲ್ಪಡುತ್ತದೆ.

### 3.4. ಹಣಕಾಸು ಶಿಸ್ತು ಮತ್ತು ಸ್ಥಿರತೆ ಕಾಪಾಡುವುದು

ಸಹಕಾರಿ ಆಡಳಿತದ ಮತ್ತೊಂದು ಪ್ರಮುಖ ಉದ್ದೇಶ ಹಣಕಾಸು

ಶಿಸ್ತು ಕಾಪಾಡುವುದಾಗಿದೆ. ಸರಿಯಾದ ಬಜೆಟ್, ಲೆಕ್ಕಪತ್ರ ನಿರ್ವಹಣೆ ಮತ್ತು ನಿಯಮಿತ ಆಡಿಟ್ ಮೂಲಕ ಸಂಸ್ಥೆಯ ಆರ್ಥಿಕ ಸ್ಥಿರತೆ ಸಾಧಿಸಲಾಗುತ್ತದೆ. ಇದರಿಂದ ನಷ್ಟಗಳು ಕಡಿಮೆಯಾಗುತ್ತವೆ ಮತ್ತು ಸಂಸ್ಥೆಯ ವಿಶ್ವಾಸಾರ್ಹತೆ ಹೆಚ್ಚಾಗುತ್ತದೆ.

### 3.5. ಭ್ರಷ್ಟಾಚಾರ ಮತ್ತು ದುರ್ಬಳಕೆಯನ್ನು ತಡೆಯುವುದು

ದುರ್ಬಲ ಆಡಳಿತ ವ್ಯವಸ್ಥೆ ಭ್ರಷ್ಟಾಚಾರಕ್ಕೆ ಅವಕಾಶ ನೀಡುತ್ತದೆ. ಉತ್ತಮ ಸಹಕಾರಿ ಆಡಳಿತವು ಸ್ಪಷ್ಟ ನಿಯಮಗಳು, ಮೇಲ್ವಿಚಾರಣೆ ಮತ್ತು ಪರಿಶೀಲನೆಗಳ ಮೂಲಕ ದುರ್ಬಳಕೆಯನ್ನು ನಿಯಂತ್ರಿಸುತ್ತದೆ. ಇದರ ಪರಿಣಾಮವಾಗಿ ಸಂಸ್ಥೆಯ ಸಂಪನ್ಮೂಲಗಳು ಸಮರ್ಪಕವಾಗಿ ಬಳಸಲ್ಪಡುತ್ತವೆ.

### 3.6. ಸಂಸ್ಥೆಯ ದೀರ್ಘಕಾಲೀನ ಅಭಿವೃದ್ಧಿ ಸಾಧಿಸುವುದು

ಸಹಕಾರಿ ಆಡಳಿತವು ಕೇವಲ ತಾತ್ಕಾಲಿಕ ಲಾಭಕ್ಕಿಂತ ದೀರ್ಘಕಾಲೀನ ಬೆಳವಣಿಗೆಯನ್ನು ಗುರಿಯಾಗಿರಿಸುತ್ತದೆ. ವೃತ್ತಿಪರ ನಿರ್ವಹಣೆ, ತಂತ್ರಜ್ಞಾನ ಬಳಕೆ ಮತ್ತು ಸಮರ್ಥ ಯೋಜನೆಯ ಮೂಲಕ ಸಂಸ್ಥೆಯ ಸ್ಥಿರ ಅಭಿವೃದ್ಧಿ ಸಾಧ್ಯವಾಗುತ್ತದೆ. ಇದರಿಂದ ಸಹಕಾರಿ ಸಂಸ್ಥೆಗಳು ಭವಿಷ್ಯದಲ್ಲೂ ಸಮರ್ಥ ವಾಗಿಕಾರ್ಯನಿರ್ವಹಿಸಬಹುದು.

## 4. ಸಹಕಾರಿ ಆಡಳಿತದ ತತ್ವಗಳು (Principles of Co-operative Governance)

### 4.1. ಪ್ರಜಾಪ್ರಭುತ್ವ ಆಡಳಿತ (Democratic Governance)

ಸಹಕಾರಿ ಸಂಸ್ಥೆಗಳು "ಒಂದು ಸದಸ್ಯ – ಒಂದು ಮತ" ಎಂಬ ತತ್ವದ ಮೇಲೆ ಕಾರ್ಯನಿರ್ವಹಿಸುತ್ತವೆ. ಈ ತತ್ವವು ಎಲ್ಲಾ ಸದಸ್ಯರಿಗೆ ಸಮಾನ ಹಕ್ಕು ಮತ್ತು ನಿರ್ಧಾರ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಅವಕಾಶ ನೀಡುತ್ತದೆ. ಪ್ರಜಾಪ್ರಭುತ್ವಾತ್ಮಕ ಆಡಳಿತದಿಂದ ಸಂಸ್ಥೆಯ ಮೇಲೆ ಸದಸ್ಯರ ನಂಬಿಕೆ ಮತ್ತು ಬದ್ಧತೆ ಹೆಚ್ಚಾಗುತ್ತದೆ.

### 4.2. ಪಾರದರ್ಶಕತೆ (Transparency)

ಸಹಕಾರಿ ಆಡಳಿತದಲ್ಲಿ ಎಲ್ಲಾ ಹಣಕಾಸು ಮತ್ತು ಆಡಳಿತಾತ್ಮಕ ವ್ಯವಹಾರಗಳು ಸ್ಪಷ್ಟವಾಗಿರಬೇಕು. ನಿರ್ಧಾರಗಳು, ಲೆಕ್ಕಪತ್ರಗಳು ಮತ್ತು ನೀತಿಗಳನ್ನು ಸದಸ್ಯರಿಗೆ ಮುಕ್ತವಾಗಿ ತಿಳಿಸುವುದು ಪಾರದರ್ಶಕತೆಯ ಲಕ್ಷಣವಾಗಿದೆ. ಇದರಿಂದ ದುರ್ಬಳಕೆ ಮತ್ತು ಅಕ್ರಮಗಳನ್ನು ತಡೆಯಲು ಸಾಧ್ಯವಾಗುತ್ತದೆ.

### 4.3. ಹೊಣೆಗಾರಿಕೆ (Accountability)

ನಿರ್ದೇಶಕ ಮಂಡಳಿ ಮತ್ತು ನಿರ್ವಹಣಾ ಸಿಬ್ಬಂದಿ ತಮ್ಮ ಕರ್ತವ್ಯಗಳಿಗೆ ಹೊಣೆಗಾರರಾಗಿರಬೇಕು. ಕೈಗೊಳ್ಳುವ ಪ್ರತಿಯೊಂದು ನಿರ್ಧಾರಕ್ಕೂ ಸದಸ್ಯರಿಗೆ ಉತ್ತರದಾಯಿತ್ವ ವಹಿಸುವುದು ಸಹಕಾರಿ ಆಡಳಿತದ ಮೂಲಭೂತ ತತ್ವವಾಗಿದೆ. ಹೊಣೆಗಾರಿಕೆಯು ಆಡಳಿತ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿಯಾಗಿಸುತ್ತದೆ.

### 4.4. ನೈತಿಕತೆ ಮತ್ತು ಪ್ರಾಮಾಣಿಕತೆ (Ethics and Integrity)

ಸಹಕಾರಿ ಆಡಳಿತವು ನೈತಿಕ ಮೌಲ್ಯಗಳು ಮತ್ತು ಪ್ರಾಮಾಣಿಕತೆಯ ಮೇಲೆ ಆಧಾರಿತವಾಗಿರಬೇಕು. ವೈಯಕ್ತಿಕ ಲಾಭಕ್ಕಿಂತ ಸಂಸ್ಥೆಯ ಹಾಗೂ ಸದಸ್ಯರ ಹಿತಾಸಕ್ತಿಯನ್ನು ಪ್ರಧಾನವಾಗಿ ಪರಿಗಣಿಸಬೇಕು. ಇದರಿಂದ ಸಂಸ್ಥೆಯ ಗೌರವ ಮತ್ತು ವಿಶ್ವಾಸಾರ್ಹತೆ ಉಳಿಯುತ್ತದೆ.

### 4.5. ಸದಸ್ಯರ ಸಕ್ರಿಯ ಭಾಗವಹಿಕೆ (Active Member Participation)

ಸಹಕಾರಿ ಸಂಸ್ಥೆಯ ಯಶಸ್ಸಿಗೆ ಸದಸ್ಯರ ಸಕ್ರಿಯ ಭಾಗವಹಿಕೆ ಅತ್ಯಗತ್ಯವಾಗಿದೆ. ಸಭೆಗಳಲ್ಲಿ ಹಾಜರಾತಿ, ಅಭಿಪ್ರಾಯ ವ್ಯಕ್ತಪಡಿಸುವಿಕೆ ಮತ್ತು ನಿರ್ಧಾರಗಳಲ್ಲಿ ಪಾಲ್ಗೊಳ್ಳುವಿಕೆ ಈ ತತ್ವದ ಭಾಗವಾಗಿದೆ. ಇದರಿಂದ ಸಂಸ್ಥೆಯ ನಿರ್ವಹಣೆ ಹೆಚ್ಚು ಪರಿಣಾಮಕಾರಿಯಾಗುತ್ತದೆ.

### 4.6. ಕಾನೂನು ಮತ್ತು ನಿಯಮಗಳ ಪಾಲನೆ (Compliance with Laws and Rules)

ಸಹಕಾರಿ ಸಂಸ್ಥೆಗಳು ಸಂಬಂಧಿತ ಸಹಕಾರಿ ಕಾಯ್ದೆಗಳು, ಉಪನಿಯಮಗಳು ಮತ್ತು ಸರ್ಕಾರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕಾನೂನು ಪಾಲನೆಯಿಂದ ಸಂಸ್ಥೆ ಅಪಾಯಗಳಿಂದ ರಕ್ಷಿತವಾಗುತ್ತದೆ. ಜೊತೆಗೆ ಆಡಳಿತ ವ್ಯವಸ್ಥೆಯ ಸ್ಥಿರತೆ ಮತ್ತು ಶಿಸ್ತು ಕಾಪಾಡಲ್ಪಡುತ್ತದೆ.

### 4.7. ವೃತ್ತಿಪರತೆ ಮತ್ತು ಸಾಮರ್ಥ್ಯ (Professionalism and Competence)

ಸಹಕಾರಿ ಆಡಳಿತದಲ್ಲಿ ವೃತ್ತಿಪರಜ್ಞಾನ ಮತ್ತು ಕೌಶಲ್ಯಗಳನ್ನು ಅಳವಡಿಸುವುದು ಅತ್ಯವಶ್ಯಕವಾಗಿದೆ. ನಿರ್ದೇಶಕರು ಮತ್ತು ನಿರ್ವಹಣಾ ಸಿಬ್ಬಂದಿಗೆ ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ ಅಗತ್ಯವಿದೆ. ಇದರಿಂದ ಸಂಸ್ಥೆಯ ಕಾರ್ಯಕ್ಷಮತೆ ಮತ್ತು ಸೇವಾ ಗುಣಮಟ್ಟ ಹೆಚ್ಚಾಗುತ್ತದೆ.

## 5. ಸಹಕಾರಿ ಆಡಳಿತದ ರಚನೆ (Structure of Co-operative Governance)

### 5.1. ಸಾಮಾನ್ಯ ಸಭೆ (General Body)

ಸಾಮಾನ್ಯ ಸಭೆ ಸಹಕಾರಿ ಸಂಸ್ಥೆಯ ಅತ್ಯುನ್ನತ ಅಂಗವಾಗಿದ್ದು, ಎಲ್ಲಾ

ಸದಸ್ಯರನ್ನು ಒಳಗೊಂಡಿರುತ್ತದೆ. ಸಂಸ್ಥೆಯ ಪ್ರಮುಖ ನೀತಿಗಳು, ನಿಯಮಗಳು ಮತ್ತು ದೀರ್ಘಕಾಲೀನ ನಿರ್ಧಾರಗಳನ್ನು ಈ ಸಭೆಯಲ್ಲಿ ಕೈಗೊಳ್ಳಲಾಗುತ್ತದೆ. ಆಡಳಿತ ಮಂಡಳಿಯ ಕಾರ್ಯಾಚರಣೆಯ ಮೇಲೆ ಮೇಲ್ವಿಚಾರಣೆ ನಡೆಸುವ ಅಧಿಕಾರವೂ ಸಾಮಾನ್ಯ ಸಭೆಗೆ ಸೇರಿದೆ.

- ವಾರ್ಷಿಕ ಸಾಮಾನ್ಯ ಸಭೆ (AGM)
- ವಿಶೇಷ ಸಾಮಾನ್ಯ ಸಭೆ
- ಲೆಕ್ಕಪತ್ರ ಮತ್ತು ಆಡಿಟ್ ವರದಿ ಅನುಮೋದನೆ
- ನಿರ್ದೇಶಕರ ಆಯ್ಕೆ ಮತ್ತು ವಜಾ

### 5.2. ನಿರ್ದೇಶಕ ಮಂಡಳಿ (Board of Directors)

ನಿರ್ದೇಶಕ ಮಂಡಳಿ ಸಂಸ್ಥೆಯ ನೀತಿ ನಿರ್ಧಾರ ಮತ್ತು ಆಡಳಿತಾತ್ಮಕ ಮಾರ್ಗದರ್ಶನಕ್ಕೆ ಜವಾಬ್ದಾರಿಯಾಗಿರುತ್ತದೆ. ಸಾಮಾನ್ಯ ಸಭೆಯ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವ ಜವಾಬ್ದಾರಿ ಈ ಮಂಡಳಿಯದ್ದಾಗಿದೆ. ಸಂಸ್ಥೆಯ ಹಣಕಾಸು ಶಿಸ್ತು ಮತ್ತು ಕಾರ್ಯಕ್ಷಮತೆಯನ್ನು ಕಾಪಾಡುವಲ್ಲಿ ನಿರ್ದೇಶಕ ಮಂಡಳಿಯ ಪಾತ್ರಅತ್ಯಂತ ಮಹತ್ವದ್ದಾಗಿದೆ.

- ನೀತಿ ರೂಪಿಸುವುದು
- ನಿರ್ವಹಣೆಯ ಮೇಲ್ವಿಚಾರಣೆ
- ಸಾಲ ಮತ್ತು ಹೂಡಿಕೆ ನಿರ್ಧಾರಗಳು
- ಸಿಬ್ಬಂದಿ ನೇಮಕಕ್ಕೆ ಅನುಮೋದನೆ

## 7. ನಿರ್ದೇಶಕರ ಪಾತ್ರ ಮತ್ತು ಜವಾಬ್ದಾರಿಗಳು (Role and Responsibilities of Directors in Co-operative Governance)

### 7.1. ನೀತಿರೂಪಿಸುವಿಕೆ (Policy Formulation)

ನಿರ್ದೇಶಕರು ಸಹಕಾರಿ ಸಂಸ್ಥೆಯ ದೀರ್ಘಕಾಲೀನ ಗುರಿಗಳನ್ನು ಗಮನದಲ್ಲಿಟ್ಟು ನೀತಿಗಳನ್ನು ರೂಪಿಸಬೇಕು. ಸಂಸ್ಥೆಯ ದೃಷ್ಟಿ, ಮಿಷನ್ ಮತ್ತು ಕಾರ್ಯಯೋಜನೆಗಳನ್ನು ಸ್ಪಷ್ಟವಾಗಿ ನಿರ್ಧರಿಸುವ ಜವಾಬ್ದಾರಿ ನಿರ್ದೇಶಕರದ್ದಾಗಿದೆ. ಉತ್ತಮ ನೀತಿಗಳು ಸಂಸ್ಥೆಯ ಸ್ಥಿರ ಬೆಳವಣಿಗೆಗೆ ದಾರಿ ಮಾಡಿಕೊಡುತ್ತವೆ.

### 7.2. ಸದಸ್ಯರ ಹಿತಾಸಕ್ತಿಯರಕ್ಷಣೆ

ನಿರ್ದೇಶಕರು ಎಲ್ಲಾ ನಿರ್ಧಾರಗಳನ್ನು ಸದಸ್ಯರ ಹಿತಾಸಕ್ತಿಗೆ ಅನುಗುಣವಾಗಿ ಕೈಗೊಳ್ಳಬೇಕು. ವೈಯಕ್ತಿಕ ಅಥವಾ ಗುಂಪಿನ ಲಾಭಕ್ಕಿಂತ ಸಂಸ್ಥೆಯ ಸಮಗ್ರ ಹಿತಾಸಕ್ತಿಗೆ ಆದ್ಯತೆ ನೀಡಬೇಕು. ಇದರಿಂದ ಸದಸ್ಯರ ವಿಶ್ವಾಸ ಮತ್ತು ನಂಬಿಕೆ ಹೆಚ್ಚಾಗುತ್ತದೆ.

### 7.3. ಹಣಕಾಸು ಮೇಲ್ವಿಚಾರಣೆ

ಸಂಸ್ಥೆಯ ಹಣಕಾಸು ವ್ಯವಹಾರಗಳ ಮೇಲ್ವಿಚಾರಣೆ ನಿರ್ದೇಶಕರ ಪ್ರಮುಖ ಜವಾಬ್ದಾರಿಯಾಗಿದೆ. ಬಜೆಟ್, ಲೆಕ್ಕಪತ್ರಗಳು ಮತ್ತು ಆಡಿಟ್ ವರದಿಗಳನ್ನು ಪರಿಶೀಲಿಸುವ ಮೂಲಕ ಹಣಕಾಸು ಶಿಸ್ತು ಕಾಪಾಡಬೇಕು. ಹಣದ ದುರ್ಬಳಕೆ ಮತ್ತು ನಷ್ಟಗಳನ್ನು ತಡೆಯುವುದು ಇದರ ಉದ್ದೇಶವಾಗಿದೆ.

### 7.4. ನಿರ್ವಹಣೆಯ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ

ನಿರ್ದೇಶಕರು ಕಾರ್ಯನಿರ್ವಹಣಾ ವ್ಯವಸ್ಥಾಪಕರ ಕಾರ್ಯಾಚರಣೆಯ ಮೇಲೆ ಮೇಲ್ವಿಚಾರಣೆ ನಡೆಸಬೇಕು. ದಿನನಿತ್ಯದ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡದೇ, ಮಾರ್ಗದರ್ಶನ ಮತ್ತು ಬೆಂಬಲ ನೀಡುವುದು ಅವರ ಕರ್ತವ್ಯವಾಗಿದೆ. ಇದರಿಂದ ನಿರ್ವಹಣೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತದೆ.

### 7.5. ಕಾನೂನು ಮತ್ತು ನಿಯಮಗಳ ಪಾಲನೆ ಖಚಿತಪಡಿಸುವುದು

ಸಹಕಾರಿ ಕಾಯ್ದೆಗಳು, ಉಪನಿಯಮಗಳು ಮತ್ತು ಸರ್ಕಾರದ ನಿರ್ದೇಶನಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದು ನಿರ್ದೇಶಕರ ಜವಾಬ್ದಾರಿಯಾಗಿದೆ. ಯಾವುದೇ ಕಾನೂನು ಉಲ್ಲಂಘನೆ ಸಂಸ್ಥೆಗೆ ಹಾನಿ ಉಂಟು ಮಾಡಬಹುದು. ಆದ್ದರಿಂದ ಕಾನೂನು ಪಾಲನೆಗೆ ನಿರ್ದೇಶಕರು ಎಚ್ಚರಿಕೆಯಿಂದಿರಬೇಕು.

### 7.6. ಸಭೆಗಳ ಆಯೋಜನೆ ಮತ್ತು ಭಾಗವಹಿಕೆ

ನಿರ್ದೇಶಕರು ನಿಯಮಿತವಾಗಿ ಮಂಡಳಿ ಸಭೆಗಳು ಮತ್ತು ಸಾಮಾನ್ಯ ಸಭೆಗಳನ್ನು ಆಯೋಜಿಸಬೇಕು. ಸಭೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ಚರ್ಚೆಗಳಲ್ಲಿ ಕೊಡುಗೆ ನೀಡುವುದು ಅವರ ಕರ್ತವ್ಯವಾಗಿದೆ. ಸಭೆಗಳ ಮೂಲಕ ಪಾರದರ್ಶಕ ನಿರ್ಧಾರ ಪ್ರಕ್ರಿಯೆ ಸಾಧ್ಯವಾಗುತ್ತದೆ.

### 7.7. ಅಪಾಯ ನಿರ್ವಹಣೆ (Risk Management)

ಸಂಸ್ಥೆ ಎದುರಿಸಬಹುದಾದ ಹಣಕಾಸು, ಆಡಳಿತಾತ್ಮಕ ಮತ್ತು ಕಾರ್ಯಾಚರಣಾ ಅಪಾಯಗಳನ್ನು ಗುರುತಿಸುವುದು ನಿರ್ದೇಶಕರ ಕರ್ತವ್ಯವಾಗಿದೆ. ಸೂಕ್ತ ನಿಯಂತ್ರಣ ಕ್ರಮಗಳನ್ನು ಅಳವಡಿಸುವ ಮೂಲಕ ಅಪಾಯಗಳನ್ನು ಕಡಿಮೆ ಮಾಡಬೇಕು. ಇದರಿಂದ ಸಂಸ್ಥೆಯ ಸ್ಥಿರತೆ ಮತ್ತು ಭದ್ರತೆ ಹೆಚ್ಚಾಗುತ್ತದೆ.

### 7.8. ನೈತಿಕತೆ ಮತ್ತು ಶಿಸ್ತು ಕಾಪಾಡುವುದು

ನಿರ್ದೇಶಕರು ನೈತಿಕ ಮೌಲ್ಯಗಳು ಮತ್ತು ಪ್ರಾಮಾಣಿಕತೆಯನ್ನು ತಮ್ಮ

ವರ್ತನೆಯಲ್ಲಿ ಅನುಸರಿಸಬೇಕು. ಸಂಸ್ಥೆಯೊಳಗೆ ಶಿಸ್ತು ಮತ್ತು ನೈತಿಕ ಸಂಸ್ಕೃತಿಯನ್ನು ಬೆಳೆಸುವುದು ಅವರ ಜವಾಬ್ದಾರಿಯಾಗಿದೆ. ಇದರಿಂದ ಆಡಳಿತ ವ್ಯವಸ್ಥೆಯ ವಿಶ್ವಾಸಾರ್ಹತೆ ಹೆಚ್ಚುತ್ತದೆ.

### 7.9. ತರಬೇತಿ ಮತ್ತು ಸಾಮರ್ಥ್ಯ ವೃದ್ಧಿ

ನಿರ್ದೇಶಕರು ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ನಿರಂತರವಾಗಿ ಅಭಿವೃದ್ಧಿ ಪಡಿಸಬೇಕು. ಸಹಕಾರಿ ಕಾಯ್ದೆಗಳು, ಹಣಕಾಸು ನಿರ್ವಹಣೆ ಮತ್ತು ತಂತ್ರಜ್ಞಾನ ಕುರಿತು ತರಬೇತಿ ಪಡೆಯುವುದು ಅಗತ್ಯವಾಗಿದೆ. ಇದು ಉತ್ತಮ ನಿರ್ಧಾರಗಳನ್ನು ಕೈಗೊಳ್ಳಲು ಸಹಕಾರಿಯಾಗಿದೆ.

### 7.10. ಸದಸ್ಯರೊಂದಿಗೆ ಸಂವಹನ

ಸದಸ್ಯರೊಂದಿಗೆ ನಿರಂತರ ಸಂವಹನ ನಡೆಸುವುದು ನಿರ್ದೇಶಕರ ಪ್ರಮುಖ ಪಾತ್ರವಾಗಿದೆ. ಸಂಸ್ಥೆಯ ಸಾಧನೆಗಳು, ಸವಾಲುಗಳು ಮತ್ತು ಯೋಜನೆಗಳನ್ನು ಸದಸ್ಯರಿಗೆ ತಿಳಿಸಬೇಕು. ಪರಿಣಾಮಕಾರಿ ಸಂವಹನದಿಂದ ಸದಸ್ಯರ ಭಾಗವಹಿಕೆ ಮತ್ತು ಸಹಕಾರ ಹೆಚ್ಚಾಗುತ್ತದೆ.

## 8. ಸಹಕಾರಿ ಆಡಳಿತದ ಸವಾಲುಗಳು (Challenges of Co-operative Governance)

1. ರಾಜಕೀಯ ಹಸ್ತಕ್ಷೇಪ
2. ವೃತ್ತಿಪರ ನಿರ್ವಹಣೆಯ ಕೊರತೆ
3. ಸದಸ್ಯರ ಅಕ್ರಿಯಾಶೀಲತೆ
4. ಹಣಕಾಸು ದುರ್ಬಳಕೆ ಮತ್ತು ಭ್ರಷ್ಟಾಚಾರ
5. ಪಾರದರ್ಶಕತೆಯ ಕೊರತೆ
6. ಕಾನೂನು ಮತ್ತು ನಿಯಮಗಳ ಅಸಮರ್ಪಕ ಪಾಲನೆ
7. ತಂತ್ರಜ್ಞಾನ ಅಳವಡಿಕೆಯ ಕೊರತೆ
8. ತರಬೇತಿ ಮತ್ತು ಸಾಮರ್ಥ್ಯ ವೃದ್ಧಿಯ ಅಭಾವ

## 9. ಸಹಕಾರಿ ಆಡಳಿತದ ಸುಧಾರಣಾ ಕ್ರಮಗಳು (Suggestions for Improving Co-operative Governance)

1 ನಿರ್ದೇಶಕರು ಮತ್ತು ಸಿಬ್ಬಂದಿಗೆ ನಿಯಮಿತ ತರಬೇತಿ ವ್ಯವಸ್ಥೆ ಮಾಡುವುದು.

2 ವೃತ್ತಿಪರ ಮತ್ತು ಅನುಭವೀ ನಿರ್ವಹಣೆಯನ್ನು ಅಳವಡಿಸುವುದು

3 ಪಾರದರ್ಶಕ ನಿರ್ಧಾರ ಪ್ರಕ್ರಿಯೆ ಮತ್ತು ಮಾಹಿತಿ ಹಂಚಿಕೆಯನ್ನು ಬಲಪಡಿಸುವುದು.

4 ನಿಯಮಿತ ಆಂತರಿಕ ಹಾಗೂ ಬಾಹ್ಯ ಆಡಿಟ್ ವ್ಯವಸ್ಥೆ ಜಾರಿಗೊಳಿಸುವುದು

5 ಹಣಕಾಸು ಶಿಸ್ತು ಮತ್ತು ಕಟ್ಟುನಿಟ್ಟಾದ ನಿಯಂತ್ರಣ ಕ್ರಮಗಳನ್ನು ಅನುಸರಿಸುವುದು.

6 ಸದಸ್ಯರ ಸಕ್ರಿಯ ಭಾಗವಹಿಕೆ ಮತ್ತು ಜಾಗೃತಿಯನ್ನು ಉತ್ತೇಜಿಸುವುದು.

7 ತಂತ್ರಜ್ಞಾನ ಮತ್ತು ಡಿಜಿಟಲ್ ಆಡಳಿತ ವ್ಯವಸ್ಥೆಗಳ ಅಳವಡಿಕೆ

8 ಕಾನೂನು ಮತ್ತು ಸಹಕಾರಿ ಕಾಯ್ದೆಗಳ ಕಟ್ಟುನಿಟ್ಟಾದ ಪಾಲನೆ

9 ನೈತಿಕತೆ ಮತ್ತು ಪ್ರಾಮಾಣಿಕತೆಯನ್ನು ಉತ್ತೇಜಿಸುವ ಆಡಳಿತ ಸಂಸ್ಕೃತಿ ಬೆಳೆಸುವುದು.

10 ಫೆಡರೇಶನ್ ಮತ್ತು ಅಪೆಕ್ಸ್ ಸಂಸ್ಥೆಗಳ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆಯನ್ನು ಬಲಪಡಿಸುವುದು

## 10. ಸಮಾಪನ (Conclusion)

ಸಹಕಾರಿ ಸಂಸ್ಥೆಗಳ ಯಶಸ್ಸು ಮತ್ತು ಸ್ಥಿರತೆ ಬಹುಮಟ್ಟಿಗೆಉತ್ತಮ ಆಡಳಿತ ವ್ಯವಸ್ಥೆಯ ಮೇಲೆ ಅವಲಂಬಿತವಾಗಿದೆ. ಪ್ರಜಾಪ್ರಭುತ್ವಾತ್ಮಕ ನಿರ್ವಹಣೆ, ಪಾರದರ್ಶಕತೆ, ಹೊಣೆಗಾರಿಕೆ ಮತ್ತು ನೈತಿಕತೆ ಸಹಕಾರಿ ಆಡಳಿತದ ಮೂಲ ಅಂಶಗಳಾಗಿವೆ. ನಿರ್ದೇಶಕ ಮಂಡಳಿ, ನಿರ್ವಹಣಾ ಸಿಬ್ಬಂದಿ ಮತ್ತು ಸದಸ್ಯರ ನಡುವೆ ಸಮನ್ವಯ ಹಾಗೂ ಪರಸ್ಪರ ನಂಬಿಕೆ ಇದ್ದಾಗ ಮಾತ್ರ ಸಹಕಾರಿ ಸಂಸ್ಥೆಗಳು ತಮ್ಮ ಉದ್ದೇಶಗಳನ್ನು ಸಮರ್ಥವಾಗಿ ಸಾಧಿಸಬಹುದು. ಉತ್ತಮ ಆಡಳಿತದಿಂದ ಹಣಕಾಸು ಶಿಸ್ತು ಕಾಪಾಡಲ್ಪಡುತ್ತದೆ ಮತ್ತು ಸಂಸ್ಥೆಯ ಮೇಲಿನ ಸದಸ್ಯರ ವಿಶ್ವಾಸ ಮತ್ತಷ್ಟು ಬಲವಾಗುತ್ತದೆ.

ಇಂದಿನ ಸ್ಪರ್ಧಾತ್ಮಕ ಮತ್ತು ತಂತ್ರಜ್ಞಾನಾ ಧಾರಿತ ಪರಿಸ್ಥಿತಿಯಲ್ಲಿ ಸಹಕಾರಿ ಆಡಳಿತವು ನಿರಂತರ ಸುಧಾರಣೆ ಮತ್ತು ವೃತ್ತಿಪರತೆಯನ್ನು ಅಳವಡಿಸಿಕೊಳ್ಳಬೇಕಾಗಿದೆ. ತಂತ್ರಜ್ಞಾನ ಬಳಕೆ, ತರಬೇತಿ, ಕಾನೂನು ಪಾಲನೆ ಮತ್ತು ಸದಸ್ಯರ ಸಕ್ರಿಯ ಭಾಗವಹಿಕೆ ಸಹಕಾರಿ ಸಂಸ್ಥೆಗಳ ಭವಿಷ್ಯವನ್ನು ನಿರ್ಧರಿಸುವ ಪ್ರಮುಖ ಅಂಶಗಳಾಗಿವೆ. ಆದ್ದರಿಂದ, ಉತ್ತಮ ಸಹಕಾರಿ ಆಡಳಿತವನ್ನು ಅನುಸರಿಸುವ ಮೂಲಕ ಸಹಕಾರಿ ಚಳವಳಿಯನ್ನು ಬಲಪಡಿಸಿ, ಸಮಾವೇಶಿತ ಮತ್ತು ದೀರ್ಘಕಾಲೀನ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದು ಅತ್ಯಾವಶ್ಯಕವಾಗಿದೆ.

# ಸಕಾರಾತ್ಮಕ ಚಿಂತನೆ

## ವ್ಯಕ್ತಿತ್ವ ವಿಕಸನಕ್ಕೆ ಅಡಿಗಲ್ಲು : ಸಮತೋಲನದ ಜೀವನಕ್ಕೆ ದಾರಿ ದೀಪ

ಅನುವಾದ : ದಿವ್ಯ.ಟಿ., ಕಿರಿಯ ಅಧಿಕಾರಿ, ಕರಾಸೌಸಂಸನಿ., ಬೆಂಗಳೂರು.

**ಪೀಠಿಕೆ:**

ಸಕಾರಾತ್ಮಕ ಚಿಂತನೆ ಮಾನವ ಜೀವನದಲ್ಲಿ ದಾರಿ ತೋರಿಸುವ ಶಕ್ತಿಯಾಗಿದೆ. ಜೀವನದಲ್ಲಿ ಎದುರಾಗುವ ಪ್ರತಿಯೊಂದು ಪರಿಸ್ಥಿತಿಯನ್ನು ನಾವು ಹೇಗೆ ನೋಡುತ್ತೇವೆ ಎಂಬುದೇ ನಮ್ಮ ಜೀವನದ ಗುಣಮಟ್ಟವನ್ನು ನಿರ್ಧರಿಸುತ್ತದೆ. ಸಮಸ್ಯೆಗಳು, ಸವಾಲುಗಳು ಹಾಗೂ ಅನಿಶ್ಚಿತತೆಗಳು ಜೀವನದ ಅವಿಭಾಜ್ಯ ಅಂಗಗಳಾಗಿದ್ದರೂ, ಅವುಗಳನ್ನು ಧೈರ್ಯದಿಂದ ಎದುರಿಸಲು ಸಕಾರಾತ್ಮಕ ಮನೋಭಾವವೇ ಮುಖ್ಯ ಆಧಾರವಾಗುತ್ತದೆ. ಈ ಮನೋಭಾವ ವ್ಯಕ್ತಿಯನ್ನು ನಿರಾಶೆಯಿಂದ ದೂರವಿಟ್ಟು ಆಶಾವಾದದ ದಾರಿಗೆ ಕೊಂಡೊಯ್ಯುತ್ತದೆ.

ಇಂದಿನ ವೇಗದ ಜೀವನಶೈಲಿಯಲ್ಲಿ ಮಾನಸಿಕ ಒತ್ತಡ, ಆತಂಕ ಹಾಗೂ ಸ್ಪರ್ಧಾತ್ಮಕ ಪರಿಸರ ಹೆಚ್ಚುತ್ತಿರುವ ಸಂದರ್ಭದಲ್ಲಿ ಸಕಾರಾತ್ಮಕ ಚಿಂತನೆಯ ಅಗತ್ಯತೆ ಇನ್ನಷ್ಟು ಹೆಚ್ಚಾಗಿದೆ. ಇದು ಕೇವಲ ಮನಸ್ಸಿನ ಸ್ಥಿತಿ ಮಾತ್ರವಲ್ಲ, ವ್ಯಕ್ತಿಯ ಜೀವನದ ಎಲ್ಲಾ ಕ್ಷೇತ್ರಗಳ ಮೇಲೆ ಪರಿಣಾಮ ಬೀರುವ ಮಹತ್ವದ ಗುಣವಾಗಿದೆ. ವ್ಯಕ್ತಿಯ ವೈಯಕ್ತಿಕ ಬೆಳವಣಿಗೆ, ವೃತ್ತಿ ಜೀವನ ಹಾಗೂ ಸಾಮಾಜಿಕ ಸಂಬಂಧಗಳಲ್ಲಿಯೂ ಸಕಾರಾತ್ಮಕ ಚಿಂತನೆ ಮಹತ್ವದ ಪಾತ್ರವಹಿಸುತ್ತದೆ.

ಸಕಾರಾತ್ಮಕ ಚಿಂತನೆ ವ್ಯಕ್ತಿಗೆ ಆತ್ಮವಿಶ್ವಾಸ, ಸಹನೆ ಮತ್ತು ದೃಢತೆ ನೀಡುತ್ತದೆ. ಇದರಿಂದ ವ್ಯಕ್ತಿ ವಿಫಲತೆಗಳನ್ನು ಪಾಠವಾಗಿ ಸ್ವೀಕರಿಸಿ, ಮುಂದಿನ ಯಶಸ್ಸಿನತ್ತ ಹೆಜ್ಜೆ ಇಡಲು ಪ್ರೇರೇಪಿತನಾಗುತ್ತಾನೆ. ಆದ್ದರಿಂದ, ಸಕಾರಾತ್ಮಕ ಚಿಂತನೆ ಕೇವಲ ಒಂದು ಅಭ್ಯಾಸವಲ್ಲ, ಅದು ಸಮಗ್ರ ವ್ಯಕ್ತಿತ್ವ ವಿಕಸನಕ್ಕೆ ಅವಶ್ಯಕವಾದ ಜೀವನ ಮೌಲ್ಯವಾಗಿದೆ.

**ಸಕಾರಾತ್ಮಕ ಚಿಂತನೆ :**

ಸಕಾರಾತ್ಮಕ ಚಿಂತನೆ ಎಂದರೆ ಯಾವುದೇ ಪರಿಸ್ಥಿತಿ ಎದುರಾದಾಗ ಅದನ್ನು ಉತ್ತಮ ದೃಷ್ಟಿಕೋನದಿಂದ ನೋಡಲು ಪ್ರಯತ್ನಿಸುವ ಮನೋಭಾವ. ಸಮಸ್ಯೆಗಳು ಬಂದಾಗ ನಿರಾಶರಾಗುವುದಕ್ಕಿಂತ, ಪರಿಹಾರ ಹುಡುಕುವ ಮನಸ್ಥಿತಿ ಮತ್ತು "ಇದು ಸಹ ಸರಿಯಾಗುತ್ತದೆ" ಎಂಬ ವಿಶ್ವಾಸವನ್ನು ಉಳಿಸಿಕೊಳ್ಳುವುದು ಸಕಾರಾತ್ಮಕ ಚಿಂತನೆ.

**ಸಕಾರಾತ್ಮಕ ಚಿಂತನೆ ಏಕೆ ಬೇಕು :**

ಸಕಾರಾತ್ಮಕ ಚಿಂತನೆ ಮನಸ್ಸಿಗೆ ಶಾಂತಿ ನೀಡುವುದರ ಜೊತೆಗೆ ಆತ್ಮವಿಶ್ವಾಸವನ್ನು ಹೆಚ್ಚಿಸಿ, ಸಮಸ್ಯೆಗಳನ್ನು ಧೈರ್ಯದಿಂದ ಎದುರಿಸಲು ಸಹಾಯ ಮಾಡುತ್ತದೆ. ಇದು ಉತ್ತಮ ಸಂಬಂಧಗಳನ್ನು ನಿರ್ಮಿಸಲು ಹಾಗೂ ಕೆಲಸದಲ್ಲಿ ಉತ್ಸಾಹ ಮತ್ತು ಕಾರ್ಯಕ್ಷಮತೆಯನ್ನು ಹೆಚ್ಚಿಸಲು ನೆರವಾಗುತ್ತದೆ. ಜೊತೆಗೆ, ಸಕಾರಾತ್ಮಕ ಮನೋಭಾವ ಒತ್ತಡವನ್ನು ಕಡಿಮೆ ಮಾಡಿ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಲು ಸಹಕಾರಿಯಾಗುತ್ತದೆ.

**ಮಾನಸಿಕ ಆರೋಗ್ಯ, ದೈಹಿಕ ಆರೋಗ್ಯ ಹಾಗೂ ಸಾಮಾಜಿಕ ಆರೋಗ್ಯದಲ್ಲಿ ಸಕಾರಾತ್ಮಕ ಚಿಂತನೆಯ ಪಾತ್ರ :**

1. **ಮಾನಸಿಕ ಆರೋಗ್ಯದಲ್ಲಿ ಸಕಾರಾತ್ಮಕ ಚಿಂತನೆ :** ಸಕಾರಾತ್ಮಕ ಚಿಂತನೆ ಮನಸ್ಸಿಗೆ ಶಾಂತಿ ಮತ್ತು ಸಮತೋಲನವನ್ನು ನೀಡುತ್ತದೆ. ನಕಾರಾತ್ಮಕ ಭಾವನೆಗಳು, ಆತಂಕ ಮತ್ತು ಒತ್ತಡವನ್ನು ಕಡಿಮೆ ಮಾಡಲು ಇದು ಸಹಾಯ ಮಾಡುತ್ತದೆ. ಸಮಸ್ಯೆಗಳು ಬಂದಾಗ ನಿರಾಶೆಯಾಗದೇ ಪರಿಹಾರ ಹುಡುಕುವ ಮನೋಭಾವ ಬೆಳೆದು, ಆತ್ಮವಿಶ್ವಾಸ ಮತ್ತು ಧೈರ್ಯ ಹೆಚ್ಚುತ್ತದೆ.
2. **ದೈಹಿಕ ಆರೋಗ್ಯದಲ್ಲಿ ಸಕಾರಾತ್ಮಕ ಚಿಂತನೆ :** ಮನಸ್ಸಿನ ಸ್ಥಿತಿ ದೇಹದ ಮೇಲೂ ಪರಿಣಾಮ ಬೀರುತ್ತದೆ. ಸಕಾರಾತ್ಮಕ ಮನೋಭಾವ ಇರುವವರು ಸಾಮಾನ್ಯವಾಗಿ ಒತ್ತಡವನ್ನು ಕಡಿಮೆ ಅನುಭವಿಸುತ್ತಾರೆ, ಇದರಿಂದ ರಕ್ತದೊತ್ತಡ, ನಿದ್ರೆ ಮತ್ತು ಒಟ್ಟಾರೆ ಆರೋಗ್ಯ ಉತ್ತಮವಾಗಿರಲು ಸಹಾಯವಾಗುತ್ತದೆ. ಉತ್ಸಾಹ ಮತ್ತು ಚೈತನ್ಯ ಹೆಚ್ಚುವ ಮೂಲಕ ಆರೋಗ್ಯಕರ ಜೀವನಶೈಲಿಯನ್ನು ಪಾಲಿಸಲು ಪ್ರೇರಣೆ ದೊರೆಯುತ್ತದೆ.
3. **ಸಾಮಾಜಿಕ ಆರೋಗ್ಯದಲ್ಲಿ ಸಕಾರಾತ್ಮಕ ಚಿಂತನೆ :** ಸಕಾರಾತ್ಮಕ ಚಿಂತನೆ ಹೊಂದಿರುವವರು ಇತರರೊಂದಿಗೆ ಸುಲಭವಾಗಿ ಹೊಂದಿಕೊಳ್ಳುತ್ತಾರೆ. ಸಹಾನುಭೂತಿ, ಸಹಕಾರ ಮತ್ತು ಸ್ನೇಹಪೂರ್ಣ ವರ್ತನೆ ಹೆಚ್ಚುತ್ತದೆ. ಇದರಿಂದ ಕುಟುಂಬ, ಸ್ನೇಹಿತರು ಹಾಗೂ ಸಹೋದ್ಯೋಗಿಗಳೊಂದಿಗೆ ಉತ್ತಮ ಸಂಬಂಧ ಬೆಳೆದು, ಸಮಾಜದಲ್ಲಿ ಒಳ್ಳೆಯ ವಾತಾವರಣ ನಿರ್ಮಾಣವಾಗುತ್ತದೆ.

**ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಆರೋಗ್ಯದ ನಿರ್ವಹಣೆಗೆ ಸಕಾರಾತ್ಮಕ ಚಿಂತನೆ ಅವಶ್ಯಕತೆ :**

ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಆರೋಗ್ಯ ಪರಸ್ಪರ ಸಂಬಂಧ ಹೊಂದಿವೆ. ಮನಸ್ಸು ಶಾಂತವಾಗಿದ್ದರೆ ದೇಹ ಆರೋಗ್ಯವಾಗಿರುತ್ತದೆ, ಉತ್ತಮ ಆರೋಗ್ಯ ಮತ್ತು ಸಮತೋಲನ ಮನೋಭಾವವು ಸಾಮಾಜಿಕ ಸಂಬಂಧಗಳನ್ನೂ ಉತ್ತಮಗೊಳಿಸುತ್ತದೆ. ಈ ಮೂರೂ ಕ್ಷೇತ್ರಗಳ ಸಮತೋಲನವನ್ನು ಕಾಯ್ದುಕೊಳ್ಳಲು ಸಕಾರಾತ್ಮಕ ಚಿಂತನೆ ಅತ್ಯಂತ ಅಗತ್ಯವಾಗಿದೆ.

**ಸಕಾರಾತ್ಮಕ ಚಿಂತನೆಯ ಮಾರ್ಗದರ್ಶಿ ಸೂತ್ರಗಳು :**

ಸಕಾರಾತ್ಮಕ ಚಿಂತನೆ ಎಂದರೆ ನಮ್ಮ ಸಾಮರ್ಥ್ಯಗಳ ಮೇಲೆ ನಂಬಿಕೆ ಇಟ್ಟುಕೊಂಡು, ಯಾವುದೇ ಪರಿಸ್ಥಿತಿಯಲ್ಲಿ ಉತ್ತಮ ಅಂಶಗಳನ್ನು ಗಮನಿಸುವ ಮನೋಭಾವವನ್ನು ಬೆಳೆಸಿಕೊಳ್ಳುವುದಾಗಿದೆ. ವಿಫಲತೆಯನ್ನು ಅಂತಿಮವೆಂದು ನೋಡದೇ ಪಾಠವಾಗಿ ಸ್ವೀಕರಿಸಿ ಮುಂದುವರೆಯುವುದು, ಉತ್ತಮ ಸಂಗಡಿಗರನ್ನು ಆಯ್ಕೆ ಮಾಡುವುದು ಹಾಗೂ ಸ್ವಯಂ ಪ್ರೇರಣೆಯನ್ನು ಬೆಳೆಸಿಕೊಳ್ಳುವುದು ಇದಕ್ಕೆ ಸಹಾಯಕವಾಗುತ್ತದೆ. ಜೊತೆಗೆ ಸಹನೆ ಮತ್ತು ಸಮತೋಲನವನ್ನು ಕಾಪಾಡಿಕೊಳ್ಳುವುದು, ಕೃತಜ್ಞತೆಯ ಮನೋಭಾವವನ್ನು ಹೊಂದುವುದು ಮತ್ತು ನಿರಂತರ ಕಲಿಕೆಯ ಮೂಲಕ ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬಹುದು. ಆರೋಗ್ಯಕರ ಜೀವನ ಶೈಲಿಯನ್ನು ಅನುಸರಿಸಿ, ಸ್ಪಷ್ಟ ಗುರಿಯೊಂದಿಗೆ ಉದ್ದೇಶಪೂರ್ಣವಾಗಿ ಬದುಕುವುದ–ರಿಂದ ಸಕಾರಾತ್ಮಕ ಚಿಂತನೆ ಮತ್ತಷ್ಟು ಬಲವಾಗುತ್ತದೆ. ಈ ಹಿನ್ನೆಲೆಯಲ್ಲಿ ಈ ಸಕಾರಾತ್ಮಕ ಚಿಂತನೆಗೆ 17 ಮಾರ್ಗದರ್ಶಿ ಸೂತ್ರಗಳು ಈ ಕೆಳಗಿನಂತಿವೆ;

1. **ನಿಮ್ಮ ಕ್ಯಾಲೆಂಡರ್ ಅನ್ನು ರದ್ದುಗೊಳಿಸಿ :** ಯೋಜನೆಗಳು ವಿಫಲವಾದಾಗ ನಿರಾಶರಾಗುವುದಕ್ಕಿಂತ, ಹೊಸ ಅವಕಾಶಗಳನ್ನು ಕಾಣುವ ಮನೋಭಾವವನ್ನು ಬೆಳೆಸಿಕೊಳ್ಳಿ. ಜೀವನದ ಅನಿಶ್ಚಿತತೆಯನ್ನು ಸ್ವೀಕರಿಸುವುದು ನಿಮ್ಮ ಮಾನಸಿಕ ದೃಢತೆಯನ್ನು ಹೆಚ್ಚಿಸುತ್ತದೆ. ಇಂದಿನ ಕ್ಷಣವನ್ನು ಸೃಜನಾತ್ಮಕವಾಗಿ ಉಪಯೋಗಿಸುವುದು ವ್ಯಕ್ತಿತ್ವವನ್ನು ಸಮತೋಲನಗೊಳಿಸುತ್ತದೆ.

2. **ನಿಮ್ಮ ಗುರಿ/ಮಹತ್ವಾಂಕ್ಷೆಯನ್ನು ಊಹಿಸಿಕೊಳ್ಳಿ :** ನಿಮ್ಮ ಭವಿಷ್ಯದ ಗುರಿಗಳನ್ನು ಸ್ಪಷ್ಟವಾಗಿ ಕಲ್ಪಿಸಿಕೊಳ್ಳುವುದು ಯಶಸ್ಸಿನ ಮೊದಲ ಹೆಜ್ಜೆಯಾಗಿದೆ. ದೃಶ್ಯೀಕರಣವು ನಿಮ್ಮ ಮನಸ್ಸನ್ನು ಗುರಿಯತ್ತ ಕೇಂದ್ರೀಕರಿಸಿ, ಸರಿಯಾದ ನಿರ್ಧಾರಗಳನ್ನು ಕೈಗೊಳ್ಳಲು ಪ್ರೇರೇಪಿಸುತ್ತದೆ. ನಿರಂತರವಾಗಿ ಗುರಿಯನ್ನು ಮನಸ್ಸಿನಲ್ಲಿ ಇಡುವುದು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತದೆ.

3. **ಸಂತೋಷವನ್ನುಂಟು ಮಾಡುವ ಚಟುವಟಿಕೆಗಳನ್ನು ಹುಡುಕಿ :** ಸಂತೋಷವು ಸ್ವತಃ ಬರುವುದಿಲ್ಲ; ಅದನ್ನು ನಾವು ಸೃಷ್ಟಿಸಬೇಕು ಎಂಬ ಅರಿವು ಬೆಳೆಸಿಕೊಳ್ಳಬೇಕು. ಚಿಕ್ಕಚಿಕ್ಕ ಆಸಕ್ತಿಗಳು ಹಾಗೂ ಹವ್ಯಾಸಗಳು ನಿಮ್ಮ ಮನಸ್ಸಿಗೆ ಚೈತನ್ಯವನ್ನು ನೀಡುತ್ತವೆ. ಇವು ವ್ಯಕ್ತಿತ್ವದಲ್ಲಿ ಸಕಾರಾತ್ಮಕ ಶಕ್ತಿಯನ್ನು ತುಂಬುತ್ತವೆ.

4. **ಕೃತಜ್ಞತೆಯ ನಿಯತಕಾಲಿಕೆ :** ಪ್ರತಿದಿನ ಕೃತಜ್ಞತೆಯನ್ನು ವ್ಯಕ್ತಪಡಿಸುವುದು ಜೀವನದ ಸಣ್ಣ ಸಂತೋಷಗಳನ್ನು ಗುರುತಿಸಲು ಸಹಾಯ ಮಾಡುತ್ತದೆ. ಇದು ನಿಮ್ಮ ಮನಸ್ಸನ್ನು ಧನಾತ್ಮಕ ದಿಕ್ಕಿನಲ್ಲಿ ತರಬೇತುಗೊಳಿಸುತ್ತದೆ. ಕೃತಜ್ಞತೆ ಅಭ್ಯಾಸವು ಆತ್ಮಸಂತೋಷ ಮತ್ತು ಸಮತೋಲನವನ್ನು ಹೆಚ್ಚಿಸುತ್ತದೆ.

5. **ಬೇರೆಯವರಿಗೆ ಏನಾದರೂ ಮಾಡಿ :** ಇತರರಿಗೆ ಸಹಾಯ ಮಾಡುವುದರಿಂದ ಒಳಗಿನ ಸಂತೃಪ್ತಿ ಹೆಚ್ಚುತ್ತದೆ. ಸೇವಾ ಮನೋಭಾವವು ವ್ಯಕ್ತಿತ್ವವನ್ನು ಮಾನವೀಯ ಮತ್ತು ದಯಾಳುವಾಗಿಸುತ್ತದೆ. ಕೊಡುವ ಮನಸ್ಸು ದೀರ್ಘಕಾಲಿಕ ಸಂತೋಷಕ್ಕೆ ಕಾರಣವಾಗುತ್ತದೆ.

6. **ಧ್ಯಾನ ಮಾಡಿ :** ಧ್ಯಾನವು ಮನಸ್ಸನ್ನು ಶಾಂತಗೊಳಿಸಿ ಏಕಾಗ್ರತೆಯನ್ನು ಹೆಚ್ಚಿಸುತ್ತದೆ. ಇದು ನಕಾರಾತ್ಮಕ ಆಲೋಚನೆಗಳನ್ನು ಕಡಿಮೆ ಮಾಡಿ ಒಳಗಿನ ಸಮತೋಲನವನ್ನು ನಿರ್ಮಿಸುತ್ತದೆ. ನಿಯಮಿತ ಧ್ಯಾನವು ಆತ್ಮಜಾಗೃತಿಯನ್ನು ವೃದ್ಧಿಸುತ್ತದೆ.

7. **ಜಗತ್ತು ಅಸ್ತವ್ಯಸ್ತವಾಗಿದೆ ಎಂದು ಒಪ್ಪಿಕೊಳ್ಳಿ :** ನಿಯಂತ್ರಣಕ್ಕೆ ಬಾರದ ವಿಷಯಗಳನ್ನು ಸ್ವೀಕರಿಸುವುದು ಮಾನಸಿಕ ಶಾಂತಿಗೆ ಮುಖ್ಯ. ಇದು ಅನಗತ್ಯ ಒತ್ತಡವನ್ನು ಕಡಿಮೆ ಮಾಡುತ್ತದೆ. ನೀವು ಮಾಡಬಹುದಾದುದರ ಮೇಲೆ ಗಮನ ಹರಿಸುವುದು ನಿಮ್ಮ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

8. **ಪ್ರಕೃತಿಗೆ ತೆರೆದುಕೊಳ್ಳಿ :** ಪ್ರಕೃತಿಯೊಂದಿಗೆ ಸಮಯ ಕಳೆಯುವುದು ಮನಸ್ಸಿಗೆ ಶಾಂತಿ ಮತ್ತು ತಾಜಾತನ ನೀಡುತ್ತದೆ. ಇದು ಒತ್ತಡವನ್ನು ಕಡಿಮೆ ಮಾಡಿ ಧನಾತ್ಮಕ ಚಿಂತನೆಗೆ ಉತ್ತೇಜನ ನೀಡುತ್ತದೆ. ಪ್ರಕೃತಿಯೊಂದಿಗೆ ಸಂಪರ್ಕ ವ್ಯಕ್ತಿತ್ವವನ್ನು ಸಮತೋಲನಗೊಳಿಸುತ್ತದೆ.

9. **ಋಣಾತ್ಮಕ ಪಕ್ಷಪಾತವನ್ನು ನಿಯಂತ್ರಿಸಿ :** ನಕಾರಾತ್ಮಕ ಚಿಂತನೆಗೆ ಹೆಚ್ಚು ಒತ್ತು ಕೊಡುವ ಪ್ರವೃತ್ತಿಯನ್ನು ಅರಿತು ಅದನ್ನು ನಿಯಂತ್ರಿಸಲು ಪ್ರಯತ್ನಿಸಬೇಕು. ಧನಾತ್ಮಕ ಘಟನೆಗಳ ಮೇಲೆ ಗಮನ ಹರಿಸುವುದರಿಂದ ಮನಸ್ಸು ತರಬೇತುಗೊಳ್ಳುತ್ತದೆ. ಇದು ದೃಷ್ಟಿಕೋನವನ್ನು ಸಮತೋಲನಗೊಳಿಸುತ್ತದೆ.

10. **ಕೃತಜ್ಞತಾ ಪತ್ರ ಬರೆಯಿರಿ :** ನಿಮಗೆ ಸಹಾಯ ಮಾಡಿದವರನ್ನು ಮೆಚ್ಚಿಕೊಳ್ಳುವುದು ಸಂಬಂಧಗಳನ್ನು ಬಲಪಡಿಸುತ್ತದೆ. ಕೃತಜ್ಞತೆಯನ್ನು ವ್ಯಕ್ತಪಡಿಸುವುದು ನಿಮ್ಮ ಮನಸ್ಸಿಗೆ ಸಂತೋಷವನ್ನು ನೀಡುತ್ತದೆ. ಇದು ನಿಮ್ಮ ವ್ಯಕ್ತಿತ್ವದಲ್ಲಿ ವಿನಯ ಮತ್ತು ಗೌರವವನ್ನು ಬೆಳೆಸುತ್ತದೆ.

11. **ನಿಮ್ಮ ಭಾವನೆಗಳ ಜವಾಬ್ದಾರಿ ತೆಗೆದುಕೊಳ್ಳಿ :** ನಮ್ಮ ಭಾವನೆಗಳನ್ನು ನಾವು ನಿಯಂತ್ರಿಸಬಹುದು ಎಂಬ ಅರಿವು ವ್ಯಕ್ತಿತ್ವ ವಿಕಸನಕ್ಕೆ ಮುಖ್ಯ. ಪ್ರತಿಕ್ರಿಯೆಯನ್ನು ಜಾಣ್ಮೆಯಿಂದ ಆಯ್ಕೆ ಮಾಡುವುದು ಮನಸ್ಸಿನ ಶಕ್ತಿಯನ್ನು ಹೆಚ್ಚಿಸುತ್ತದೆ. ಇದು ಆತ್ಮನಿಯಂತ್ರಣವನ್ನು ಅಭಿವೃದ್ಧಿಪಡಿಸುತ್ತದೆ.

12. **ಆರೋಗ್ಯಕರ ಜೀವನಶೈಲಿ ಅಳವಡಿಸಿ :** ವ್ಯಾಯಾಮ, ಸರಿಯಾದ ಆಹಾರ ಮತ್ತು ನಿದ್ರೆ ಮಾನಸಿಕ ಹಾಗೂ ದೈಹಿಕ ಆರೋಗ್ಯಕ್ಕೆ ಆಧಾರ. ಆರೋಗ್ಯಕರ ದೇಹವು ಧನಾತ್ಮಕ ಮನಸ್ಸಿಗೆ ಕಾರಣವಾಗುತ್ತದೆ. ಇದು ಒಟ್ಟಾರೆ ಜೀವನದ ಗುಣಮಟ್ಟವನ್ನು ಹೆಚ್ಚಿಸುತ್ತದೆ.

Swabhimani Sahakari, Kannada, English Monthly, Publishing Date 5th, Posting Day 8th
posted at Bangalore PSO, Mysore Road, Bangalore-560026
Registered No. KA/BGW/1744/2023-2025 RNI NO. KARBIL-2004/18001/Pages 28
Permitted to Post under Periodical Post as per the Letter G3/14/RNP/2024-25 DATE 29.09.2025



13. **ಮುಗುಳು ನಗು ಮತ್ತು ಧೈರ್ಯದಿಂದ ಎದುರಿಸಿ :** ನಗು ಮನಸ್ಸಿಗೆ ಹಿತಕರ ರಾಸಾಯನಿಕಗಳನ್ನು ಬಿಡುಗಡೆ ಮಾಡುತ್ತದೆ. ಸವಾಲುಗಳನ್ನು ಧೈರ್ಯದಿಂದ ಎದುರಿಸುವುದು ನಿಮ್ಮ ಒಳಶಕ್ತಿಯನ್ನು ಹೆಚ್ಚಿಸುತ್ತದೆ. ಆಶಾವಾದವು ಯಶಸ್ಸಿಗೆ ದಾರಿ ಮಾಡಿಕೊಡುತ್ತದೆ.

14. **ನಕಾರಾತ್ಮಕತೆಯನ್ನು ಸಮತೋಲನದಿಂದ ಸ್ವೀಕರಿಸಿ :** ಜೀವನದಲ್ಲಿ ನಕಾರಾತ್ಮಕತೆ ಸಹ ಸಹಜವೆಂಬುದನ್ನು ಅರಿತುಕೊಳ್ಳಬೇಕು. ಅದನ್ನು ಅನುಭವಿಸಿ ಮುಂದೆ ಸಾಗುವ ಶಕ್ತಿ ವ್ಯಕ್ತಿತ್ವವನ್ನು ಗಟ್ಟಿಗೊಳಿಸುತ್ತದೆ. ಸಮತೋಲನದ ದೃಷ್ಟಿಕೋನವು ಬೆಳವಣಿಗೆಗೆ ನೆರವಾಗುತ್ತದೆ.

15. **ಉತ್ತೇಜಕ ಮಂತ್ರವನ್ನು ಇಟ್ಟುಕೊಳ್ಳಿ :** ಸ್ವತಃ ನಿಮ್ಮನ್ನು ಪ್ರೇರೇಪಿಸುವ ಮಾತುಗಳು ಆತ್ಮವಿಶ್ವಾಸವನ್ನು ಹೆಚ್ಚಿಸುತ್ತವೆ. ಸಂಕಷ್ಟದ ಸಮಯದಲ್ಲಿ ಇದು ನಿಮ್ಮ ಮನೋಬಲವನ್ನು ಉಳಿಸುತ್ತದೆ. ಧನಾತ್ಮಕ ಸ್ವಯಂ ಸಂಭಾಷಣೆ ವ್ಯಕ್ತಿತ್ವವನ್ನು ಬಲಪಡಿಸುತ್ತದೆ.

16. **ಇದು ಒಂದು ಪ್ರಯಾಣ ಎಂದು ನೆನಪಿಡಿ :** ಸಕಾರಾತ್ಮಕತೆಯು ಒಂದು ದಿನದಲ್ಲಿ ಬರುತ್ತಿಲ್ಲ; ಅದು ನಿರಂತರ ಅಭ್ಯಾಸದ ಫಲ. ಧೈರ್ಯ ಮತ್ತು ಸಹನೆಯೊಂದಿಗೆ ಮುಂದುವರಿದರೆ ಮನಸ್ಸು ಅದಕ್ಕೆ ಹೊಂದಿಕೊಳ್ಳುತ್ತದೆ. ಇದು ವ್ಯಕ್ತಿತ್ವದ ದೀರ್ಘಕಾಲಿಕ ವಿಕಸನಕ್ಕೆ ಸಹಾಯಕ.

17. **ನಿಮ್ಮ ಭವಿಷ್ಯವನ್ನು ನಂಬಿ :** ಭವಿಷ್ಯದ ಬಗ್ಗೆ ನಂಬಿಕೆ ಹೊಂದುವುದು ಮನಸ್ಸಿಗೆ ಆಶಾವಾದ ನೀಡುತ್ತದೆ. ಅನಾವಶ್ಯಕ ಚಿಂತೆಯನ್ನು ಬಿಡುವುದು ಪ್ರಸ್ತುತದಲ್ಲಿ ಬದುಕಲು ಸಹಾಯ ಮಾಡುತ್ತದೆ. ವಿಶ್ವಾಸವು ನಿಮ್ಮ ನಿರ್ಧಾರಗಳನ್ನು ದೃಢಗೊಳಿಸುತ್ತದೆ.

**ಉಪ ಸಂಹಾರ :**

ಒಟ್ಟಾರೆ, ಸಕಾರಾತ್ಮಕ ಚಿಂತನೆ ಮಾನಸಿಕ, ದೈಹಿಕ ಮತ್ತು ಸಾಮಾಜಿಕ ಆರೋಗ್ಯಗಳ ಸಮತೋಲನವನ್ನು ಕಾಪಾಡಲು ಅತ್ಯಂತ ಅಗತ್ಯವಾದ ಅಂಶವಾಗಿದೆ. ಇದು ವ್ಯಕ್ತಿಯೊಳಗಿನ ಶಕ್ತಿಯನ್ನು ಬೆಳಗಿಸಿ, ಜೀವನದ ಸವಾಲುಗಳನ್ನು ಆತ್ಮವಿಶ್ವಾಸದಿಂದ ಎದುರಿಸುವ ಸಾಮರ್ಥ್ಯವನ್ನು ನೀಡುತ್ತದೆ. ಸಕಾರಾತ್ಮಕ ಮನೋಭಾವದಿಂದ ವ್ಯಕ್ತಿ ತನ್ನ ಜೀವನವನ್ನು ಮಾತ್ರವಲ್ಲ, ತನ್ನ ಸುತ್ತಲಿನ ವಾತಾವರಣವನ್ನೂ ಉತ್ತಮಗೊಳಿಸಬಹುದು.

ಮೇಲ್ಕಂಡ ಮಾರ್ಗದರ್ಶಿ ಸೂತ್ರಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ, ವ್ಯಕ್ತಿ ಕ್ರಮೇಣ ಧನಾತ್ಮಕ ಮನೋಭಾವವನ್ನು ಬೆಳೆಸಿಕೊಳ್ಳಲು ಸಾಧ್ಯವಾಗುತ್ತದೆ. ನಿರಂತರ ಅಭ್ಯಾಸ, ಆತ್ಮಜಾಗೃತಿ ಮತ್ತು ಕೃತಜ್ಞತೆಯ ಮನೋಭಾವದ ಮೂಲಕ ಸಕಾರಾತ್ಮಕ ಚಿಂತನೆ ಶಾಶ್ವತ ಸ್ವಭಾವವಾಗಿ ರೂಪುಗೊಳ್ಳುತ್ತದೆ. ಇದು ವ್ಯಕ್ತಿಯ ಜೀವನದಲ್ಲಿ ಸಂತೋಷ, ಸಮತೋಲನ ಮತ್ತು ಯಶಸ್ಸಿಗೆ ದಾರಿ ಮಾಡಿಕೊಡುತ್ತದೆ.

ಆದ್ದರಿಂದ ಪ್ರತಿಯೊಬ್ಬರೂ ಸಕಾರಾತ್ಮಕ ಚಿಂತನೆಗೆ ಆದ್ಯತೆ ನೀಡಬೇಕು. ಇದು ಕೇವಲ ವೈಯಕ್ತಿಕ ಅಭಿವೃದ್ಧಿಗಷ್ಟೇ ಅಲ್ಲ, ಉತ್ತಮ ಕುಟುಂಬ ಮತ್ತು ಸಮಾಜ ನಿರ್ಮಾಣಕ್ಕೂ ಸಹಕಾರಿ. ಸಕಾರಾತ್ಮಕ ಮನೋಭಾವವು ಜೀವನವನ್ನು ಅರ್ಥಪೂರ್ಣ ಹಾಗೂ ಸಂತೃಪ್ತಿಯುತವಾಗಿಸುವ ಶಕ್ತಿಯಾಗಿದೆ.

ಕೇಂದ್ರ ಕಛೇರಿ : "ಸೌಹಾರ್ದ ಸಹಕಾರಿ ಸೌಧ" ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ : 080–23378375–80, 23474408, 23573291
ಸೌಹಾರ್ದ ಸಹಕಾರಿಗಳ ದಾವಾ ಪಂಚಾಯತಿ ನ್ಯಾಯಾಲಯ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಕೇಂದ್ರ ಕಛೇರಿ, ಒಂದನೇ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು ದೂ: 080–23449933/34
ಇ–ಸ್ಟಾಂಪಿಂಗ್ ವಿಭಾಗ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಇ–ಸ್ಟಾಂಪಿಂಗ ವಿಭಾಗ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055
ಬೆಂಗಳೂರು ಪ್ರಾಂತೀಯ ಕಛೇರಿ : "ಸೌಹಾರ್ದ ಸಹಕಾರಿ ಸೌಧ", ನಂ.68, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಪ್ರಾಂತೀಯ ಕಛೇರಿ, ನೆಲ ಮಹಡಿ, 18ನೇ ಅಡ್ಡರಸ್ತೆ, ಮಾರ್ಗೋಸಾ ರಸ್ತೆ, ಮಲ್ಲೇಶ್ವರ, ಬೆಂಗಳೂರು – 560055 ದೂ: 080–23525546.
ಮೈಸೂರು ಪ್ರಾಂತೀಯ ಕಛೇರಿ : ಶಂಕರ ಮಠ ರಸ್ತೆ, 2ನೇ ಕ್ರಾಸ್, ನಟರಾಜ ಸಭಾಭವನದ ಹತ್ತಿರ, ಮೈಸೂರು–570004, ದೂ: 0821–2332299
ಬೆಳಗಾವಿ ಪ್ರಾಂತೀಯ ಕಛೇರಿ : #1119/ಬಿ, ಕಣಬರ್ಗಿ ಇಂಡಸ್ಟ್ರಿಯಲ್ ಏರಿಯಾ, ರೂರಲ್ ಆಯುರ್ವೇದಿಕ ಕಾಲೇಜ ಹತ್ತಿರ, ಆಟೋ ನಗರ, ಬೆಳಗಾವಿ–590015 ದೂರವಾಣಿ: 0831–2401551.
ಕಲಬುರಗಿ ಪ್ರಾಂತೀಯ ಕಛೇರಿ : # 2284, ಕಾಡಾ ಕಛೇರಿ ಹತ್ತಿರ, ಧರಿಯಾಪುರ ಕೊಟನೂರ, ಜಿಡಿಎ ಬಡಾವಣೆ, ಕಲಬುರಗಿ–585102. ದೂ: 08472–270222

ಇವರಿಗೆ,

Edited, Printed and Published by Sharangouda G. Patil - Managing Director, on behalf of karnataka state Souharda Federal Co operative Ltd., #68, 17th & 18th Cross, Margosa Road, Malleshwaram, Bengaluru-560 003